ಜನಪದ ವಿಚಾರ


ಬೆಲೆ ೧೦-೦೦

ಚಿಂತನ * ದರ್ಶನ * ವಿಮರ್ಶನ

ಜನಪದ ಸೇವಾ ಟ್ರಸ್ಟ್ ಪ್ರಕಟಣೆ

ತಿಂಗಳ ವೈಚಾರಿಕ ಡೈಜೆಸ್ಟ್

ಸಂಪುಟ-೧೨ ಆಗಸ್ಟ್-೨೦೧೧ ಸಂಚಿಕೆ-೧



ಗಾಂಧೀ ವಿಚಾರ ಮತ್ತು ಸರ್ವೋದಯ ಕ್ರಾಂತಿ

ಜನಪದ ವಿಚಾರದಲ್ಲಿ

ಅಗಸ್ಟ್ - ೨೦೧೧

ಜನಪದ ವಿಚಾರ

ತಿಂಗಳ ವೈಚಾರಿಕ ಡೈಜೆಸ್ಟ್

ಅಗಸ್ಟ್ – ೨೦೧೧
ಸಂಪುಟ – ೧೨
ಸಂಚಿಕೆ – ೧

ಸಂಪಾದಕ
ಸುರೇಂದ್ರ ಕೌಲಗಿ

ಸಲಹಾ ಸಮಿತಿ
ಜನಪದ ಸೇವಾ ಟ್ರಸ್ಟ್
ಧರ್ಮದರ್ಶಿ ಮಂಡಳಿ

ಚಂದಾ ವಿವರ
ವಾರ್ಷಿಕ : ರೂ ೧೦೦/-
ಬಿಡಿ ಸಂಚಿಕೆ : ರೂ ೧೦/-

ಸಂಪರ್ಕ ವಿಳಾಸ
ಜನಪದ ಸೇವಾ ಟ್ರಸ್ಟ್(ರಿ)
ಮೇಲುಕೋಟೆ–೫೭೧೪೩೧
ಜಿಲ್ಲಾ ಮಂಡ್ಯ

08236 316344

e-mail : janapada@yahoo.com
web: janapada.net

ನಾವು ನರರು

ಸೊಕ್ಕುತಲೆಯ ರೆಕ್ಕೆ ಬಲಿಯ
ದೂದಿ ನಿಂತ ಕೀಟ
ನಾವು ನರರು; ನೂರು ಕನಸು
ಕುಣಿವ ದಾರುಪೀಠ!

ಇರುವ ಮೂರು ದಿನಕೆ ನೂರು
ಕಲಹ, ಕರುಬು, ಕಾಟ;
ನೂರು ಹಸಿವು, ನೂರು ದಾಹ,
ವಿಷಯದೆಂಜಲೂಟ.

ಸ್ವಾರ್ಥದ ಸೆರೆಮನೆಯಲ್ಲಿಯೆ
ಒಲಿವ, ನಲಿವ ಬೇಟ;
ಎದೆಗು ಎದೆಗು ನಡುವೆ ಕಡಲು!
ಎಂಥ ಹೃದಯ ಕೂಟ!

ಒಂದೆ ಬೆದೆಗೆ ನೂರು ತರದ
ಕಾಳ ಬೆಳೆವ ಹೂಟ;
ಬಂಜೆ ಹೂವು, ಬರಿಯ ನೋವು
ಬೆಳೆಯುವಂಥ ತೋಟ.

ಎದೆಯು ಬರಿದು, ಬಾಳು ಬರಿದು,
ಬರಿದು ನಮ್ಮ ನೋಟ;
ಅಳುವು ನಗುವು, ಸರಸ ವಿರಸ
ಕಣ್ಣು ಮುಚ್ಚಲಾಟ.
ಸಾವಿನೆಡೆಗೆ ಅಂತು ಇಂತು
ನಮ್ಮ ಬಾಳಿನೋಟ!

– ಗೋಪಾಲಕೃಷ್ಣ ಅಡಿಗ

ವಿಚಾರ ದೀಪ್ತಿ

ಬುದ್ಧ ಬಸವಣ್ಣ ಗಾಂಧಿ.... ಎಲ್ಲರೂ ಬಾಯಲ್ಲಿರುತ್ತಾರೆ, ಆದರೆ ಧರ್ಮದ ಮೂಲ ಆಶಯವಾದ ನಿಧಾನ ನಡಿಗೆ, ನಿಜವಾದ ತಪಸ್ಸು, ನಿಜವಾದ ಅಂತರ್ಮುಖತೆ ಅವರ ಬದುಕಿನಿಂದ ಮರೆಯಾಗಿರುತ್ತವೆ. ಎಲ್ಲ ಧರ್ಮಗುರುಗಳೂ, ಧಾವಂತವನ್ನು ನಿರ್ವಹಿಸುವುದು ಹೇಗೆಂದು ಇತರರಿಗೆ ಪಾಠ ಹೇಳತೊಡಗುತ್ತಾರೆ.

ಧಾವಂತರಹಿತ ಬದುಕಿನತ್ತ ತೆರಳು ಎಂದು ಹೇಳಬೇಕೆಂಬುದನ್ನು ಮರೆತುಬಿಡುತ್ತಾರೆ. ಮಾತ್ರವಲ್ಲ ತಾವೂ ಧಾವಂತಪಡತೊಡಗುತ್ತಾರೆ. ಅನುಭವಹೀನ ಆವೇಗವು ಸೃಷ್ಟಿಸುತ್ತಿರುವ ಇಂದಿನ ಆರ್ಥಿಕ ಭ್ರಷ್ಟತೆ, ಧಾರ್ಮಿಕ ಭ್ರಷ್ಟತೆ, ಸಾಮಾಜಿಕ ವಿಘಟನೆ ಹಾಗೂ ನೈತಿಕ ದ್ವಂದ್ವಗಳನ್ನು ಧರ್ಮಗುರುಗಳು ನಿರ್ವಹಿಸುವುದು ಹೇಗೆ ಸಾಧ್ಯ? ಯಾವ ಧರ್ಮಗುರು ತಾನೇ ದೈಹಿಕಶ್ರಮದ ಜೀವನಕ್ಕೆ ಹಿಂದಿರುಗು ಎಂದು ಧೈರ್ಯದಿಂದ ಹೇಳಿಯಾನು? ಯಾವ ಗುರು ತಾನೆ, ನೀನು ಕಟ್ಟುತ್ತಿರುವ ಈ ಬೃಹತ್ ಕೈಗಾರಿಕಾ ಸ್ಥಾವರವನ್ನು ನುಚ್ಚುನೂರು ಮಾಡು ಎಂದು ಹೇಳಿಯಾನು? ಎಲ್ಲಾ ಧರ್ಮಗುರುಗಳನ್ನೂ ಸಲಹುತ್ತಿರುವುದು, ಅನುಭವಹೀನ ಆವೇಗವು ಸೃಷ್ಟಿಸಿರುವ ಸಂಪತ್ತೇ ಹೌದು.

ನಮ್ಮ ಅಸಹಜ ಬದುಕಿನ ನಿಜವಾದ ಬೆಲೆಯೆಷ್ಟು? ವಿಮಾನಯಾನವನ್ನೇ ತೆಗೆದುಕೊಳ್ಳಿ. ಅದರ ಬೆಲೆಯೆಷ್ಟು? ಹೆಚ್ಚೆಂದರೆ, ಅದೆಷ್ಟೋ ರುಪಾಯಿಗಳು, ಅಥವಾ ಡಾಲರುಗಳು, ಅಥವಾ ಕ್ರೋನರುಗಳು ಎಂದು ಹೇಳಿಯೇವು. ಅದು ನಿಜವಾದ ಬೆಲೆಯಲ್ಲ. ಪ್ರತಿಯೊಂದು ಅಸಹಜ ನಡೆಯೂ ಪ್ರಕೃತಿಯ ಮೇಲೆ ನಡೆಸುವ ದಾಳಿಯಾಗಿರುತ್ತದೆ. ಪ್ರಕೃತಿ, ಪರಿಸರ, ಪ್ರಾಣಿಪಕ್ಷಿಗಳು, ಮಿಕ್ಕಮಾನವರು, ಅಷ್ಟೇ ಏಕೆ, ನಮ್ಮದೇ ಅಂತರಂಗದ ಮೇಲೆ ನಾವು ಅವಿರತವಾಗಿ ದಾಳಿ ನಡೆಸುತ್ತಿರುತ್ತೇವೆ. ಎಲ್ಲ ಮಹಾಯುದ್ಧಗಳಿಗಿಂತ ಘೋರವಾದ ದಾಳಿಯಿದು.

ಆದರೆ ಅಸಹಜ ಬದುಕಿಗೆ ಅಪಾರವಾದ ಆಕರ್ಷಣೆಯಿದೆ, ಪತಂಗಕ್ಕೆ ದೀಪದ ಆಕರ್ಷಣೆಯಿರುವಂತೆ ಅದು. ಮೀನಿಗೆ ಹಾರುವ ಆಕರ್ಷಣೆಯಾದರೆ ಏನಾದೀತು ಯೋಚಿಸಿ? ಅಥವಾ ಆಮೆಗೆ ಮೊಲದ ಆಕರ್ಷಣೆಯಾದರೆ ಏನಾದೀತು ಯೋಚಿಸಿ? ಇಲಿಗೆ ಆನೆಯಾಗುವ ಆಸೆಯಾದರೆ ಏನಾದೀತು ಯೋಚಿಸಿ? ಅಸಹಜ ಬದುಕಿನ ಆಕರ್ಷಣೆಯೆಂಬುದು ಸಾವಿಗೆ ಆಹ್ವಾನ! ಅಸಹಜ ಬದುಕು ಸೃಷ್ಟಿಸಿರುವ ರೋಗಗಳನ್ನು (ದೈಹಿಕ ರೋಗ, ಮಾನಸಿಕ ರೋಗ, ನೈತಿಕ ರೋಗ, ಪರಿಸರದರೋಗ.... ಇತ್ಯಾದಿ) ವಿಜ್ಞಾನದ ಮೂಲಕ ಪರಿಹರಿಸಿಕೊಳ್ಳುತ್ತೇವೆ ಎಂದು ಯಾರಾದರೂ ನಂಬಿದ್ದರೆ ಅದು ಮೂರ್ಖತನವೇ ಸರಿ. ಅಸಹಜ ಬದುಕನ್ನು ಸೃಷ್ಟಿಸುತ್ತಿರುವ ತಂತ್ರಜ್ಞಾನವನ್ನು ಖೈದು ಮಾಡದೆ ಹೋದರೆ, ವಿಜ್ಞಾನವು ವಿಜ್ಞಾನವಾಗಿ ಉಳಿಯುವುದೇ ಇಲ್ಲ.

ಒಟ್ಟು ಕತೆಯ ನೀತಿಯೆಂದರೆ, ಮಾನವರು ದೈಹಿಕಶ್ರಮದ ದುಡಿಮೆಗೆ ಹಿಂತಿರುಗಬೇಕು. ಬೇರೆದಾರಿಯಿಲ್ಲ. ದೈಹಿಕ ಶ್ರಮದ ದುಡಿಮೆಯ ಸುತ್ತಲೇ ನಮ್ಮ ಧಾರ್ಮಿಕತೆ, ನೈತಿಕತೆ, ಸಾಮಾಜಿಕತೆ ಎಲ್ಲವನ್ನೂ ನಾವು ರೂಪಿಸಿಕೊಳ್ಳಬೇಕು. ಆಗ ಮಾತ್ರ ಮನುಕುಲ ಉಳಿದೀತು.

– ಪ್ರಸನ್ನ

ಗಾಂಧೀ ವಿಚಾರ ಮತ್ತು ಸರ್ವೋದಯ ಕ್ರಾಂತಿ

– ಸುರೇಂದ್ರ ಕೌಲಗಿ

ಈ ಇಪ್ಪತ್ತೊಂದನೇ ಶತಮಾನದ ಅಗತ್ಯ ಸರ್ವೋದಯ ಕ್ರಾಂತಿ.

ಇಂದು ಎಲ್ಲೆಲ್ಲೂ ಸತ್ಯಾಗ್ರಹ, ಧರಣಿ, ಮುಷ್ಕರ, ರಸ್ತೆಬಂದ್, ಸಭಾತ್ಯಾಗ, ಆಮರಣ ಉಪವಾಸ, ಪ್ರತಿಭಟನೆ, ಹಿಂಸಾಚಾರ, ಮುಂತಾದವುಗಳು ನಡೆಯುತ್ತಿವೆ. ಇವೆಲ್ಲ ಇಂದಿನ ಸಾಮಾಜಿಕ, ಆರ್ಥಿಕ, ರಾಜಕೀಯ ಸಮಸ್ಯೆಗಳ ಬಗ್ಗೆ ಜನರ ಮನಸ್ಸಿನಲ್ಲಿರುವ ಅಸಂತೋಷ ಮತ್ತು ಕೋಪದ ಸಂಕೇತಗಳಾಗಿವೆ. ಅಲ್ಲದೆ, ಬಗೆಬಗೆಯ ವಾದಗಳೂ ಹುಟ್ಟುತ್ತಿವೆ: ನಕ್ಸಲವಾದ, ಮಾವೋವಾದ, ಲೆನಿನ್‌ವಾದ, ಅಲಖೈದಾವಾದ, ಒಸಾಮಾವಾದ, ಒಬಾಮಾವಾದ, ಬಂಡವಾಳಶಾಹಿವಾದ, ಅಭಿವೃದ್ಧಿವಾದ. ಈ ಎಲ್ಲ ಪ್ರಕಾರದ ವಾದಗಳು ಸಹ ಜನರ ಮನಸ್ಸಿನಲ್ಲಿರುವ, ತೀವ್ರವಾದ ಅಸಂತೋಷ ಮತ್ತು ಕೋಪದ ಸಂಕೇತಗಳಾಗಿವೆ. ಈ ವಾದಗಳು ಸಾಲದೆಂಬಂತೆ ಕೋಮಾಧಾರಿತ ಸಂಘಟನೆಗಳು ಹುಟ್ಟುತ್ತಲೇ ಇವೆ, ಮತ್ತು ರಾಜಕೀಯ ಪಕ್ಷಗಳೂ ಜೊತೆಗೂಡಿವೆ. ಇವೆಲ್ಲ ಏತಕ್ಕಾಗಿ? ತುಂಬ ಕೆಟ್ಟು ಹೋಗಿರುವ ಇಂದಿನ ಸಾಮಾಜಿಕ ವ್ಯವಸ್ಥೆಯನ್ನು ಬದಲಾಯಿಸುವುದಕ್ಕಾಗಿ; ಕುಸಿಯುತ್ತಿರುವ ಮೌಲ್ಯಗಳನ್ನು ಪುನರ್‌ಸ್ಥಾಪಿಸುವುದಕ್ಕಾಗಿ. ಆದರೆ ವಿಕಟ ಸನ್ನಿವೇಶವೇನೆಂದರೆ ಯಾವ-ಯಾವ ಮಾರ್ಗಗಳಿಂದ, ಯಾವ-ಯಾವ ಉಪಾಯಗಳಿಂದ ಬದಲಾವಣೆಗಾಗಿ ಪ್ರಯತ್ನಿಸಲಾಗುತ್ತಿದೆಯೋ ಅವೆಲ್ಲ ಮಾರ್ಗೋಪಾಯಗಳು ಪರಿಸ್ಥಿತಿಯಲ್ಲಿ ಸುಧಾರಣೆ ತರುವುದರ ಬದಲು ಅದನ್ನು ಇನ್ನೂ ವಿಕೋಪಕ್ಕೆ ಒಯ್ಯುತ್ತಿರುವುದು! ಸಾಮಾಜಿಕ ಬದಲಾವಣೆಯ ಒಂದೊಂದು ಪ್ರಯತ್ನವೂ ಬಂಧನಕಾರಿಯಾಗುತ್ತಿದೆ! ಪರಿಣಾಮವಾಗಿ ಪಳಗಿರುವ ಮನೆ ಬಿದ್ದ ಕುಂಟ ಕುರುಡನ ತೆರದಿ ತಳಮಳಿಸುತಿದೆ ಈ ಲೋಕ, ಸುಳಿದಿಲ್ಲವಾವ ಹೊಸ ದರುಶನದ ಹೊಳಪು ಎಂಬ ಡಿ.ವಿ.ಜಿ.ಯವರ ಮಾತು ಸದಾ ಅನುಭವಕ್ಕೆ ಬರುತ್ತಿದೆ.

ಇದು ವರೆಗೆ ಜಗತ್ತು ಕಂಡ ಸಮಾಜವಾದ, ಸಾಮ್ಯವಾದ ಸೋತಿದೆ. ಈ ವಾದಗಳ ಹೆಸರಿನಲ್ಲಿ ಕಟ್ಟಲಾಗಿದ್ದ ದೇಶಗಳು ನೆಲಕಚ್ಚಿವೆ. ಬಂಡವಾಳಶಾಹಿವಾದ ಮಾತ್ರ ಪ್ರಚಂಡವಾಗಿ ಬೆಳೆಯುತ್ತಿದೆ. ಆದರೆ ದುರಂತವೆಂದರೆ ಈ ಬಂಡವಾಳಶಾಹಿವಾದವೇ ಎಲ್ಲ ಸಾಮಾಜಿಕ ವ್ಯವಸ್ಥೆ ಮತ್ತು ಮೌಲ್ಯಗಳ ಅವನತಿಗೆ ಕಾರಣವಾಗುತ್ತಿದೆ. ಹಿಂಸೆ ಬೆಳೆಯಲು ಕಾರಣವಾಗುತ್ತಿದೆ; ಪರಿಸರ ಹಾಗು ಪ್ರಕೃತಿ ವಿನಾಶಕ್ಕೆ ಕಾರಣವಾಗುತ್ತಿದೆ; ಯುದ್ಧಗಳ ಸಿದ್ಧತೆಗೆ ಕಾರಣವಾಗುತ್ತಿದೆ; ವಿನಾಶಕಾರಿ ಶಸ್ತ್ರಾಸ್ತ್ರಗಳ ತಯಾರಿಕೆಗೆ ಪ್ರಚೋದನೆ ನೀಡುತ್ತಿದೆ. ಎಲ್ಲಕ್ಕಿಂತ ಹೆಚ್ಚಾಗಿ ಮಾನವ ಧನಪಿಶಾಚಿಯಾಗಿ ದಾನವನಾಗುತ್ತಿದ್ದಾನೆ. ಈ ಎಲ್ಲ ಸಂಗತಿಗಳು ಸರ್ವನಾಶಕ್ಕೆ ಕಾರಣವಾಗುತ್ತಿವೆ.

ಆದ್ದರಿಂದಲೇ ಇಂದು ಜಗತ್ತಿನ ಮುಂದೆ ಇರುವ ಏಕೈಕ ಪ್ರಶ್ನೆ ಏನೆಂದರೆ, ಸರ್ವನಾಶಬೇಕೇ ಅಥವಾ ಸರ್ವೋದಯ ಬೇಕೇ. ಸರ್ವನಾಶದ ಮಾರ್ಗವಂತೂ ಸರ್ವಥಾ ತ್ಯಾಜ್ಯ. ಮನಷ್ಯನೆಂಬ ಯಾವ ಪ್ರಾಣಿಯೂ ಸರ್ವನಾಶವನ್ನು ಬಯಸಲಾರ. ಆದ್ದರಿಂದ ಇರುವ ಒಂದೇ ಒಂದು ಮಾರ್ಗವೆಂದರೆ ಸರ್ವೋದಯ ಸಮಾಜದ ರಚನೆ, ಅದಕ್ಕಾಗಿ ನಡೆಸಬೇಕಾದ ಸರ್ವೋದಯ ಸಮಾಜ ಕ್ರಾಂತಿ. ಇದುವರೆಗೆ ಆಗಿಹೋದ ಮತ್ತು ಈಗಲೂ ಅಲ್ಲಲ್ಲಿ ನಡೆಯುತ್ತಿರುವ ಕ್ರಾಂತಿಗಳು ಹಿಂಸೆಯಿಂದ ಪ್ರಾರಂಭವಾಗಿ, ಹಿಂಸಾಚಾರದಲ್ಲಿ ನಡೆದು ಕೊನಗೆ ಇನ್ನೊಂದು ಹಿಂಸಾಚಾರಕ್ಕೆ ಕಾರಣವಾಗಿ ತಾತ್ಕಾಲಿಕವಾಗಿ ನಿಂತಿವೆ. ಅಂಥ ಕ್ರಾಂತಿಗಳು ನಡೆದ ಸಮಾಜ ಅಥವಾ ದೇಶದಲ್ಲಿ ಹೊಸ ಸಮಾಜ ಬದಲಾವಣೆಯ ಬಗ್ಗೆ, ರಚನೆಯ ಬಗ್ಗೆ ಅಸ್ಪಷ್ಟತೆಯೇ ಇದೆ, ಗೊಂದಲವೇ ಇದೆ. ಇತ್ತೀಚೆಗೆ ನೇಪಾಲದಲ್ಲಿ, ಇಜಿಪ್ಟ್‌ನಲ್ಲಿ, ಕೊರಿಯಾದಲ್ಲಿ ನಡೆದ ಕ್ರಾಂತಿಗಳು ನಿಶ್ಚಯವಾಗಿ ಮಾದರಿ ಕ್ರಾಂತಿಗಳಾಗಲಾರವು. ಆ ಕ್ರಾಂತಿಗಳ ನಂತರ ಅಲ್ಲಿಯ ಜನರಲ್ಲಿ ಹೊಸ ವ್ಯವಸ್ಥೆಯ ರಚನೆಯ ಬಗ್ಗೆ ಏಕಾಭಿಪ್ರಾಯ ಬರಲಿಲ್ಲ. ಕ್ರಾಂತಿಯಲ್ಲಿ ಎಷ್ಟು ಜನನಾಯಕರು ತೊಡಗಿದ್ದರೋ ಅಷ್ಟು ಪ್ರತ್ಯೇಕ ವಿಚಾರಗಳು ಹುಟ್ಟಿಕೊಂಡವು, ಪ್ರತ್ಯೇಕ ಸಂಘಟನೆಗಳು ರಚಿತವಾದವು, ಪರಿಣಾಮವಾಗಿ ಎಲ್ಲೆಲ್ಲೂ ಹಾಹಾಕಾರ, ಅಶಾಂತಿ!

ಇಂಥ ಸಮಯದಲ್ಲಿ, ಬಂಡವಾಳಶಾಹಿಗೆ ವಿರುದ್ಧವಾಗಿ, ಎಲ್ಲ ಬಗೆಯ ಕ್ರಾಂತಿಗಳಿಗೆ ಪರ್ಯಾಯವಾಗಿ ಇರುವ ಸಾಮಾಜಿಕ, ರಾಜಕೀಯ ಮತ್ತು ಆರ್ಥಿಕ ಕ್ರಾಂತಿಯೆಂದರೆ ಸರ್ವೋದಯ ಸಮಾಜ ರಚನೆಯ ಕ್ರಾಂತಿ. ಈ ಕ್ರಾಂತಿ ಸತ್ಯ-ಅಹಿಂಸೆ-ಕರುಣೆ-ಸಹಕಾರದೊಂದಿಗೆ ಪ್ರಾರಂಭವಾಗಿ, ಅದೇ ನೆಲಗಟ್ಟಿನಲ್ಲಿ ಕ್ರಾಂತಿಯ ಪ್ರಕ್ರಿಯೆ ನಡೆದು ಅಂತಿಮವಾಗಿ ಸರ್ವೋದಯ ಸಮಾಜ ರಚನೆಯಲ್ಲಿ ಪರಿಸಮಾಪ್ತಿಗೊಳ್ಳುತ್ತ ಕ್ರಮೇಣ ಹೆಚ್ಚು-ಹೆಚ್ಚು ಪರಿಶುದ್ಧಗೊಳ್ಳುತ್ತ ಹೋಗುತ್ತದೆ. ಸರ್ವೋದಯ ಸಮಾಜ ರಚನಾ ಕಾಂತ್ರಿಯಲ್ಲಿ ಸಾಧ್ಯ ಮತ್ತು ಸಾಧನಗಳ ಮಧ್ಯದ ಪಾವಿತ್ರ್ಯ ಉಳಿದುಕೊಂಡು ಬರುತ್ತದೆ. ಹಾಗೂ ಅದೂ ಮುಖ್ಯವಾಗಿಯೂ ಉಳಿಯುತ್ತದೆ. ಈ ಗುಣವಿಶೇಷ ಬೇರೆ ಕ್ರಾಂತಿಗಳಲ್ಲಿ ಇಲ್ಲದ್ದರಿಂದಲೇ ಅವು ತಮ್ಮ ಕಾಲುಮುರಿದುಕೊಂಡು ವಿಕಾಲಾಂಗವಾಗಿ ಕುಳಿತಿವೆ. ಆದರೆ ಅಂಥ ಭೀತಿ ಸರ್ವೋದಯ ಸಮಾಜ ಕ್ರಾಂತಿಗೆ ಇಲ್ಲ. ಅದು ಯಾವಾಗಲೂ ದೃಢ, ನಿಶ್ಚಲ ಮತ್ತು ನವನವೀನ.

ಸರ್ವೋದಯ ಸಮಾಜ ರಚನೆಯ ಕ್ರಾಂತಿಯ ವಿಚಾರವನ್ನು ಹುಟ್ಟು ಹಾಕಿದವ ಜಗತ್ತನ್ನೇ ತನ್ನ ಪದತಲದಲ್ಲಿಟ್ಟುಕೊಳ್ಳಬೇಕೆಂದು ಬಯಸಿದ್ದ ಹಿಟ್ಲರ್, ಮೆಕೆಂಜಿ ಅಥವಾ ನೆಪೋಲಿಯನ್‌ನಂಥವನಲ್ಲ; ಭಯೋತ್ಪಾದಕತೆಯ ಮೂಲಕ ಧರ್ಮಗ್ಲಾನಿಯನ್ನುಂಟುಮಾಡಲು ಹೊರಟಿರುವ ಇಂದಿನ ಬಿನ್‌ಲಾಡನ್‌ನಂಥವನಲ್ಲ; ತನ್ನ ಅಪರಿಮಿತ ಬಂಡವಾಳದ ಬಲದಿಂದ ಜಗತ್ತಿನ ಎಲ್ಲ ದೇಶಗಳನ್ನು ತನ್ನ ವಸಹಾತುಗಳನ್ನಾಗಿ ಮಾಡ ಹೊರಟಿರುವ ಒಬಾಮಾನಂಥವನಲ್ಲ. ಆತ ಒಬ್ಬ

ಸತ್ಯಶೋಧಕ; ಸತ್ಯಾಗ್ರಹಿ, ರಾಜಕಾರಣವನ್ನು ಅಧ್ಯಾತ್ಮಿಕಗೊಳಿಸಲು ಬಯಸಿದ್ದವ. "ರಾಜ್ಯದ ಮೋಹವಿಲ್ಲದ, ಸ್ವರ್ಗದಾಸೆಯಿಲ್ಲದ ಕೇವಲ ದುಃಖಿತಪ್ತರ ಕಣ್ಣೀರನ್ನು ಒರೆಸುವ ಬಯಕೆಯವ. ಆದ್ದರಿಂದಲೇ ಅಧಿಕಾರ ಪಿಪಾಸುವಾಗಿದ್ದ ಇಟಲಿ ದೇಶದ ಸರ್ವಾಧಿಕಾರಿ ಮುಸಲೋನಿಯನ್ನು ಅವನ ಅರಮನೆಯಲ್ಲಿಯೇ ಭೇಟಿಮಾಡಿ ಅವನಿಗೆ ಅಹಿಂಸೆಯ ಶಕ್ತಿಯನ್ನು ವಿವರಿಸಿದವ. ಆತನೇ ಮಹತ್ಮಾ ಗಾಂಧೀ.

ಗಾಂಧೀ ತಮ್ಮ ಆತ್ಮಕಥೆಯನ್ನು ಬರೆದು ಮುಗಿಸಿದ್ದು ೧೯೨೫ರಲ್ಲಿ. ಇಲ್ಲಿಗೆ ಎಂಭತ್ತಾರು ವರ್ಷಗಳಾದವು. ಈ ಎಂಟು ದಶಕಗಳಲ್ಲಿ ಗಾಂಧೀ ವಿಚಾರ ಬೆಳೆಯುತ್ತಲೇ ಬಂದಿದೆ, ವಿಸ್ತಾರಗೊಳ್ಳುತ್ತಲೇ ಬಂದಿದೆ. ಅಚ್ಚ ಹೊಸದಾಗಿಯೇ ಉಳಿದಿದೆ. ಮುಂದಿನ ವರ್ಷಗಳಲ್ಲಿ ಅದು ಈಗಿಗಿಂತ ಹೆಚ್ಚು ತುರ್ತು ಮತ್ತು ಅನಿವಾರ್ಯವೆನಿಸಲಿದೆ. ಗಾಂಧೀ ವಿಚಾರಕ್ಕೆ ಇನ್ನೂ ಗಮ್ಯ ದೊರಕಿಲ್ಲ. ಅದರ ಹುಡುಕಾಟದಲ್ಲಿಯೇ ಅದು ನಿರಂತರವಾಗಿ ತೊಡಗಿದೆ. ಗಂಗೆಗೆ ಸಾಗರ ಸೇರಿದಾಗಲೇ ನೆಮ್ಮದಿ. ಅದೇ ರೀತಿ ಗಾಂಧೀ ವಿಚಾರಕ್ಕೆ ಸರ್ವೋದಯಕ್ಕಾಗಿ ಕ್ರಾಂತಿಯನ್ನುಂಟುಮಾಡಿದಾಗಲೇ ನೆಮ್ಮದಿ. ಯಾವ ರೀತಿ ಒಂದು ವೈಜ್ಞಾನಿಕ ಶೋಧನೆ ಸಾರ್ಥಕವಾಗಬೇಕಾದರೆ ಅದು ಪ್ರಯೋಜನಕ್ಕೆ ಬರಬೇಕು. ಹಾಗೆಯೇ ಗಾಂಧೀ ಮಾಡಿದ ಸತ್ಯದೊಂದಿಗಿನ ಪ್ರಯೋಗ ಮತ್ತು ತನ್ಮೂಲಕ 'ಸೃಷ್ಟಿಕರ್ತ'ನನ್ನೇ ತ್ಯಜಿಸಿ ಕೃತಘ್ನನಾದ ವಿಚಾರ ಅರಿತದ್ದನ್ನು ಇಂದಿನ ಸಮಾಜವು ಅರಿತಾಗಲೇ ಗಾಂಧೀ ವಿಚಾರಕ್ಕೆ ಮುಂದಿನ ಚಾಲನೆ ಸಿಗುತ್ತದೆ. ಇಲ್ಲವಾದರೆ ದಾರಿ ಕ್ರಮಿಸಲು ಸಾಧ್ಯವಾಗದ ಹೆಳವನಂತೆ ಪುಸ್ತಕಗಳಲ್ಲಿ, ಲೇಖನಗಳಲ್ಲಿ, ವಿಚಾರಗೋಷ್ಠಿಗಳಲ್ಲಿ, ಕಲ್ಲುಕಟ್ಟಡಗಳಲ್ಲಿ ಸದಾಕಾಲ ಬಂಧಿತವಾಗಿರಬೇಕಾಗುತ್ತದೆ. ಹಾಗೇನಾದರೂ ಆದಲ್ಲಿ ಅದು ಇಪ್ಪತ್ತೊಂದನೇ ಶತಮಾನದ ಅತ್ಯಂತ ದೊಡ್ಡ ದುರಂತವಾಗುವುದರಲ್ಲಿ ಸಂದೇಹವಿಲ್ಲ. ಆ ದುರಂತವನ್ನು ತಪ್ಪಿಸುವ ಹೊಣೆ ಕೇವಲ ಭಾರತೀಯರದ್ದಲ್ಲ, ಕೇವಲ ಗಾಂಧೀ ವಿಚಾರವಾದಿಗಳದ್ದಲ್ಲ. ಅದು ಮಾನವಕೋಟಿಯ ಪ್ರತಿಯೊಬ್ಬ ಸದಸ್ಯನದೂ ಆಗುತ್ತದೆ. ಗಾಂಧೀ ತಮ್ಮ ಆತ್ಮಚರಿತ್ರೆಯನ್ನು 'ಶುಭಂ' ಎಂದು ಬೇರೆಲ್ಲ ಆತ್ಮಚರಿತ್ರ್ಯಕಾರರಂತೆ ಮುಗಿಸಿಲ್ಲ. ಬದಲಿಗೆ ತಾವು "ವಾಚಕರಿಂದ ತಾತ್ಕಾಲಿಕವಾಗಿ ಬೀಳ್ಕೊಳ್ಳುತ್ತೇನೆ" ಎಂದು ಬರೆದಿದ್ದಾರೆ. ಅಂದರೆ ಅವರು ಮಾಡಿದ ಸತ್ಯದೊಂದಿಗಿನ ಪ್ರಯೋಗ, ತನ್ಮೂಲಕ ಅವರು ಮಾಡಿದ ಸತ್ಯಾಗ್ರಹದ ಪ್ರಯೋಗ ಅಂತ್ಯ ಕಂಡಿಲ್ಲ; ಅದನ್ನು ಮುಂದಿನವರು ಮುನ್ನಡೆಸಿಕೊಂಡು ಹೋಗಿ ಎಂದರ್ಥ. ಆದರೆ ಇಂದಿನವರಿಗೆ ಗಾಂಧೀ ವಿಚಾರ ಬೇಕಿಲ್ಲ; ಸತ್ಯಾಗ್ರಹ ಬೇಕಿಲ್ಲ; ಅಹಿಂಸೆ ಬೇಕಿಲ್ಲ; ಗಾಂಧೀ ವಿಚಾರದ ಸಾರ್ಥಕ್ಯತೆ ಎಲ್ಲಿದೆ, ಯಾತರಲ್ಲಿದೆ, ಅದನ್ನು ಮುನ್ನಡೆಸಿಕೊಂಡು ಹೋಗಬೇಕಾದ ಇನ್ನೂ ಬಲವಾದ ಕಾರ್ಯಶಕ್ತಿಯಾವುದು ಎಂಬುದನ್ನು ಇಂದಿನವರು ಗಂಭೀರವಾಗಿ ಆಲೋಚಿಸುತ್ತಿಲ್ಲ. ಏಕೆಂದರೆ ಇಂದಿನ ಜನರು ಗಾಂಧೀವಿಚಾರ ಸ್ವೀಕರಿಸಲು ಮಾನಸಿಕವಾಗಿ ಸಿದ್ಧರಾಗಿಲ್ಲ. ಯಾವ ದಿನ ಆ ರೀತಿ ಸಿದ್ಧರಾಗುತ್ತಾರೋ ಆ ದಿನ ನಿಂತ ಗಾಂಧೀ ವಿಚಾರಕ್ಕೆ ಪುನಃ ಚಾಲನೆ ಸಿಗುತ್ತದಷ್ಟೇ

ಅಲ್ಲ, ಆಗ ಅದೊಂದು ಏಕವ್ಯಕ್ತಿಯ ಸತ್ಯದೊಂದಿಗಿನ ಪ್ರಯೋಗವಾಗದೆ ಇಡೀ ಮಾನವಕುಲವೇ ಒಟ್ಟಿಗೆ ಸೇರಿ ಮಾಡಿದ ಸತ್ಯದೊಂದಿಗಿನ ಪ್ರಯೋಗವಾಗುತ್ತದೆ; ಸೃಷ್ಟಿಕರ್ತನನ್ನೇ ತ್ಯಜಿಸಿದ ಕೃತಘ್ನತೆಯ ಶಾಪದಿಂದ ವಿಮುಕ್ತಗೊಳ್ಳುತ್ತದೆ. ಆಗ ಸರ್ವೋದಯ ಸಮಾಜ ಸ್ಥಾಪಿಸಬೇಕಾದ ಅಗತ್ಯ ಉಂಟಾಗುತ್ತದೆ. ಮತ್ತು ಅದಕ್ಕಾಗಿ ಜನರು ತಮ್ಮನ್ನು ಸರ್ವೋದಯ ಕ್ರಾಂತಿಯ ಹರಿಕಾರರನ್ನಾಗಿ ಮಾಡಿಕೊಳ್ಳುತ್ತಾರೆ; ಆಚಾರ್ಯ ವಿನೋಬಾರಂತೆ, ಲೋಕನಾಯಕ ಜಯಪ್ರಕಾಶ ನಾರಾಯಣರಂತೆ, ಸ್ವತಃ ಗಾಂಧೀಯವರಂತೆಯೇ. ಆಗ ಮಾನವಕುಲ ಗಾಂಧೀಯವರಲ್ಲಿ ಹಿಮಾಲಯದ ಶಾಂತಿ ಮತ್ತು ಬಂಗಾಲದ ಕ್ರಾಂತಿ ದೊರೆತು ಗಾಂಧೀಯವರಲ್ಲಿ ಅವೆರಡರ ಅಪೂರ್ವ ಸಂಗಮವನ್ನು ಸಾಕ್ಷಾತ್ಕರಿಸಿಕೊಳ್ಳುತ್ತಾರೆ; ಸರ್ವೋದಯ ಸಮಾಜ ರಚನೆಯ ಕ್ರಾಂತಿಯಲ್ಲಿ ತಮ್ಮನ್ನು ಶ್ರದ್ಧಾಪೂರ್ವಕ ಮತ್ತು ಬದ್ಧತಾಪೂರ್ವಕ ತೊಡಗಿಸಿಕೊಳ್ಳುತ್ತಾರೆ. ಸರ್ವೋದಯ ಕ್ರಾಂತಿಯಾಗುವವರೆಗೂ ನಿಲ್ಲುವುದಿಲ್ಲ.

ಗಾಂಧೀ ವಿಚಾರವೆಂಬುದು ಶುಷ್ಕವಿಚಾರವಲ್ಲ, ಟೊಳ್ಳು ವಿಚಾರವಲ್ಲ. ಗಾಂಧೀಯವರೇ ಸ್ವತಃ ಹೇಳಿದಂತೆ "ಗಾಂಧೀ ಪಂಥ ಎಂಬುದೊಂದಿಲ್ಲ. ನನ್ನ ತರುವಾಯ ಯಾವ ಪಂಥವನ್ನೂ ಕಟ್ಟಿಹೋಗುವ ವಿಚಾರ ನನಗಿಲ್ಲ", ಅವರಿಗೆ ಬೇಕಾಗಿದ್ದುದು ಅಂತ್ಯೋದಯದ ಮೂಲಕ ಸರ್ವೋದಯ. ಏಕೆಂದರೆ ಸರ್ವೋದಯ ಸಮಾಜ ರಚನೆಯ ಕ್ರಾಂತಿಯ ಪಾಂಚಜನ್ಯವನ್ನು ಊದಿದ ವಿನೋಬಾ ಹೇಳುವಂತೆ, "ಜಗತ್ತು ಇಂದು ಅನ್ಯಾಯ, ಪೀಡನೆ ಮತ್ತು ಶೋಷಣೆಗಳಿಂದ ತ್ರಸ್ತವಾಗಿದೆ. ಸತ್ತೆಯ ಮುಷ್ಟಿಯಲ್ಲಿ ಅದರ ಉಸಿರು ಕಟ್ಟಿ ಹೋಗುತ್ತಿದೆ. ಯುದ್ಧ ಮತ್ತು ಶಸ್ತ್ರಾಸ್ತ್ರಗಳ ತಾಪದಿಂದ ಅದು ಪೀಡಿತವಾಗಿದೆ. ವರದಾನವಾಗಬೇಕಾಗಿದ್ದ ವಿಜ್ಞಾನ ಇಂದು ಶಾಪವಾಗಿ ಬಿಟ್ಟಿದೆ. ಏಕೆಂದರೆ ವಿಜ್ಞಾನವು ಸತ್ತೆ, ಸಂಪತ್ತು ಮತ್ತು ಸ್ವಾರ್ಥಗಳಿಗೆ ಮಾರಿಹೋಗಿದೆ. ಇಂದಿನ ಈ ಭಯಾವಹ ಸ್ಥಿತಿಯಿಂದ ಮುಕ್ತವಾಗಲು ಸರ್ವೋದಯ ವಿಚಾರ ದಾರಿ ತೋರಿಸುತ್ತಿದೆ. ಗಾಂಧೀಜಿ ಈ ಮಾತನ್ನು ಬಹಳ ಹಿಂದೆಯೇ ಹೇಳಿದ್ದರು. ಆದರೆ ಗಾಂಧೀ ವಿಚಾರವಾದಿಗಳೆಂದು ಕರೆದುಕೊಳ್ಳುವ ಜನರು, ಗಾಂಧೀ ವಿಚಾರದಲ್ಲಿ ನಂಬಿಕೆಯಿದೆಯೆಂದು ಹೇಳಿಕೊಳ್ಳುವ ಜನರು, ಗಾಂಧೀ ಹೆಸರನ್ನು ಹೊಂದಿದ ಶೈಕ್ಷಣಿಕ ಮತ್ತು ಸಾಮಾಜಿಕ ಸಂಸ್ಥೆಗಳವರು ಸರ್ವೋದಯ ಕ್ರಾಂತಿಯ ಅಗತ್ಯವನ್ನು ಮರೆತಿದ್ದಾರೆ. ಹಾಗೆ ಮಾಡುವುದರ ಮೂಲಕ ಗಾಂಧೀ ವಿಚಾರಕ್ಕೆ ಅನ್ಯಾಯ ಮಾಡುತ್ತಿದ್ದೇವೆಂಬ ತಪ್ಪಿನ ಅರಿವು ಅವರಿಗಿಲ್ಲವಾಗಿದೆ. ಈ ವಿಚಾರದಲ್ಲಿ ಅತ್ಯಂತ ಜಾಗೃತರಾಗಿದ್ದಂಥ ಮೂರು ವ್ಯಕ್ತಿಗಳು ನಮಗೆ ಸಿಗುತ್ತಾರೆ. ಅವರು ಗಾಂಧೀವಿಚಾರದಿಂದ, ಗಾಂಧೀಯವರ ಸಹವಾಸದಿಂದ ಪ್ರಭಾವಿತರಾದವರೇ. ಗಾಂಧೀ ವಿಚಾರ ಕೇವಲ ಒಂದು ಮಾನಸಿಕ ವಿಚಾರವಲ್ಲ, ಅದೊಂದು ಪ್ರಾಪಂಚಿಕ ಶಕ್ತಿ ಎಂದು ಅವರು ಪರಿಭಾವಿಸಿದ್ದರು. ಇಂದು ಜಗತ್ತಿನಲ್ಲಿ ಪ್ರಚಲಿತವಿರುವ (ಸಾಮ್ಯವಾದ, ಸಮಾಜವಾದ, ಬಂಡವಾಳಶಾಹಿವಾದ, ಕೋಮುವಾದ ಮತ್ತು ಹಿಂಸೆಯನ್ನೇ ತಮ್ಮ ಸಾಧನವನ್ನಾಗಿ ಮಾಡಿಕೊಂಡು ಗೊತ್ತುಗುರಿಯಿಲ್ಲದೆ ಅಮಾನುಷ

ಕೃತಿಗಳಲ್ಲಿ ತೊಡಗಿರುವ ನಕ್ಸಲವಾದ, ಮಾವೋವಾದ ಹಾಗೂ ತುಂಬ ಇತ್ತೀಚೆಗೆ ಕಾಣಿಸಿಕೊಂಡಿರುವ ಒಬಾಮಾವಾದ, ಒಸಾಮಾ ಬಿನ್ ಲಾಡೆನ್‌ವಾದ ಹಾಗು ಅಭಿವೃದ್ಧಿವಾದ ಮುಂತಾದ) ಎಲ್ಲ ಬಗೆಯ ವರ್ತಮಾನ ಮತ್ತು ಭವಿಷ್ಯದ ಎಲ್ಲ ವಾದಗಳನ್ನು ಹಿಂದಕ್ಕೆ ಸರಿಸಿ ಭೂಮಿಯ ಮೇಲಿರುವ ಮಾನವಜೀವಿಯನ್ನು ಸೇರಿ ಎಲ್ಲ ಬಗೆಯ ಜೀವಕೋಟಿಗಳ ಆತ್ಮೋದ್ಧಾರದ ವಿಚಾರ ಗಾಂಧೀ ವಿಚಾರವೆಂದೂ, ಆ ಗಾಂಧೀ ವಿಚಾರ ಕರ್ಮಕ್ಷೇತ್ರದಲ್ಲಿ ಸಾರ್ಥಕ್ಯ ಪಡೆಯಬೇಕಾದರೆ ಅದು ಸರ್ವೋದಯ ಸಮಾಜ ರಚನೆಯ ಕ್ರಾಂತಿಯಲ್ಲಿ ಪರಿವರ್ತಿತವಾಗಬೇಕೆಂದೂ ನಂಬಿದ್ದರು. ಅದಕ್ಕಾಗಿ ತಮ್ಮ ಜೀವನವನ್ನೇ ತ್ಯಾಗಮಾಡಿದರು. ಆ ಮೂರು ವ್ಯಕ್ತಿಗಳು ಈಗಾಗಲೇ ತಿಳಿಸಿರುವಂತೆ ಸಂತ ವಿನೋಬಾ, ಲೋಕನಾಯಕ ಜಯಪ್ರಕಾಶ ನಾರಾಯಣ ಮತ್ತು ಸ್ವತಃ ಗಾಂಧೀ.

ಗಾಂಧೀಯವರ ಹತ್ಯೆಯಾಗುತ್ತಲೇ ದೇಶದ ರಾಜಕಾರಣದಲ್ಲಿ, ರಚನಾತ್ಮಕ ಕಾರ್ಯಕ್ಷೇತ್ರದಲ್ಲಿ ಹಾಗೂ ಜನಮಾನಸದಲ್ಲಿ ಒಂದು ಪ್ರಕಾರದ ಶೂನ್ಯಾವಸ್ಥೆ ಉಂಟಾಯಿತು. ಹಾಗೆ ಆದದ್ದು ಯಾರು ಗಾಂಧೀಜಿಯವರನ್ನು ಕೇವಲ ವ್ಯಕ್ತಿಯೆಂದಾಗಿ ಪರಿಭಾವಿಸಿದ್ದರೋ, ಯಾರು ಗಾಂಧೀಯನ್ನು ದೇಶಕ್ಕೆ ಸ್ವಾತಂತ್ರ್ಯ ತರುವ ಸಾಧನಮಾತ್ರವೆಂದು ಭಾವಿಸಿದ್ದರೋ ಅಂಥವರಿಗೆ ಮಾತ್ರ. ಆದರೆ ಗಾಂಧೀಜಿಯವರ ಜೀವನವನ್ನು, ಅವರ ಸತ್ಯದೊಂದಿಗಿನ ಪ್ರಯೋಗವನ್ನು ಯಾರು ನಿಕಟವಾಗಿ ತಿಳಿದಿದ್ದರೋ ಅಂಥವರಿಗೆ ಗಾಂಧೀಯವರ ಹತ್ಯೆ ಹೊಸ ಭಾರತೀಯ ಸಮಾಜ ರಚನೆಗೆ ಆಹ್ವಾನವಾಯಿತು, ವೀಳ್ಯಕೊಟ್ಟಿತು. ಅವರಿಗೆ ಗಾಂಧೀಜಿ ಕೊಟ್ಟಿದ್ದ ಸರ್ವೋದಯ ಶಬ್ದ ತಾರಕಮಂತ್ರವಾಯಿತು, ಧ್ರುವತಾರೆಯಾಯಿತು. ಯು.ಎಸ್. ಎಸ್.ಆರ್. ಅಂದರೆ Union of Socialist Republics ನಂತೆ ಭಾರತವನ್ನು Union of Sarvodaya Republics ಮಾಡಬೇಕೆಂದು ಅವರು ಪಣತೊಟ್ಟರು. ದೇಶದ ಪ್ರತಿಯೊಂದು ಹಳ್ಳಿಯನ್ನು ಗಣರಾಜ್ಯವನ್ನಾಗಿ ಮಾಡಬೇಕೆಂಬ ಸಂಕಲ್ಪ ತೊಟ್ಟರು. ಬೇರೆಲ್ಲ ವಿವಿಧ ಪ್ರಕಾರದ ವಾದಿಗಳು ಇಂದಿನ ಜಗತ್ತನ್ನು ಮುದುಕನೆಂದು ಭಾವಿಸಿದರೆ ಅದನ್ನು ಇವರು ಯುವಶಕ್ತಿಯ ಸ್ಫೋಟಕ್ಕೆ ಯೋಗ್ಯವಾದ ತಾಣವೆಂದು ಭಾವಿಸಿದರು. ಆದ್ದರಿಂದ ಇಡಿ ಜಗತ್ತಿಗೇ ಅನ್ವಯವಾಗುವ ಸರ್ವೋದಯ ಸಮಾಜದ ಕ್ರಾಂತಿಗಾಗಿ ಮುನ್ನಡೆದರು, 'ಜೈಜಗತ್' ಎಂಬ ಸ್ಫೂರ್ತಿದಾಯಕ ಘೋಷಣೆ ಹಾಕಿದರು. ಸರ್ವೋದಯ ಕ್ರಾಂತಿಯನ್ನು ಲೋಕಕ್ರಾಂತಿಯನ್ನಾಗಿ ಪರಿವರ್ತಿಸಿದರು. ಗಾಂಧೀಯವರು ರಾಜಕಾರಣವನ್ನು ಅಧ್ಯಾತ್ಮಕಗೊಳಿಸಬೇಕೆಂದು ಬಯಸಿದ್ದರೆ, ಇವರು ರಾಜನೀತಿಯನ್ನೇ ಮುಗಿಸಿಬಿಡಬೇಕೆಂದು ಬಯಸಿದರು! ಗಾಂಧೀಯವರು ಈ ಕ್ರಾಂತಿಯ ಸಾಕ್ಷಾತ್ಕಾರಕ್ಕಾಗಿ ನಲ್ವತ್ತು ವರ್ಷ ಕೆಲಸ ಮಾಡಿದರೆ, ಆಚಾರ್ಯ ವಿನೋಬಾ ಇಪ್ಪತ್ತು ವರ್ಷ ಕೆಲಸ ಮಾಡಿದರೆ, ಜಯಪ್ರಕಾಶ ನಾರಾಯಣ ಹತ್ತು ವರ್ಷ ಕೆಲಸ ಮಾಡಿದ್ದಾರೆ. ಸರ್ವೋದಯ ಕ್ರಾಂತಿ ಕೆಲಸಕ್ಕಾಗಿ ಎಪ್ಪತ್ತು ವರ್ಷದ ಪರಿಶ್ರಮ, ತ್ಯಾಗ ಮತ್ತು ಚಿಂತನೆಯಿದೆ. ಕೃತಿಯಲ್ಲಿ ಬಾರದಂಥ ಯಾವ ವಿಚಾರವೂ

ಗಾಂಧೀಜಿಯವರದು ಇರುತ್ತಿರಲಿಲ್ಲ. ಅದು ಅವರ ವೈಶಿಷ್ಟ್ಯ. ಸರ್ವೋದಯ ಸಮಾಜ ರಚನೆಯ ಕ್ರಾಂತಿಯ ವಿಚಾರ ಸಹ ಕೃತಿಯಲ್ಲಿ ಬಾರದಂತಹ ವಿಚಾರವೇನಲ್ಲ, ಕೆಲಸವೇನಲ್ಲ. ಇದು ಕಾರ್ಯಗತವಾಗುವುದಕ್ಕೆ ಎಲ್ಲರೂ ಮಾಡಬಹುದಾದ ಸರಳ ಉಪಾಯವನ್ನು ಸೂಚಿಸಿದ್ದರು. ಅದು ರಚನಾತ್ಮಕ ಕಾರ್ಯಕ್ರಮ. ರಚನಾತ್ಮಕ ಕಾರ್ಯವೆಂದರೆ ಪೂರ್ಣ ಸ್ವರಾಜ್ಯದ ಸ್ಥಾಪನೆಗಾಗಿ ಸಾಮೂಹಿಕ ಪ್ರಯತ್ನ. ಪ್ರತಿಯೊಂದು ಯೋಗ್ಯ ರಾಜಕೀಯ ಸಿದ್ಧಾಂತಕ್ಕೆ ಅದಕ್ಕೆ ತಕ್ಕುದಾದ ರಚನಾತ್ಮಕ ಕಾರ್ಯವಿರಬೇಕು ಮತ್ತು ಅದರ ಉದ್ದೇಶ್ಯ ನಾಗರಿಕ ಸಮಾಜದ ಎಲ್ಲ ಜನರ ಹಿತೋನ್ನತಿಯಾಗಿರಬೇಕೆಂದು ಗಾಂಧೀಜಿ ಹೇಳಿದ್ದರು. ಇಂದು ಯಾವ ಯಾವ ರಾಜಕೀಯ ಸಿದ್ಧಾಂತಗಳನ್ನು ಇಟ್ಟುಕೊಂಡು ಕ್ರಾಂತಿಯಗಳು ನಡೆದಿದೆಯೋ ಅವೆಲ್ಲವುದರ ಸ್ಥಿತಿ ಗುರಿಮುಟ್ಟದ 'ಅಹಂಕಾರಿ ಮೊಲ'ದಂತೆ ಆಗಿದೆ. ಗಾಂಧೀಜಿ ಪ್ರತಿಪಾದಿಸಿದ ಸರ್ವೋದಯ ಸಮಾಜ ರಚನೆಯ ಕ್ರಾಂತಿ ರಚನಾತ್ಮಕ ಕೆಲಸಗಳಿಂದಲೇ ಪ್ರಾರಂಭವಾಯಿತು, ಅದು ನೆರವೇರಬೇಕಾದ್ದೂ ರಚನಾತ್ಮಕ ಕಾರ್ಯಗಳಿಂದಲೇ.

ಪ್ರತಿಯೊಂದು ಕ್ರಾಂತಿಗೂ ತನ್ನ ಗುರಿಗೆ ತಕ್ಕಂಥ ಪ್ರಣಾಳಿಕೆಯಿರಬೇಕಾಗುತ್ತದೆ; ಇಂದು ಕೆಲ ಕ್ರಾಂತಿಗಳಿಗಂತೂ ಗೌಪ್ಯ ಪ್ರಣಾಳಿಕೆಯಿರುತ್ತದೆ! ಆ ಕ್ರಾಂತಿಕಾರರಿಗೆ ಸ್ವತಃ ತಾವು ಯಾವ ಉದ್ದೇಶ್ಯಕ್ಕಾಗಿ ಮತ್ತು ಯಾವ ಪ್ರಕಾರದ ಸಮಾಜ ವ್ಯವಸ್ಥೆಯ ಕ್ರಾಂತಿಗಾಗಿ ಹೋರಾಟ ಮಾಡುತ್ತಿದ್ದೇವೆಂಬುದರ ತಿಳುವಳಿಕೆಯೇ ಇರುವುದಿಲ್ಲ. ಗಾಂಧೀ ಪ್ರಣೀತ ಸರ್ವೋದಯ ಕ್ರಾಂತಿಗೆ ಗುರಿಯೂ ನಿಚ್ಚಳವಾಗಿದೆ, ಮಾರ್ಗವೂ ನಿಚ್ಚಳವಾಗಿದೆ, ಸಾಧನಗಳೂ ನಿಚ್ಚಳವಾಗಿವೆ. ಗೌಪ್ಯ ಪ್ರಣಾಳಿಕೆಯೆಂಬುದೇ ಇಲ್ಲ. ಸರ್ವೋದಯ ಸಮಾಜ ರಚನೆಯ ಕ್ರಾಂತಿಗೆ ಗಾಂಧೀಜಿಯವರು ೧೯೦೯ರಲ್ಲಿ ಬರೆದ 'ಹಿಂದ್ ಸ್ವರಾಜ್' ಪುಸ್ತಕವೇ ಪ್ರಣಾಳಿಕೆಯೆಂದು ಭಾವಿಸಬಹುದಾದಷ್ಟು ಪ್ರಸ್ತುತವಾಗಿದೆ. ಆದ್ದರಿಂದ ಸಮಾಜ ಪರಿವರ್ತನೆಗಾಗಿಯೂ ರಚನಾತ್ಮಕ ಕಾರ್ಯ, ಸಮಾಜ ನಿರ್ಮಾಣಕ್ಕೂ ರಚನಾತ್ಮಕ ಕಾರ್ಯ.

ಇಂದು ದೇಶಕ್ಕೆ ಸ್ವಾತಂತ್ರ್ಯ ಬಂದು ಆರು ದಶಕಗಳು, ಗಾಂಧೀಜಿಯವರು ಸರ್ವೋದಯ ವಿಚಾರ ಹೇಳಿ ನೂರುವರ್ಷಗಳಾದರೂ ಸರ್ವೋದಯ ಕ್ರಾಂತಿ ಮೂಲಕ ಸರ್ವೋದಯ ಸಮಾಜ ರಚನೆಯಾಗದೇ ಇದ್ದರೆ ಭಾರತೀಯರು ತಮ್ಮ ಸ್ವಶಕ್ತಿಯಿಂದ ರಚನಾತ್ಮಕ ಕಾರ್ಯಕ್ರಮಗಳನ್ನು ಶ್ರದ್ಧೆಯಿಂದಲೂ, ಬದ್ಧತೆಯಿಂದಲೂ ನಡೆಸಿಕೊಂಡು ಬರದೇ ಇದ್ದುದು ಕಾರಣವೇ ಹೊರತು ಗಾಂಧೀ ಪ್ರತಿಪಾದಿಸಿದ ಸರ್ವೋದಯ ವಿಚಾರದಲ್ಲಿಯ ದೋಷಗಳಲ್ಲ.

* * *

ಜಡ ಮೂಲದಿಂದ ಕ್ರಾಂತಿ ಬೇಕು

– ದಾದಾ ಧರ್ಮಾಧಿಕಾರಿ

ಇಂದು ಜಗತ್ತಿನ ತರುಣರಲ್ಲಿ ಉತ್ಕಂಠತೆಯ ವೇಗ ಉಂಟಾಗುತ್ತಿದೆ. ಆ ಉತ್ಕಂಠತೆಯ ಸ್ವರೂಪ ಜೀವನದ ಆಕಾಂಕ್ಷೆ. ಪ್ರತ್ಯಕ್ಷ ಜೀವನವೆಂದರೇನು? ಸಾಮಾನ್ಯ ಜೀವನ, ಪ್ರತ್ಯಕ್ಷ ಜೀವನವಲ್ಲ. ಆಧುನಿಕ ಸುಸಂಸ್ಕೃತ ಮನುಷ್ಯನ ಅರ್ವಾಚೀನ ಜೀವನ ಕೂಡ ಪ್ರತ್ಯಕ್ಷ ಜೀವನವಲ್ಲ. ಪ್ರತ್ಯಕ್ಷ ಜೀವನದ ಅರ್ಥ ಒಬ್ಬ ಮನುಷ್ಯ ಮತ್ತೊಬ್ಬ ಮನುಷ್ಯನ ಜೊತೆ ಜೀವಿಸುವುದಾಗಿದೆ. ಇದೊಂದು ನಿಷ್ಕರ್ಮ. ಇನ್ನೊಂದು ನಿಷ್ಕರ್ಮವೇನೆಂದರೆ ನಮ್ಮ ದೇಶದಲ್ಲಿ ಮತ್ತು ಇತರೆಡೆಯಲ್ಲಿ ಮನುಷ್ಯರು ಪರಸ್ಪರ ನರೆಯವರಾಗಿ ಬದುಕುತ್ತಾರೆಯೇ ಹೊರತು ಜೊತೆಯಾಗಿಯಲ್ಲ. ಅವರಲ್ಲಿ ಮೈತ್ರಿಯಿಲ್ಲ. ಅವರು ಪರಸ್ಪರ ಹತ್ತಿರವೇನೋ ಇದ್ದಾರೆ, ಅದರೆ ಅವರಲ್ಲಿ ಸೌಹಾರ್ದತೆಯಿಲ್ಲ. ಈ ಸಮೀಪತೆ ಕೇವಲ ಶರೀರದ್ದಲ್ಲ, ಮನಸ್ಸಿನದ್ದಲ್ಲ. ಈ ನೆರೆಹೊರೆಯ ಜೊತೆಗೆ ಮನುಷ್ಯರ ಮೈತ್ರಿಯ ವಿಕಾಸ ಹೇಗಾಗಬೇಕು. ಈ ಕುರಿತು ನಾವು ಚಿಂತನೆ ಮಾಡಬೇಕಿದೆ. ಮನುಷ್ಯ ನೆರೆಯವನಾಗಿದ್ದರೂ ಕೂಡ ಮಿತ್ರನಾಗೇಕಿಲ್ಲ? ಇದಕ್ಕೆ ಅನೇಕ ಕಾರಣಗಳಿವೆ. ಇವು ಅಂತರಾಯ, ಪ್ರತ್ಯವಾಯ ಈ ಕಾರಣದಿಂದಾಗಿ ಮನುಷ್ಯರು ಪರಸ್ಪರ ಸಮೀಪವಾಗಿದ್ದರೂ ಕೂಡ ಪರಸ್ಪರ ಜೊತೆ ಜೀವಿಸಲಾರರು. ಇದಕ್ಕೆ ಸಂಬಂಧಿಸಿದ ಕೆಲ ಪ್ರತ್ಯವಾಯಗಳನ್ನು ತಿಳಿಸಿದ್ದೇನೆ. ಅವುಗಳಲ್ಲಿ ಮೊದಲನೆಯದು ಮಾಲೀಕತ್ವ ಮತ್ತು ಮಾಲೀಕ. ಎರಡನೆಯದು ಸಂಪ್ರದಾಯ ಅಥವಾ ಧರ್ಮ, ಮೂರನೆಯದು ಜಾತಿ, ನಾಲ್ಕನೆಯದು ಭಾಷೆ, ಸಂಸ್ಕೃತಿ, ಐದನೆಯದು ವಂಶ ಅಥವಾ 'ರೇಸ್'. ಆದರೆ ಈ ಎಲ್ಲ ಪ್ರತ್ಯವಾಯಗಳನ್ನು ತೆಗೆದುಹಾಕುವುದಿದ್ದರೆ, ಇವುಗಳ ನಿರಾಕರಣೆ ಮಾಡುವುದಿದ್ದರೆ ಇಂದಿನ ಸಮಾಜದ ಅಡಿಪಾಯವನ್ನೇ ಬದಲಾಯಿಸಬೇಕು. ಇದರ ಹೊರತು ಬೇರೆ ಉಪಾಯವಿಲ್ಲ. ಅಲ್ಲಿ ಇಲ್ಲಿ ಚೂರುಪಾರು ಬದಲಾವಣೆ ಮಾಡುವುದರಿಂದ ಸಮಸ್ಯೆ ಬಗೆಹರಿಯುವಂಥದ್ದಲ್ಲ. ಇಡೀ ಸಮಾಜದ ಅಡಿಪಾಯವನ್ನೇ ಬದಲಾಯಿಸಬೇಕು. ಅಂದರೆ ಜಡ-ಮೂಲದಿಂದ ಕ್ರಾಂತಿ ಮಾಡಬೇಕು.

ಕ್ರಾಂತಿಗೆ ಎರಡು ಆಯಾಮಗಳಿವೆ. ಮೊದಲನೆಯದು ಸಂದರ್ಭದ ಬದಲಾವಣೆ! ಎರಡನೆಯದು ಸಮಾಜದಲ್ಲಿ ಪ್ರಚಲಿತವಿರುವ ಮೌಲ್ಯಗಳನ್ನು ಬದಲಾಯಿಸುವುದು. ಸಮಾಜದಲ್ಲಿ ತಾತ್ಕಾಲಿಕ ಮೌಲ್ಯಗಳಿರುತ್ತವೆ. ಗೊತ್ತಾದ ಸಮಯದ ಅವಧಿಯ ಜೀವನಕ್ಕಾಗಿ ಯಾವ ಮೌಲ್ಯಗಳಿರುತ್ತವೋ ಅವು ಪ್ರಚಲಿತ ಮೌಲ್ಯ.

ಜೀವನಕ್ಕೆ ಸಂಬಂಧಿಸಿದ ಶಾಶ್ವತ ಮೌಲ್ಯಗಳಿರುತ್ತವೆ. ಜೀವನದಲ್ಲಿ ಯಾವುದೇ ಪ್ರಕಾರದ ಕಾರಣದ ಅಗತ್ಯವಿರುವುದಿಲ್ಲವೋ ಅದು ಶಾಶ್ವತ ಮೌಲ್ಯ.

ಅದು ಯಾವ ಕಾರಣಕ್ಕಾಗಿಯೂ ಬದಲಾಗುವುದಿಲ್ಲ, ಪರಿವರ್ತನೆಯಾಗುವುದಿಲ್ಲ. ಅದು ಶಾಶ್ವತ ಮೌಲ್ಯ. ಜೀವನದ ಇತರ ಎಲ್ಲ ಮೌಲ್ಯಗಳ ಬೆಲೆಕಟ್ಟುವಂಥ ಆ ಶಾಶ್ವತ ಮೌಲ್ಯಗಳು ಯಾವವು? ಆಧ್ಯಾತ್ಮಕ ಕ್ಷೇತ್ರದಲ್ಲಿರುವ ಅನೇಕ ಜನರಿಗೆ ಈ ಜೀವನಕ್ಕೆ ವಿಶೇಷ ಮೌಲ್ಯವಿಲ್ಲವೆಂದೆನಿಸುತ್ತದೆ. ಇದರ ಚರ್ಚೆ ಇಲ್ಲಿ ಬೇಕಿಲ್ಲ. ಆದರೆ ಜಗತ್ತಿನ ಎಲ್ಲ ಕ್ರಾಂತಕಾರರು 'ಪರಮಮೌಲ್ಯ ಜೀವನ'ವೆಂದು ಒಮ್ಮತದಿಂದ ಹೇಳುತ್ತಾರೆ. ಜೀವನದ ಸಂರಕ್ಷಣೆ ಮತ್ತು ಅದರ ಸಂವರ್ಧನೆ ಮತ್ತು ಅದರ ವಿಕಾಸ ಕ್ರಾಂತಿಯ ಗುರಿ. ಜೀವನದ ಮಾಪಕ ಕೂಡ ಜೀವನವೆ ಆಗಿದೆ. ಬೇರೆಲ್ಲ ವಸ್ತುಗಳ ಮಾರುಕಟ್ಟೆಯ ಬೆಲೆಯನ್ನು ಈ ಜೀವನದ ಅಳತೆಯಿಂದಲೇ ನಿಶ್ಚಯಿಸಬೇಕಾಗುತ್ತದೆ. ಇಂದು ಈ ಪ್ರಕಾರ ನಿಶ್ಚಯಿಸಲಾಗುತ್ತಿಲ್ಲ. ಜೀವನದ ದೃಷ್ಟಿಯಿಂದ ವಸ್ತುಗಳ ಮೌಲ್ಯಾಂಕನ ಮಾಡುವುದು ಕ್ರಾಂತಿ. ಮೌಲ್ಯ ಪರಿವರ್ತನೆ ಏಕಾಗುತ್ತದೆ? ಹೆನ್ರಿ ಮಿಲ್ಲರ್‌ನ ಒಂದು ವಾಕ್ಯವಿದೆ. ಅವನ ಪ್ರಕಾರ ವಿಶ್ವವ್ಯಾಪಿ, ಜಗದ್‌ವ್ಯಾಪಿ ಕ್ರಾಂತಿಯಾಗಬೇಕು. A worldwide revolution from top to bottom. In All Realms of human consciousness. ಈ ಹೆನ್ರಿ ಮಿಲ್ಲರ್ ಯಾವುದೇ ಆಧ್ಯಾತ್ಮಿಕ ಪುರುಷನಲ್ಲ. ಮಹಾ ನಾಸ್ತಿಕ. ಮಾನವ ಚೇತನದ ಸಮಸ್ತ ಕ್ಷೇತ್ರಗಳಲ್ಲಿ ಕ್ರಾಂತಿಯಾಗಬೇಕೆಂದು ಹೇಳುತ್ತಾನೆ. ಗಾಂಧೀಜಿಯವರ ಪರಿಭಾಷೆಯಲ್ಲಿ ಇದಕ್ಕೆ ಹೃದಯಪರಿವರ್ತನೆ ಎನ್ನುತ್ತಾರೆ.

ಕ್ರಾಂತಿಯ ಎರಡನೇ ಆಯಾಮ– ಸಂದರ್ಭವನ್ನು ಬದಲಾಯಿಸುವುದು. ಮೌಲ್ಯ ಪರಿವರ್ತನೆ ಮತ್ತು ಸಂದರ್ಭ ಪರಿವರ್ತನೆ. ಇಂದು ಮನುಷ್ಯ ಯಾವ ಪ್ರಕಾರದ ಸಂದರ್ಭ ಮತ್ತು ಪರಿಸ್ಥಿತಿಯಲ್ಲಿದ್ದಾನೋ ಅದು ಬದಲಾಗಬೇಕು. ಸಂದರ್ಭದ ಅರ್ಥ ಮನುಷ್ಯ–ಮನುಷ್ಯನ ಸಂಬಂಧ. ಮನುಷ್ಯರಲ್ಲಿಯ ಪರಸ್ಪರ ಸಂಬಂಧದ ಹೆಸರೇ ಸಂದರ್ಭ. ಈ ಸಂದರ್ಭ ಮೂರು ಪ್ರಕಾರದ್ದಿದೆ. ಇತ್ತೀಚಿಗೆ ಒಂದು ಪುಸ್ತಕ ಪ್ರಕಟವಾಗಿದೆ. ಅದರ ಲೇಖಕ ವಿಕ್ಟರ್ ಪರ್‌ಕಿಸ್. ಪುಸ್ತಕದ ಹೆಸರು Technological Man - The Myth and The Reality. ಟೆಕ್ನಾಲಜಿಕಲ್ ಮ್ಯಾನ್ ಅಂದರೆ ಯಂತ್ರಯುಗದ ಮನುಷ್ಯ. ಅದರ ವಾಸ್ತವಿಕ ಮತ್ತು ಕಾಲ್ಪನಿಕ ಸ್ವರೂಪ ಹೀಗಿದೆ: ಮನುಷ್ಯನ ಸಂದರ್ಭದ ಬಗ್ಗೆ ಯೋಚನೆ ಮಾಡುವುದಾದಲ್ಲಿ ಮೂರು ಪ್ರಕಾರದ ಸಂಬಂಧಗಳ ವಿಚಾರ ಮಾಡಬೇಕಾಗುತ್ತದೆ. ಒಂದು, ನವನಿಸರ್ಗವಾದ. ಎರಡನೆಯದು ಹೊಸ ಸಮಗ್ರತಾವಾದ. ಜ್ಞಾನದಲ್ಲಿ ಅಸಂದಿಗ್ಧತೆಯಂತೂ ಬೇಕು, ಸಮಗ್ರತೆ ಕೂಡ ಬೇಕು. ಹೊಸ ಸಮಗ್ರತಾವಾದದಲ್ಲಿ ಏನೇನು ಬರುತ್ತದೆ? 'ಇಕಾಲಜಿ'. ಭೂಮಿಯ ಮೇಲೆ ಜೀವಮಾತ್ರದ ಪೋಷಣೆಗಾಗಿ, ಜೀವನದ ಸಂಗೋಪನೆಗಾಗಿ ಯಾವೊಂದು ಪರಿಸ್ಥಿತಿ ಬೇಕೋ ಅದನ್ನು ಇಕಾಲಜಿ ಎಂದು ಹೇಳುತ್ತಾರೆ. ಅಲ್ಲಿ ಮನುಷ್ಯ–ಮನುಷ್ಯರ ಸಂಬಂಧದ ವಿವಿಕ್ಷಣೆಯಿಲ್ಲ. ಬದಲಿಗೆ ಮನುಷ್ಯೇತರ ಜೀವಿಗಳೊಂದಿಗೆ ಸಂಬಂಧ ವನಸ್ಪತಿ ಮತ್ತು ಅನ್ಯ ಜೀವರಾಶಿಗಳೊಂದಿಗೆ ಸಂಬಂಧ ಅಭಿಪ್ರೇತವಾಗಿದೆ. ಈ ಎಲ್ಲ ಜೀವ–ಸಮೂಹ

ಕೂಡಿ ಒಂದು ಸಾಮಾನ್ಯ ಜೀವನ. ಅದರ ಉತ್ಪತ್ತಿಗಾಗಿ ಹಾಗೂ ನಿರ್ವಾಹಕಕ್ಕಾಗಿ ಯಾವೊಂದು ವಿಶಿಷ್ಟ ಪರಿಸ್ಥಿತಿ ಅವಶ್ಯಕವಾಗಿದೆಯೋ ಅದನ್ನು ಗಮನದಲ್ಲಿರಿಸಿಕೊಂಡು (ನ್ಯೂ ಇಕಾಲಜಿ) ಎಂಬ ಶಬ್ದ ಪ್ರಯೋಗಕ್ಕೆ ಬಂದಿದೆ. ಇತ್ತೀಚಿಗೆ ಕೃಷಿ ವಿಜ್ಞಾನದಲ್ಲಿ 'ಲಿವಿಂಗ್ ಸಾಯಿಲ್' ಅಂದರೆ ಮಣ್ಣಿನಲ್ಲಿರುವ ಜೀವ-ಜಂತುಗಳ ಸ್ಥಾನವನ್ನು ಕುರಿತು ವಿಚಾರ ಮಾಡಲಾಗುತ್ತದೆ. ಅದರಲ್ಲಿ ಇಕಾಲಜಿಯ ಅಂತರ್‌ಭಾವವಿರುತ್ತದೆ. ಈ ಎಲ್ಲ ವಿಚಾರಕ್ಕೆ (ನ್ಯೂ ಇಕಾಲಜಿಮ್) ಎಂಬ ಹೆಸರನ್ನು ಪರ್‌ಕಿಸ್ ಕೊಟ್ಟಿದ್ದಾನೆ. ಇದಾದ ನಂತರ ಮೂರನೆಯ ವಿಷಯ- ನ್ಯೂ ಯ್ಯುಮಾನಿಟಿಸಮ್. ಮನುಷ್ಯನ ಈ ತ್ರಿವಿಧ ಸಮದರ್ಭದ ಅದಿಷ್ಠಾನ ಒಂದು ಮೂಲಭೂತ ಸರ್ವವ್ಯಾಪಿ ಚೈತನ್ಯದ ಬ್ರಹ್ಮಾಂಡ ವ್ಯಾಪಿ ಜೀವನವಿದೆ. ಅದು ಹ್ಯೂಮಾನಿಟಿಸಂ. ಈ ತತ್ವವನ್ನು ಕೆಲವರು ಜೀವನ ಶಕ್ತಿಯೆಂದು ಕರೆಯುತ್ತಾರೆ. ಇನ್ನು ಕೆಲವರು ಇಂಧನ ಶಕ್ತಿಯೆಂದು ಕರೆಯುತ್ತಾರೆ. ಕೆಲವರು ಬ್ರಹ್ಮನೆಂದು ಕರೆದರೆ ಇನ್ನು ಕೆಲವರು ಪರಮಾತ್ಮತತ್ವ ಎಂದರು. ಹೀಗೆ ಅನೇಕ ಹೆಸರುಗಳನ್ನು ಕೊಡಲಾಗಿದೆ. ಸಾರಾಂಶವಿಷ್ಟೆ- ಮಾನವೀಯ ಸಂಬಂಧದ ಮೂಲದಲ್ಲಿ ಒಂದು ಅಧಿಷ್ಠಾನಭೂತ, ಅಖಂಡ ಮತ್ತು ಸರ್ವವ್ಯಾಪಿ ಚೈತನ್ಯವಿದೆ.

ಇಷ್ಟೊಂದು ಆಶಯ ಸಂದರ್ಭ ಪರಿವರ್ತನೆಗೆ ಸಂಬಂಧಿಸಿದ್ದು. ಇಷ್ಟೊಂದೆಲ್ಲವನ್ನು ಏಕೆ ಹೇಳಬೇಕಾಯಿತು? ಹಳೆಯ ಸಮಾಜವಾದಿಗಳು ಅಂದರೆ ಪರಂಪರವಾದಿ ಸಮಾಜವಾದಿಗಳು ಮತ್ತು ಇಂದಿನವರೆಗಿನ ಸಾಮ್ಯವಾದಿಗಳು ಉತ್ಪಾದನೆ ಮತ್ತು ವಿತರಣೆಯ ಸಂಬಂಧದೊಂದಿಗೆ ಸಂದರ್ಭವು ಬದಲಾಗುತ್ತದೆಂದಷ್ಟೇ ವಿಚಾರ ಮಾಡಿದ್ದಾರೆ. ಆದರೆ ಇದು ಕ್ರಾಂತಿಯ ಸಮಗ್ರ ವಿಚಾರವಲ್ಲ.

ನಂತರ ಬಂದಂಥ ಸಮಾಜವಾದಿಗಳು ವಿಶೇಷವಾಗಿ ನಮ್ಮ ದೇಶದ ಕೆಲ ಪ್ರಮುಖ ಸಮಾಜವಾದಿಗಳು ಮಾರ್ಕ್ಸ್ ಪ್ರತಿಪಾದಿಸಿದ ದೋಷಗಳನ್ನು ಪೂರ್ಣಮಾಡಿದರು. ಮತ್ತು ಅದನ್ನು ಕುಂಠಿತಗೊಳಿಸಿದರೂ ಕೂಡ. ಅನೇಕ ವರ್ಷಗಳ ಹಿಂದೆ ಪಂಚಮಡಿಯಲ್ಲಿ ಸಮಾಜವಾದಿ ಪಕ್ಷದ ಒಂದು ಸಭೆ ನಡೆಯಿತು. ಅಲ್ಲಿ ಡಾಕ್ಟರ್ ರಾಮ ಮನೋಹರ ಲೋಹಿಯಾ ಸಮಾಜವಾದದ ನವ ಸಂಸ್ಕರಣೆಯ ಪ್ರಬಂಧವನ್ನು ಮಂಡಿಸಿದರು. ಅದು ಪಂಚಮಡಿ ತೀಸಿಸ್ ಎಂದು ಪ್ರಸಿದ್ಧವಾಯಿತು. ಇತಿಹಾಸದ ಅನೇಕ ಘಟನೆಗಳು ತುಂಬ ತಮಾಷೆಯದ್ದಾಗಿರುತ್ತವೆ. ಇಲ್ಲಿರುವ ಕಮ್ಯೂನಿಸ್ಟ್ ಪಾರ್ಟಿಯ ಸ್ಥಾಪನೆ ರಷ್ಯಾದಲ್ಲಾಯಿತು. ಆಗ ಇಲ್ಲಿಯ ಕಮ್ಯೂನಿಸ್ಟ್ ಪಕ್ಷಕ್ಕೆ ಇಂಡಿಯನ್ ಕಮ್ಯೂನಿಸ್ಟ್ ಪಾರ್ಟಿ ಆಫ್ ಇಂಡಿಯಾ ಎಂದು ಕರೆಯಬೇಕೆಂಬ ಚರ್ಚೆನಡೆಯಿತು. ಅಂದರೆ ಕಮ್ಯೂನಿಸಂನಲ್ಲೂ ಕೂಡ ಭಾರತೀಯ ಮತ್ತು ಇನ್ನೊಂದು ಅಭಾರತೀಯ. ಈ ರೀತಿಯ ಶ್ಲೇಶ ಹೊರಡುವುದು. ಹೀಗೆ ಅಲೋಚಿಸಿ ಕಮ್ಯೂನಿಸ್ಟ್ ಪಾರ್ಟಿ ಆಫ್ ಇಂಡಿಯಾ ಎಂದು ನಾಮಕರಣ ಮಾಡಲಾಯಿತು. ಈ ಪಕ್ಷವನ್ನು ಸ್ಥಾಪಿಸಿದವರಲ್ಲಿ ಮಾನವೇಂದ್ರನಾಥ್‌ರಾಯ್ ಕೂಡ ಇದ್ದರು. ನಂತರ ಅವರು ಮಾರ್ಕ್ಸ್‌ನನ್ನು ನಿರಾಕರಿಸಿ ನವಮಾನವತಾವಾದ ಅಥವಾ ಕ್ರಾಂತಿಕಾರಿ

ಮಾನವತಾವಾದದ ಪ್ರವರ್ತಕರಾದರು. ಒಂದು ಮೌಲಿಕ ವಿಚಾರವನ್ನು ಜಗತ್ತಿನ ಮುಂದಿಟ್ಟರು. ಅದರ ಮುಖ್ಯ ವಿಚಾರ ಕೇವಲ ಉತ್ಪಾದನೆ ಮತ್ತು ವಿತರಣೆಯ ಪರಿಸ್ಥಿತಿಯನ್ನು ಬದಲಿಸಿದಾಕ್ಷಣ ಕ್ರಾಂತಿಯಾಯಿತೆಂದು ಹೇಳಲು ಸಾಧ್ಯವಿಲ್ಲ. ಬೇರೆ ಕ್ಷೇತ್ರಗಳಲ್ಲೂ ಕೂಡ ಬದಲಾವಣೆ ತರುವುದು ಕ್ರಾಂತಿಯ ಅಭೀಷ್ಟವಾಗಿದೆ.

ಮೊದಲು ನಾವು ಸಂದರ್ಭ ಪರಿವರ್ತನೆಯ ವಿಚಾರವನ್ನು ಮಾಡಬೇಕು. ಮೌಲ್ಯ ಪರಿವರ್ತನೆಯ ವಿಚಾರವನ್ನು ನಂತರ ಮಾಡುವ. ಪರಿಸ್ಥಿತಿ ಬದಲಾದರೆ ಮನುಷ್ಯ ಬದಲಾಗುತ್ತಾನೆಂದು ತಿಳಿಯಲಾಗುತ್ತಿದೆ. ಆದ್ದರಿಂದ ಮೊದಲು ಸಂದರ್ಭ ಪರಿವರ್ತನೆಯ ವಿಚಾರ ಮಾಡೋಣ.

ಇಂದು ಮನುಷ್ಯ ಯಾವ ಸ್ಥಿತಿಯಲ್ಲಿ ಇರುತ್ತಾನೋ ಆ ಪರಿಸ್ಥಿತಿಯಲ್ಲಿ ಪರಿವರ್ತನೆಯಾಗಬೇಕು. ಪರಿಸ್ಥಿತಿಯನ್ನೇಕೆ ಬದಲಾಯಿಸಬೇಕು. ಬದಲಾಯಿಸುವುದರಿಂದ ಪ್ರಯೋಜನವೇನು? ಲೆನಿನ್ ಒಂದು ಉದ್ದೇಶ ಹೇಳಿದ. ಅವನು ಒಂದು ಕಡೆ ಹೀಗೆ ಹೇಳಿದ್ದಾನೆ: ಮನುಷ್ಯನ ಬಳಿ ಯಾವುದಾದರೂ ಹೆಚ್ಚು ಮೌಲ್ಯಯುತ ವಸ್ತು ಇದ್ದರೆ ಅದು ಅವನ ಜೀವನ; ಹಾಗದರೆ ಆ ಜೀವವನ್ನು, ಆ ಪ್ರಾಣವನ್ನು ಯಾರಿಗೋಸ್ಕರ ಸವೆಸಬೇಕು. ಯಾವುದಕ್ಕಾಗಿ ಇದೆಲ್ಲವನ್ನು ಸವೆಸಿದ ಮೇಲೂ ನಮಗಾಗಲಿ ಅಥವಾ ಬೇರೆಯವರಿಗಾಗಲಿ ಪಶ್ಚಾತ್ತಾಪವಾಗುವುದಾದರೆ ಅಂಥ ಪ್ರಯೋಜನ ಕೆಲಸಕ್ಕೆ ಬಾರದ್ದು. ನಂತರ ಪಶ್ಚಾತ್ತಾಪವಾಗದೆ ಇರುವಂಥ ಪ್ರಯೋಜನ ಯಾವುದಿರಲು ಸಾಧ್ಯ? ಮಾನವನ ವಿಮುಕ್ತಿ. ಸಮಸ್ತ ಮಾನವರ ವಿಮೋಚನೆ. ಇದೊಂದೇ ಪ್ರಯೋಜನವಾಗಿರಬಲ್ಲದು. ಬೇರೆ ಇನ್ನಾವುದೂ ಪ್ರಯೋಜನವಾಗಲಾರದು. ಆದರೆ ಮಾನವ ಮಾತ್ರನ ಸ್ವಾತಂತ್ರ್ಯವನ್ನು ಸ್ಥಾಪಿಸಬೇಕೆಂದರೆ ಪ್ರತಿಯೊಬ್ಬ ಮನುಷ್ಯನ ಸಮ್ಮತಿಯ ಮೇರೆಗೆ ಪರಿಸ್ಥಿತಿ–ಪರಿವರ್ತನೆಯಾಗಬೇಕಾಗುತ್ತದೆ. ಕನಿಷ್ಠ ಸಂಖ್ಯೆಯ ಜನರಿಗಾದರೂ ಅನುಕೂಲತೆಯಾಗಲೇ ಬೇಕು. ಈ ಬಗ್ಗೆ ಲೆನಿನ್‌ನ ಹೇಳಿಕೆಯೇನು? ಅವನ ಪ್ರಕಾರ ಸ್ವಾಂತತ್ರ್ಯದ ಅರ್ಥವನ್ನು ಎಲ್ಲಾ ಮಾನವರು ತಿಳಿದುಕೊಳ್ಳಬೇಕು. ಸ್ವಾತಂತ್ರ್ಯಕ್ಕಾಗಿ ಎಲ್ಲರೂ ಅನುಕೂಲವಾಗಬೇಕೆಂದು ನಾವು ದಾರಿಕಾಯುತ್ತಾ ಕುಳಿತರೆ ಆಗ ಕಡಿಮೆಯೆಂದರೆ ಐದುನೂರು ವರ್ಷಗಳ ವರೆಗೆ ಸಮಾಜವಾದ ಬರಲಾರದು. ಅದರ ಆಸೆಯನ್ನೇ ನಾವು ಇಟ್ಟುಕೊಳ್ಳಲು ಸಾಧ್ಯವಾಗಲಾರದು. ಆದ್ದರಿಂದ ಯಾರ ಮನಸ್ಸಿನಲ್ಲಿ ಸ್ವಾತಂತ್ರ್ಯದ ಉತ್ಕಂಠತೆ ಹುಟ್ಟಿತೋ ಮತ್ತು ಯಾರಿಗೆ ಸ್ವಾತಂತ್ರ್ಯಕ್ಕಾಗಿ ಒದ್ದಾಟ ಆಗುತ್ತಿದೆಯೋ ಅಂಥ ಜನರು ಸಂಘಟಿತರಾಗಿ ಬೇರೆಯವರನ್ನು ಮುಕ್ತಗೊಳಿಸಬೇಕು. ಇಂಥ ಜನರ ಸಂಘಟನೆಯ ಹೆಸರು 'ಕ್ರಾಂತಿಕಾರಿದಳ' ಎಂದು ಹೆಸರು. ಆ ದಳ ಕ್ರಾಂತಿಯನ್ನು ತರುವುದು.

ದಳ ಎಂದು ಯಾವುದನ್ನು ಕರೆಯುತ್ತಾರೆ, ಸ್ವಲ್ಪ ನೋಡೋಣ. ಇದಕ್ಕಾಗಿ ಸ್ವಲ್ಪ ಅಧ್ಯಯನ ಮಾಡಬೇಕಾಗುವುದು. ಯಾವುದಕ್ಕೆ ಅಧ್ಯಯನವೆನ್ನುತ್ತಾರೆ? ಯಾವುದು ನಮಗೆ ಗೊತ್ತಿದೆಯೋ ಅದು ಗಟ್ಟಿಯಾಗಬೇಕು ಮತ್ತು ಏನೆಲ್ಲ ನಮಗೆ

ಗೊತ್ತಿಲವೋ ಅದು ಗೊತ್ತಾಗುತ್ತಾ ಹೋಗಬೇಕು. ಇದು ಅಧ್ಯಯನ.

ಯಾವ ವಿಷಯ ಗೊತ್ತಾಗಿಲ್ಲವೋ ಅದನ್ನು ತಿಳಿಯಬೇಕಾದುದು ಅಧ್ಯಯನದ ಒಂದು ಭಾಗ. ಮಗು ಮೊದಲನೆಯ ಕಕ್ಷೆಯಿಂದ ಎರಡನೆಯ ಕಕ್ಷೆಗೆ ಹೋಯಿತು ಇದರ ಅರ್ಥವೇನು? ಮೊದಲನೆಯ ತರಗತಿಯಲ್ಲಿ ಅವನಿಗೆ ಏನು ಬರುತ್ತಿತ್ತು ಅದು ಗಟ್ಟಿಯಾಯಿತು ಮತ್ತು ಎರಡನೆಯ ತರಗತಿಯ ವಿಷಯ ಅವನಿಗೆ ತಿಳಿದಿರಲಿಲ್ಲ. ಅದನ್ನು ಆತ ಕಲಿಯಬೇಕಿದೆ. ದಳದ ಅರ್ಥವೇನು? ಇದರಲ್ಲಿ ಮೂರು ಶಬ್ದಗಳ ಅರ್ಥವನ್ನು ಗಮನದಲ್ಲಿಟ್ಟುಕೊಳ್ಳಬೇಕಿದೆ. ಸಂಪ್ರದಾಯ ಅಂದರೆ ಸಂಘಟಿತ ವಿಚಾರ ಕೇವಲ ವಿಚಾರವಲ್ಲ, ಶುದ್ಧ ವಿಚಾರವಲ್ಲ. ಶುದ್ಧ ವಿಚಾರ ಮುಕ್ತವಾಗಿರುತ್ತದೆ. ಅದು ಆಕಾಶಕ್ಕೂ ಮೀರಿ ವ್ಯಾಪಕವಾಗಿರುತ್ತದೆ. ಮನುಷ್ಯನ ವಿಚಾರಕ್ಕೆ ಯಾವುದೇ ಕ್ಷಿತಿಜವಿರುವುದಿಲ್ಲ, ಅದಕ್ಕೆ ಮಿತಿಯಿಲ್ಲ. ವಿಚಾರವೇ ಮನುಷ್ಯ. ವಿಚಾರವೆಂದರೆ ಇಂಥದೇ ನಿರ್ದಿಷ್ಟ ವಿಚಾರವಲ್ಲ, ಕೇವಲ ವಿಚಾರ. ವಿಚಾರ ಮಾಡುವುದು ಮನುಷ್ಯನ ಕ್ಷಮತೆ. ಯಾವಾಗ ಈ ವಿಚಾರ ಸಂಘಟಿತವಾಗುತ್ತದೋ ಆಗ ಅದು ಸಂಪ್ರದಾಯವಾಗುತ್ತದೆ. 'ಐಡಿಯಾಲಜಿ' ಆಗುತ್ತದೆ. ಯಾವಾಗ ವಿಚಾರ ಅಧ್ಯಾತ್ಮಿಕ ಕ್ಷೇತ್ರದಲ್ಲಿ ಸಂಘಟಿತವಾಗುತ್ತದೊ ಆಗ ಅದು 'ಡಿನಾಮಿನೇಷನ್' ಧರ್ಮಪಂಥ ಎಂದು ಕರೆಯಲಾಗುತ್ತದೆ. ಅದು ಧಾರ್ಮಿಕ ಸಂಪ್ರದಾಯವಾಗುತ್ತದೆ, ಪಂಥವಾಗುತ್ತದೆ. ಅದೇ ರೀತಿ ಅನ್ಯ ಕ್ಷೇತ್ರಗಳಲ್ಲೂ ಕೂಡ ವಿಚಾರ ಸಂಘಟಿತವಾದರೆ ಅದು ಐಡಿಯಾಲಜಿಯಲ್ಲಿ ವಿಚಾರಧಾರೆಯಲ್ಲಿ ಪರಿಣಿತವಾಗುತ್ತದೆ. ವಿಚಾರಧಾರೆಯಾಗಿ ರೂಪಗೊಂಡರೆ ವಿಚಾರಶೇಷ ಉಳಿಯುವುದಿಲ್ಲ. ವಿಚಾರ ಸಂಘಟಿತವಾದ ಕೂಡಲೆ ಅದು ಮುಗಿದಂತೆ. ಸಂಘಟಿತ ವಿಚಾರ ಎಂದರೆ ಮೃತವಿಚಾರ. ಈ ವಿಚಾರ ಶವ.

* * *

ಮೀರಾಬೆಹನ್ ದೃಷ್ಟಿಯಲ್ಲಿ ಹಿಮಾಲಯ

ಮೂಲ – ಜಾರ್ಜ್ ಆಲ್ಫ್ರೆಡ್ ಜೇಮ್ಸ್– ಕನ್ನಡಕ್ಕೆ : ಸುರೇಂದ್ರ ಕೌಲಗಿ

ಪಶುಲೋಕ ಆಶ್ರಮವು ಅಂಥ ಸಮಾಧಾನಕರವಾದ ಯಶಸ್ಸಿನ ಗಾಥೆಯಾಗಿರಲಿಲ್ಲ. ಅನೇಕ ಯೋಜನೆಗಳಿಗೆ ಸರ್ಕಾರದ ಸಹಾಯ ಲಭ್ಯವಿತ್ತು. ಅದೇ ನೌಕರಶಾಹಿ ತಮ್ಮ ಉದ್ದೇಶಕ್ಕೆ ಪ್ರತಿಕೂಲವಾಗಿರುವಂತೆ ಮೀರಾಬಾಯಿಗೆ ಅನಿಸಿತು. ಅಂತಿಮವಾಗಿ ಯಾವುದಾದರೊಂದು ಸ್ವಯಂ ಸಂಸ್ಥೆ ಮೂಲಕ ಕೆಲಸಮಾಡುವುದೇ ಉತ್ತಮವೆಂದು ಅವರಿಗೆ ಮನವರಿಕೆಯಾಯಿತು. ಆದ್ದರಿಂದ ಅವರು ಪಶುಲೋಕಕ್ಕಾಗಿ ಮಾಡಿದ್ದ ತಮ್ಮ ಯೋಜನೆ ಕೈಬಿಟ್ಟು ಪಶುಲೋಕ ಸೇವಾಮಂಡಲ ಎಂಬ ಹೆಸರಿನ ನೊಂದಾಯಿತ ಸ್ವಯಂ ಸಂಸ್ಥೆ ಮೂಲಕ ಕೆಲಸ ಮಾಡಲು ನಿಶ್ಚಯಿಸಿದರು. ಆ ಸಂಸ್ಥೆಯ ಉದ್ದೇಶ ಅವರು ಆಲೋಚಿಸಿದ್ದಂತೆ ಈ ಪ್ರಕಾರವಿತ್ತು. "ಮನುಷ್ಯರು ಮತ್ತು ಪ್ರಾಣಿಗಳು ನಿಸರ್ಗದೊಂದಿಗೆ ಜೊತೆಸೇರಿ ಬಾಪೂರವರ ಆದರ್ಶದ ವಿಶ್ವ ಶಾಂತಿಯ ಉದ್ದೇಶ ನೆರವೇರಿಸಲು ವಿಕೇಂದ್ರೀಕೃತ ಸಮಾಜವನ್ನು ಸ್ಥಾಪಿಸುವುದು. ಅಲ್ಲಿ ಮಾನವ ತನ್ನ ಹಳ್ಳಿಯಲ್ಲಿ ತನ್ನ ಪಶುಗಳೊಂದಿಗೆ ಸ್ವಾವಲಂಬಿತವಾಗಿ, ಆರೋಗ್ಯವಾಗಿ ಮತ್ತು ಸಂತೋಷವಾಗಿರುವನು" ಆದರೆ ಈ ಯೋಜನೆ ಕೂಡ ಅಂಥ ಸಮಾಧಾನಕರ ಯಶಸ್ಸಿನ ಕಥೆಯಾಗಿರಲಿಲ್ಲ. ಈ ಪ್ರಯತ್ನಕ್ಕಾಗಿ ದೊರೆಯುತ್ತಿದ್ದ ಅಲ್ಪ ಸ್ವಲ್ಪ ಧನಸಹಾಯ ಕ್ರಮೇಣ ಕ್ಷೀಣಗೊಂಡಿತು. ಆದ್ದರಿಂದ ಕೊನೆಗೆ ಪಶುಲೋಕ ಆಶ್ರಮಕ್ಕೆ ಸಂಬಂಧಿಸಿದ ಭೂಮಿಯನ್ನು ಉತ್ತರಪ್ರದೇಶ ಸರ್ಕಾರಕ್ಕೆ ಹಿಂದಿರುಗಿಸಬೇಕೆಂದು ತೀರ್ಮಾನಿಸಿದರು. ತಾವು ಇಟ್ಟುಕೊಂಡಿದ್ದ ಮೊದಲನೆ ಉದ್ದೇಶವನ್ನು ಈಡೇರಿಸಲು ಸಾಧ್ಯವಾಗಬಹುದಾದ ಬೇರೊಂದು ಸ್ಥಳವನ್ನು ಹುಡುಕಲಾರಂಭಿಸಿದರು. ಮೀರಾಬೆಹನ್‌ರೊಂದಿಗೆ ಸುಂದರಲಾಲ್‌ರ ಭೇಟಿಯಾದಾಗ ಸುಂದರಲಾಲ್‌ರು ಪ್ರಜಾಮಂಡಲದ ಕಾರ್ಯದರ್ಶಿಯಾಗಿದ್ದರೆಂದು ಮೇಲೆ ಪ್ರಸ್ತಾಪಿಸಲಾಗಿದೆ. ೧೯೪೯ರಲ್ಲಿ ಹೃಷೀಕೇಶ್ ಬಳಿ ಪಶುಲೋಕದಲ್ಲಿ ಇದ್ದಾಗಲೇ ಮೀರಾಬೆಹನ್ ತಮ್ಮ ಮನಸ್ಸಿನಲ್ಲಿ ರೂಪುಗೊಳ್ಳುತ್ತಿದ್ದ ಆಶ್ರಮಕ್ಕಾಗಿ ಯಾವುದಾದರೂ ಸ್ಥಳ ಸಿಗುವುದೇ ಎಂದು ಆಲೋಚಿಸುತ್ತಾ ಕುದುರೆ ಸವಾರಿ ಮಾಡುತ್ತಿದ್ದರು. ಹೀಗೆ ಓಡಾಡುತ್ತಿದ್ದಾಗ ಮೀರಾಬೆಹನ್ ತೆಹರಿಗೆ ಬಂದರು. ಅವರ ಕೆಲಸದ ಬಗ್ಗೆ ಕೇಳಿದ್ದ ಮತ್ತು ಗಾಂಧೀಯವರೊಂದಿಗಿನ ನಿಕಟ ಸಂಬಂಧವನ್ನು ತಿಳಿದಿದ್ದ ಮತ್ತು ಗಾಂಧೀಯವರ ಆದರ್ಶಗಳಿಗೆ ಅವರ ಬದ್ಧತೆಯನ್ನು ತಿಳಿದಿದ್ದ ಸುಂದರಲಾಲ್ ಮೀರಾಬೆಹನ್‌ರ ಭೇಟಿಗಾಗಿ ಹೋದರು. ಮೀರಾಬೆಹನ್ ದೇಶದ ಆಡಳಿತ ವರ್ಗಕ್ಕೆ ಸೇರಿದವರಾಗಿದ್ದುದರಿಂದ ಮತ್ತು ಮಹಿಳೆಯಾಗಿದ್ದುದರಿಂದ ಅತಿಥಿಗಳಿಗೆ ಮೀಸಲಾಗಿದ್ದ ದೊಡ್ಡ ಮನೆಯನ್ನು ಅವರಿಗೆ ಕೊಡಲಾಗಿತ್ತು. ಆದರೆ ಮೀರಾಬೆಹನ್ ಇದ್ದ ಕೋಣೆಗೆ ಸುಂದರಲಾಲ್ ತಲುಪಿದಾಗ ಆಕೆ ನೆಲದ ಮೇಲೆ ಕುಳಿತು ಎತ್ತಿಕೊಂಡು

ಓಡಾಡಬಹುದಾದ ಚರಕದ ಮೇಲೆ ನೂಲು ತೆಗೆಯುತ್ತಿದ್ದರು. ಕೂಡಲೆ ಅವರ ಮಧ್ಯೆ ಸಮಾನಮನಸ್ಕತೆ ಉಂಟಾಯಿತು. ಗಾಂಧೀ ವಿಚಾರದ ಕಾರ್ಯಕರ್ತರಲ್ಲಿ ತತ್ವಶಾಸ್ತ್ರ ಮತ್ತು ಕೃತಿ, ಅಂತರಂಗ ಮತ್ತು ಬಹಿರಂಗದಲ್ಲಿ ಯಾವುದೇ ವ್ಯತ್ಯಾಸವಿರುವುದಿಲ್ಲ. ಗಾಂಧೀ ವಿಚಾರಿಗಳು ಯುವಕಾರ್ಯಕರ್ತರನ್ನು ಪ್ರೋತ್ಸಾಹಿಸುವುದಕ್ಕೆ ಯಾವಾಗಲೂ ಉತ್ಸುಕರಾಗಿರುತ್ತಾರೆ. ಗಾಂಧೀ ವಿಚಾರ ಚಳುವಳಿಯಲ್ಲಿ ಸ್ಪರ್ಧಾ ಮನೋಭಾವನೆ ಇಲ್ಲ. ರಾಜನೀತಿ ಹೊಸಬರಿಗೆ ಹೆಚ್ಚು ಅವಕಾಶ ಕೊಡುವುದಿಲ್ಲ. ಆದರೆ ಗಾಂಧೀವಿಚಾರವಾದಿಗಳು ಹೊಸ ಕಾರ್ಯಕರ್ತರಿಗೆ ಪ್ರಶಿಕ್ಷಣ ಕೊಡಲು ಅವರಿಗೆ ಸೇವೆಯ ತಿಳುವವಳಿಕೆ ಮತ್ತು ಅವಕಾಶ ಒದಗಿಸಲು ಯಾವಾಗಲೂ ಸಿದ್ಧರಿರುತ್ತಾರೆ. ಮಿರಾಬೆಹನ್ ಈಗ ೫೬ ವರ್ಷದವರಾಗಿದ್ದರು. ಆಗ ಸುಂದರಲಾಲ್ ೨೨ನೇ ವರ್ಷದವರಾಗಿದ್ದರು. ಸುಂದರಲಾಲ್‌ರು ತಮಗಿಂತ ಚಿಕ್ಕವನಾಗಿದ್ದುದರಿಂದ ಅವರ ಬಗ್ಗೆ ಮೀರಾಬೆಹನ್ ವಿಶೇಷ ಆಸಕ್ತಿಯನ್ನು ವಹಿಸಿದರು. ಸುಂದರಲಾಲ್‌ರ ಮಟ್ಟಿಗೆ ಮೀರಾಬೆಹನ್ ಗಾಂಧೀ ಸಿದ್ಧಾಂತದ ಪ್ರತಿರೂಪವೇ ಆಗಿದ್ದರು. ಅವರು ಭಾರತೀಯ ಜೀವನದ ಸಾರವನ್ನು ಸಂಗ್ರಹಿಸಿಕೊಂಡಿದ್ದರು ಮತ್ತು ಜೀರ್ಣಿಸಿಕೊಂಡಿದ್ದರು. ಭಾರತೀಯ ಧರ್ಮವು ಜೀವನದ ಎಲ್ಲ ಬಗೆಯ ಸ್ವರೂಪಗಳನ್ನು ಗೌರವಿಸುತ್ತದೆ. ಆದ್ದರಿಂದ ಭಾರತೀಯರು ಮರ, ಹಸು ಮತ್ತು ಹಾವನ್ನು ಕೂಡ ಪೂಜಿಸುತ್ತಾರೆ. ತಾತ್ಪರ್ಯವೇನೆಂದರೆ ಭೂಮಿಯ ಮೇಲಿರುವ ಎಲ್ಲಾ ಜೀವಿಗಳ ಬಗ್ಗೆ ಪೂಜ್ಯ ಭಾವನೆ ಇರುವುದು. ಮೀರಾಬೆಹನ್ ಇಂಗ್ಲಿಷ್ ಮಹಿಳೆಯಾಗಿದ್ದರೂ ಕೂಡ ಅವರು ಭಾರತೀಯರಿಗಿಂತಲೂ, ಭಾರತೀಯರಾಗಿರುವುದನ್ನು ಸುಂದರಲಾಲ್ ಅವರಲ್ಲಿ ಕಂಡುಕೊಂಡರು.

ಅವರ ಪ್ರಾರಂಭಿಕ ಮಾತುಕತೆಯ ನಂತರ ಮೀರಾಬೆಹನ್ ಹೃಷೀಕೇಶ ಬಳಿಯಿರುವ ತಮ್ಮ ಆಶ್ರಮಕ್ಕೆ ಸುಂದರಲಾಲರನ್ನು ಆಹ್ವಾನಿಸಿದರು. ಆನಂತರ ಸುಂದರಲಾಲ್ ಅಲ್ಲಿಗೆ ಆಗಾಗ್ಗೆ ಹೋಗಿ ಬರುತ್ತಿದ್ದರು. ಮೀರಾಬೆಹನ್ ಅಂತಿಮವಾಗಿ ತಾವು ಹುಡುಕುತ್ತಿದ್ದ ಸ್ಥಳ ದೊರೆತಿದೆ ಎಂದು ಭಾವಿಸಿದರು. ಅದು ಪೈನ್ ಮರಗಳಿಂದ ಕೂಡಿದ ಮತ್ತು ಅನೇಕ ಹಿಮಾಚ್ಛಾದಿತ ಪರ್ವತ ಶಿಖರಗಳನ್ನು ಹೊಂದಿದ ರಮ್ಯ ಪ್ರಕೃತಿ ತಾಣವಾಗಿತ್ತು. ಅದು ತೆಹರಿಯಿಂದ ಇಪ್ಪತ್ತಾರು ಮೈಲಿ ದೂರದಲ್ಲಿದ್ದ ಜೂನ್‌ಲಿ ಎಂಬ ಹಳ್ಳಿಯ ಬಳಿ ಇತ್ತು. ತೆಹರಿಯಲ್ಲಿ ಸುಂದರಲಾಲ್ ಕೆಲಸಮಾಡುತ್ತಿದ್ದರು. ಅರಣ್ಯ ಇಲಾಖೆಯವರು ಮೀರಾಬೆಹನ್‌ಗೆ ಎರಡು ಎಕರೆ ಭೂಮಿಯನ್ನು ಲೀಸ್‌ಗೆ ಕೊಟ್ಟರು. ಅಲ್ಲಿ ಅವರು ಆಶ್ರಮವನ್ನು ಸ್ಥಾಪಿಸಿ ಅದಕ್ಕೆ ಗೋಪಾಲ ಆಶ್ರಮ ಎಂದು ನಾಮಕರಣ ಮಾಡಿದರು. ಆ ಹೆಸರನ್ನು ಅವರು ಭಗವಾನ್ ಶ್ರೀಕೃಷ್ಣ ಗೋಪಾಲಕನಾಗಿ ನಿರ್ವಹಿಸಿದ ಪಾತ್ರದಿಂದ ಪಡೆದುದ್ದಾಗಿತ್ತು. ಮೀರಾಬೆಹನ್‌ರ ಜನ್ಮ ಶತಾಬ್ದಿಯನ್ನು ಆಚರಿಸಲಾಯಿತು. ಆಗ ಪ್ರಕಟಿಸಲಾದ ನೆನಪಿನ ಗ್ರಂಥದಲ್ಲಿ ಮೀರಾಬೆಹನ್‌ರ ಸಂಗಾತಿಯಾಗಿದ್ದ ಕೃಷ್ಣಮೂರ್ತಿ ಗುಪ್ತ ಎಂಬುವವರು ಆ ಗ್ರಂಥದಲ್ಲಿ ಹೀಗೆ ತಮ್ಮ ಸ್ಮರಣೆಯನ್ನು ವ್ಯಕ್ತಪಡಿಸಿದ್ದಾರೆ. "ಮಿರಾಬೆಹನ್ ಗೋಪಾಲ ಆಶ್ರಮದಲ್ಲಿ ಇದ್ದಾಗ ನಾನು ಅವರನ್ನು ಆಗಾಗ್ಗೆ ಭೇಟಿ ಮಾಡಲು ನಡೆದುಕೊಂಡು

ಹೋಗುತ್ತಿದ್ದೆ. ತೆಹರಿಯಿಂದ ಹಾಗೆ ನಡೆದು ಹೋಗುವಾಗ ಕೆಲವೊಂದು ಸಲ ಬಹುಗುಣರು ಜೊತೆಗಿರುತ್ತಿದ್ದರು. ಸ್ವಾತಂತ್ರ್ಯ ಬಂದು ಹೊಸ ರಾಷ್ಟ್ರೀಯ ಸರ್ಕಾರ ರಚನೆಯಾದ ಮೇಲೆ ಅಭಿವೃದ್ಧಿ ಎಂಬುದು ರಾಷ್ಟ್ರೀಯ ಆದ್ಯತೆಯಾಯಿತು. ಅಭಿವೃದ್ಧಿ ಯೋಜನೆಗಳು ಸಾಕಷ್ಟು ದೂರದರ್ಶಿತ್ವ ಹೊಂದಿವೆಯೆ ಹೊರತು ಜನರಿಗೆ ಲಾಭಕರವಾಗಿವೆಯೇ ಇತ್ಯಾದಿಯಾಗಿ ಮೀರಾಬೆಹನ್ ಪ್ರಶ್ನಿಸಿದರು. ದೊಡ್ಡ ಕೈಗಾರಿಕಾ ಯೋಜನೆಗಳನ್ನು ಯೋಜಿಸಲಾಗುತ್ತಿದೆ. ಅವುಗಳಿಗಾಗಿ ಬಹುದೊಡ್ಡ ಪ್ರಮಾಣದ ಹಣವನ್ನು ಬೇರೆ ದೇಶಗಳಿಂದ ಪಡೆಯಲಾಗುತ್ತಿದೆ. ಇದೆಲ್ಲವೂ ಸ್ವತಂತ್ರ ಭಾರತಕ್ಕಾಗಿ ಕಲ್ಪಿಸಿಕೊಂಡಿದ್ದ ವಿಚಾರಕ್ಕೆ ಭಿನ್ನವಾಗಿವೆ. ತಮ್ಮ ವಿಚಾರಗಳನ್ನು ಬಹಿರಂಗಪಡಿಸುವುದಕ್ಕಾಗಿ ಮೀರಾಬೆಹನ್ ಒಂದು ಮಾಸ ಪತ್ರಿಕೆಯನ್ನು ಪ್ರಾರಂಭಿಸಿದರು. ಅದರ ಹೆಸರು 'ಬಾಪೂರಾಜ್ ಪತ್ರಿಕಾ'. ಆ ಪತ್ರಿಕೆ ಇಂಗ್ಲಿಷ್, ಹಿಂದಿ, ಗುಜರಾತಿ, ತಮಿಳು ಮತ್ತು ತೆಲಗು ಭಾಷೆಗಳಲ್ಲಿ ಪ್ರಕಟವಾಗುತ್ತಿತ್ತು. ಆ ಪತ್ರಿಕೆಯಲ್ಲಿ ಸುಲಭವಾದ ಭಾಷೆಯ ಮೂಲಕ ಭಾರತದ ರೈತರಿಗೆ ಬಾಪೂರವರ ಸ್ವಾವಲಂಬಿತ ಆರ್ಥಿಕ ಜೀವನವನ್ನು ತಿಳಿಸಬೇಕೆಂಬುದಾಗಿತ್ತು ಮತ್ತು ವಿಕೇಂದ್ರೀಕೃತ ಸಮಾಜವನ್ನು ರಚಿಸುವುದಾಗಿತ್ತು. ಸುಂದರಲಾಲರು ಮೀರಾಬೆಹನ್‌ರವರ ಆದರ್ಶ ಮತ್ತು ಉದ್ದೇಶಗಳನ್ನು ಕೂಡಲೇ ಅರ್ಥಮಾಡಿಕೊಂಡರು ಮತ್ತು ಅವರಿಗೆ ಬೆಂಬಲಿಸಿದರು. ಅಲ್ಲದೆ ತಾವೇ ಸ್ವತಃ ಪ್ರತಿಪಾದಿಸುತ್ತಿದ್ದ ಪರಿಸರ ವಿಚಾರಗಳಿಗೆ ಹಾಗೂ ತಮ್ಮ ಜೀವನದ ಉದ್ದೇಶಕ್ಕಾಗಿ ಮೀರಾಬೆಹನ್‌ರಿಂದ ಬಹಳಷ್ಟು ಬೆಂಬಲ ಪಡೆದರು. ಅವರಿಂದಲೇ ಸುಂದರಲಾಲ್ ಪರಿಸರ ವಿಜ್ಞಾನದಲ್ಲಿ ಮುಂದುವರಿಯಲು ಸಾಧ್ಯವಾಯಿತು. ಬಾಪೂರಾಜ್ ಪತ್ರಿಕೆಯಲ್ಲಿ ಈ ವಿಷಯಕ್ಕೆ ಸಂಬಂಧಿಸಿದ ವಿಚಾರಗಳು ಪ್ರಕಟಗೊಳ್ಳುತ್ತಿದ್ದರಿಂದ ಸುಂದರಲಾಲ್ ಆ ಪತ್ರಿಕೆಯ ಪ್ರಕಟಣೆಯಲ್ಲಿ ಮೀರಾಬೆಹನ್‌ರಿಗೆ ಸಹಾಯ ಮಾಡುತ್ತಿದ್ದರು. ಅವರು ವಾರಕ್ಕೊಮ್ಮೆ ತೆಹರಿಯಿಂದ ಗೋಪಾಲ್ ಆಶ್ರಮದ ವರೆಗೆ ಇಪ್ಪತ್ತಾರು ಮೈಲಿಯನ್ನು ಕ್ರಮಿಸಿ ಆ ಪತ್ರಿಕೆಯ ಹಿಂದಿ ಅವತರಿಣಿಕೆಯ ಪ್ರಕಟಣೆಗಾಗಿ ನೆರವಾಗುತ್ತಿದ್ದರು. ಗಾಂಧೀ ಅವರಿಂದ ತಾವು ಪಡೆದಿದ್ದ ಅನೇಕ ವಿಚಾರಗಳನ್ನು ಜನರಲ್ಲಿ ಪ್ರಚುರಪಡಿಸಬೇಕೆಂಬುದು ಆ ಪತ್ರಿಕೆಯ ಉದ್ದೇಶ್ಯವಾಗಿತ್ತು.

೧. ಜೀವನದ ಮೂಲಭೂತ ಅಗತ್ಯಗಳಾದ ಆಹಾರ, ಬಟ್ಟೆ ಮತ್ತು ವಸತಿಯಲ್ಲಿ ಸ್ವಾವಲಂಬಿತವಾದ ಬಲಶಾಲಿ ಮತ್ತು ಆರೋಗ್ಯಪೂರ್ಣ ಹಳ್ಳಿಗಳನ್ನು ಸ್ಥಾಪಿಸುವುದು.

೨. ಅರಮನೆಗಳಂಥ ದೊಡ್ಡ ಮನೆಗಳಲ್ಲಿ ವಾಸವಾಗಿ ಸಾವಿರಾರು ರುಪಾಯಿಯ ಪೆಟ್ರೋಲ್ ಖರ್ಚುಮಾಡುವ ಅಗತ್ಯವಿಲ್ಲದಂಥ ಸರಳ ಮತ್ತು ನೇರ ಸರ್ಕಾರವನ್ನು ರಚಿಸಬೇಕು. ಆಡಳಿತವು ಮುಖ್ಯವಾಗಿ ಪಂಚಾಯಿತಿಗಳ ಮೂಲಕ ನಡೆಯುವುದು. ಪಂಚಾಯಿತಿಗಳು ಹಳ್ಳಿಗಳ ಸೇವೆಯನ್ನು ಮಾಡುವುದರ ಮೂಲಕ ಸೂಕ್ತ ಮಾರ್ಗದರ್ಶನ ಕೊಡುವುದು.

೩. ಕಾನೂನುಗಳು ಸರಳವಾಗಿರುವವು. ರಕ್ತಹೀರುವ ವಕೀಲರ

ಅಗತ್ಯವಿರುವುದಿಲ್ಲ. ಮತ್ತು ದೊಡ್ಡ ನಗರಗಳಲ್ಲಿ ಇರುವ ಕೋರ್ಟ್‌ಗಳಿಗೆ ಹೋಗುವ ಅಗತ್ಯವಿರುವುದಿಲ್ಲ.

೪. ಪೋಲೀಸರು ಪರಿಣಾಮಕಾರಿಯಾಗಿ ಮತ್ತು ಪ್ರಾಮಾಣಿಕವಾಗಿ ಕಾರ್ಯನಿರ್ವಹಿಸುವರು. ಅಲ್ಲದೆ ಜನರಿಗೆ ಸೂಕ್ತ ರಕ್ಷಣೆಯನ್ನು ಕೊಡುವರು. ಕೋಟಿಗಟ್ಟಲೆ ಹಣವನ್ನು ತಿಂದುಹಾಕುವ ಸೇನಾಪಡೆಯನ್ನು ವಿಸರ್ಜಿಸಲಾಗುವುದು. ವಿಮಾನಗಳಿಲ್ಲದಂತೆ ಮಾಡುವುದು.

೫. ನಮ್ಮ ದೇಶೀಯ ಕೈಗಾರಿಕೆಗಳನ್ನು ನಾಶಮಾಡುವ ಕಾರ್ಖಾನೆಗಳುಳ್ಳ ಬಂಡವಾಳಶಾಹಿಗಳಿರುವುದಿಲ್ಲ. ಬಹುದೊಡ್ಡ ವಿಸ್ತಾರದ ಕೋಠಿಗಳುಳ್ಳ ಬಹುಮಾಲೀಕರಿರುವುದಿಲ್ಲ.

೬. ಪ್ರಾಮಾಣಿಕರಾದ ಮತ್ತು ಶ್ರಮಪಡುವಂಥ ಮಕ್ಕಳನ್ನು ತಯಾರುಮಾಡುವ ಒಳ್ಳೆಯ ಶಾಲೆಗಳಿರುವವು.

೭. ಎಲ್ಲ ಜನರು ಶ್ರಮದಾನ ಮಾಡುವರು ಮತ್ತು ಎಲ್ಲರಿಗೂ ಆರೋಗ್ಯಕರವಾದ ಹಾಗೂ ಪೌಷ್ಟಿಕವಾದ ಆಹಾರ ದೊರೆಯುವುದು.

೮. ಹೊರ ದೇಶಗಳಿಂದ ಸಾಲ ಪಡೆಯುವುದಿಲ್ಲ! ನಮ್ಮ ಭಾರತ ತನ್ನ ಬಲದ ಮೇಲೆ ಬದುಕುವುದು. ಏಕೆಂದರೆ ಪರಾವಲಂಬ ಜೀವನವೇ ದಾಸ್ಯ.

ಮೀರಾಬೆಹನ್ ಪತ್ರಿಕೆಯ ಪ್ರಕಟಣೆಯ ಕಾರ್ಯ ನಿಮಿತ್ತ ಕುದುರೆ ಸವಾರಿ ಮಾಡಿಕೊಂಡು ಒಂದು ಹಳ್ಳಿಯಿಂದ ಇನ್ನೊಂದು ಹಳ್ಳಿಗೆ ಹೋಗುವ ಆ ಸಂದರ್ಭದಲ್ಲಿ ಅವರು ರೈತರ ಸಮೂಹಗಳನ್ನು ಮತ್ತು ಸ್ಥಾನೀಯ ಸಮುದಾಯಗಳನ್ನು ಉದ್ದೇಶಿಸಿ ಮಾತನಾಡುತ್ತಿದ್ದರು. ಇದೇ ಸಂದರ್ಭದಲ್ಲಿ ಅವರು ಗೋಪಾಲ್ ಆಶ್ರಮದಲ್ಲೂ ಕೂಡ ತುಂಬಾ ಚಟುವಟಿಕೆಯಿಂದ ಕೂಡಿದವರಾಗಿರುತ್ತಿದ್ದರು. ಅವರು ಪ್ರಕೃತಿಯ ಎಲ್ಲ ಮುಖಗಳನ್ನು ಪ್ರೀತಿಸುತ್ತಿದ್ದರಾದರೂ ಗೋವುಗಳ ಆರೈಕೆ ಬಗ್ಗೆ ಹೆಚ್ಚು ಬದ್ಧತೆಯುಳ್ಳವರಾಗಿರುತ್ತಿದ್ದರು. ಅವರ ಕಾರ್ಯದರ್ಶಿಯಾಗಿದ್ದ ಜಿ.ಪಿ.ಉನಿಯಾಲ್ ಎಂಬುವವರ ಪ್ರಕಾರ ಮೀರಾಬೆಹನ್ ಬೆಳಿಗ್ಗೆ ಪತ್ರಾಚಾರ ಮತ್ತು ಹಿಂದಿನ ದಿನದ ದಿನಪತ್ರಿಕೆ ಓದಿದ ನಂತರ ಪ್ರಾಣಿಗಳ ವೀಕ್ಷಣೆಗೆ ಹೋಗುತ್ತಿದ್ದರು. ಮೊದಲು ಗೋವುಗಳನ್ನು ವಿಚಾರಿಸಿಕೊಳ್ಳುತ್ತಿದ್ದರು. ಮೀರಾಬೆಹನ್ ಪರಿಸರ ವಿಜ್ಞಾನ ವಿಷಯದ ಪ್ರಬಲ ಪ್ರತಿಪಾದಕರಾಗಿದ್ದರು. ಅಲ್ಲದೆ ಸಾವಯವ ಕೃಷಿ, ಆಳವಲ್ಲದ ಉಳುಮೆ, ಭೂಮಿಯಲ್ಲಿಯ ತೇವಾಂಶ ಕಾಪಾಡುವುದಕ್ಕಾಗಿ ಕೊಟ್ಟಿಗೆ ಗೊಬ್ಬರ ಹಾಗೂ ಎರೆಹುಳುಗಳ ಉಪಯೋಗದ ಪ್ರತಿಪಾದಕರಾಗಿದ್ದರು. ಅಲ್ಲದೆ ಈ ವಿಷಯಗಳ ಬಗ್ಗೆ ಹೆಚ್ಚು ತಿಳಿದಿದ್ದ ಕೆಲ ಪಾಶ್ಚಿಮಾತ್ಯ ಮುಖ್ಯವಾಗಿ ಕ್ವೇಕರ್ಸ್‌ರೊಂದಿಗೆ ನಿರಂತರ ಪತ್ರವ್ಯವಹಾರ ಮಾಡುತ್ತಿದ್ದರು. ಅವರ ಪ್ರಾಣಿಗಳ ಪ್ರೀತಿ ಹೊಲಗಳಲ್ಲಿರುವ ಇಲಿಗಳ ವರೆಗೂ ವಿಸ್ತರಿಸಿತ್ತು. ಒಂದು ಸಂದರ್ಭದಲ್ಲಿ ಅದು ಚಿರತೆಯ ವರೆಗೂ ನಡೆಯಿತು. ಸುಂದರಲಾಲ್‌ರು ಗೋಪಾಲ್ ಆಶ್ರಮಕ್ಕೆ ಭೇಟಿಕೊಟ್ಟಾಗ ಬಾಪೂರಾಜ್ ಪತ್ರಿಕೆಗಾಗಿ ಕೆಲಸಮಾಡುವುದರೊಂದಿಗೆ ಅವರು ಗೋವುಗಳ ಬಗ್ಗೆ ಕೂಡ ಆಸಕ್ತಿ ಬೆಳೆಸಿಕೊಂಡರು! ತರಕಾರಿ ತೋಟದಲ್ಲಿ ಕೆಲಸಮಾಡುತ್ತಿದ್ದರು. ಒಂದು ಬಾರಿ ಹೊಲದಲ್ಲಿ ಕೆಲಸ

ಮಾಡುತ್ತಿದ್ದಾಗ ಒಂದು ಇಲಿ ಹೊರಗೆ ಬಂದದ್ದನ್ನು ನೋಡಿದರು. ಅದನ್ನು ಸಾಯಿಸುವುದಕ್ಕಾಗಿ ಬೆಕ್ಕನ್ನು ಹುಡುಕಲು ಹೊರಟರು. ಬೆಕ್ಕಿನೊಂದಿಗೆ ವಾಪಸ್ ಬಂದಾಗ ಮೀರಾಬೆಹನ್ ಹುರಿದ ಜೋಳದ ಅರಳನ್ನು ಇಲಿಗೆ ತಿನ್ನಿಸುತ್ತಿರುವುದನ್ನು ನೋಡಿದರು! ಹಕ್ಕಿಗಳು ಒಣದ್ರಾಕ್ಷಿಗಳನ್ನು ತಿನ್ನಲು ಅವರನ್ನು ಸುತ್ತುವರಿಯುತ್ತಿದ್ದವು. ಇನ್ನೊಂದು ಬಾರಿ ಒಂದು ಚಿರತೆ ಆ ಪ್ರದೇಶದಲ್ಲಿ ಬೇಟೆಯಾಡುತ್ತಿತ್ತು. ಅದು ತಮ್ಮ ಹಸುಗಳನ್ನು ಸಾಯಿಸುತ್ತಿದೆ, ಆದ್ದರಿಂದ ಆ ಚಿರತೆಯನ್ನು ಬೋನಿಗೆ ಹಾಕಿ ಸಾಯಿಸಬೇಕೆಂದು ಗ್ರಾಮಸ್ಥರು ಮೀರಾಬೆಹನ್‌ಗೆ ಹೇಳಿದರು. ಆ ಗುಡ್ಡಗಾಡು ಪ್ರದೇಶದ ಜನರು ಚಿರತೆಯನ್ನು ಹಿಡಿಯುವುದಕ್ಕಾಗಿ ಮೇಕೆಯನ್ನು ಬಲಿಪಶುವಾಗಿ ಉಪಯೋಗಿಸುತ್ತಿದ್ದರು. ಬೆಳಿಗ್ಗೆ ನೋಡಿದಾಗ ಆ ಬೋನಿನ ಬಾಗಿಲು ಮುಚ್ಚಿತ್ತು. ಅದರ ಒಳಗಡೆ ಮೇಕೆಯಿತ್ತು. ಅವರಿಗೆ ಆಶ್ಚರ್ಯವಾಯಿತು. ಈ ವಿಷಯದಲ್ಲಿ ನಡೆದ ಸಂಗತಿಯನ್ನು ಮೀರಾಬೆಹನ್ ಗ್ರಾಮಸ್ಥರಿಗೆ ತಿಳಿಸಿದ ಮೇಲೆ ಅವರ ಆಶ್ಚರ್ಯಕ್ಕೆ ಉತ್ತರ ದೊರೆಯಿತು. "ಯುಕ್ತಿಯ ಮೂಲಕ ಚಿರತೆಯನ್ನು ಹಿಡಿಯ ಬೇಕೆಂಬುದನ್ನು ತಿಳಿದಾದ ಮೇಲೆ ತನಗೆ ನಿದ್ರೆ ಬರಲಿಲ್ಲ. ಆದ್ದರಿಂದ ರಾತ್ರಿ ಎದ್ದು ಹೋಗಿ ಆ ಬೋನಿನ ಬಾಗಿಲನ್ನು ತಾನೇ ಮುಚ್ಚಿದ್ದಾಗಿ" ಹೇಳಿದರು. ಈ ಘಟನೆಯ ಬಗ್ಗೆ ಸುಂದರಲಾಲ್ ಚಿಂತನೆ ಮಾಡಿದರು. ಆ ಚಿರತೆ ನಿರಾಸೆಗೊಂಡು ಆ ಪ್ರದೇಶ ಬಿಟ್ಟು ಹೊರಟು ಹೋಯಿತು. ಪುನಃ ಅತ್ತ ಬರಲಿಲ್ಲ. ಎಂದು ಸುಂದರಲಾಲ್ ಹೇಳುತ್ತಾರೆ.

ಭಾರತದಲ್ಲಿ ಇದ್ದಷ್ಟು ದೀರ್ಘ ಸಮಯದಲ್ಲಿ ಮೀರಾಬೆಹನ್ ಗಾಂಧೀಜಿಯವರು ಪ್ರಕಟಿಸುತ್ತಿದ್ದ ಯಂಗ್ ಇಂಡಿಯಾ ಮತ್ತು ಹರಿಜನ ಪತ್ರಿಕೆಗಳಿಗೆ ಬಹಳವಾಗಿ ಬರೆಯುತ್ತಿದ್ದರು. ಆ ಪತ್ರಿಕೆಗಳನ್ನು ಗಾಂಧೀಜಿ ಸ್ವಾತಂತ್ರ ಸಮರದ ಕಾಲದಲ್ಲಿ ಪ್ರಾರಂಭಿಸಿದರು. ಕ್ರಮೇಣ ಮೀರಾಬೆಹನ್ ಹಿಂದೂಸ್ತಾನ್ ಟೈಮ್ಸ್ ಮತ್ತು ಸ್ಟೇಟ್ಸ್‌ಮನ್ ಮುಂತಾದ ಪತ್ರಿಕೆಗಳಲ್ಲಿ ಬರೆಯಲಾರಂಭಿಸಿದರು. ಗಾಂಧೀಜಿಯವರ ಮಗ ದೇವದಾಸ್ ಗಾಂಧಿ ಹಿಂದೂಸ್ತಾನ್ ಟೈಮ್ಸ್‌ನ ಸಂಪಾದಕರಾಗಿದ್ದರು. ಅವರು ಮೀರಾಬೆಹನ್‌ರ ಲೇಖನಗಳನ್ನು ಸ್ವಾಗತಿಸುತ್ತಿದ್ದರು. ಪ್ರಕೃತಿಯ ಮಹತ್ವ ಅವರ ಲೇಖನಗಳ ಮುಖ್ಯ ವಿಷಯವಾಗಿದ್ದರೂ ಪರ್ವತಗಳಿಗೆ ಸಂಬಂಧಿಸಿದ ಪರಿಸರ ವಿಜ್ಞಾನ ಹೆಚ್ಚು ಮಹತ್ವ ಪಡೆಯುತ್ತಾಹೋಯಿತು. ೧೯೪೬-೪೭ರಲ್ಲಿ ಹಿಮಾಲಯ ಪ್ರದೇಶಕ್ಕೆ ಬಂದಾಗ ವಾಣಿಜ್ಯ ಅರಣ್ಯೀಕರಣಕ್ಕಾಗಿ ಕಾಡಿನ ವಿನಾಶವಾಗುತ್ತಿರುವ ಅಪಾಯವನ್ನು ಮೀರಾಬೆಹನ್ ಅರಿತುಕೊಂಡರು. ಅಂದಿನಿಂದ ಓಕ್ ಮರಗಳನ್ನು ಹಾಳುಮಾಡುವುದರಿಂದ ಉಂಟಾಗುವ ಗಂಭೀರ ಪರಿಣಾಮದ ಬಗ್ಗೆ ಎಚ್ಚರಿಕೆ ಕೊಡಲಾರಂಭಿಸಿದರು. ಅವರು ವ್ಯವಸಾಯಗೊಂಡಿರುವ ಭೂಮಿ ಮತ್ತು ರಕ್ಷಿತ ಅರಣ್ಯ ಪ್ರದೇಶದ ಮಧ್ಯೆ ಅಗಲವಾದ ಎಲೆಯುಳ್ಳ ಮರಗಳನ್ನು ಬೆಳೆಸಬೇಕೆಂದು ಸೂಚಿಸಿದರು. ಈ ಎಲ್ಲ ಬರಹಗಳ ಮೂಲಕ ಹಿಮಾಲಯ ತಪ್ಪಲಲ್ಲಿಯ ಪರಿಸರಾತ್ಮಕ ಗಂಡಾತರವನ್ನು ಸಾರ್ವಜನಿಕ ಗಮನಕ್ಕೆ ತಂದ ಕೆಲವೇ ಕೆಲವು ಮೊದಲ ವ್ಯಕ್ತಿಗಳಲ್ಲಿ ಇವರೂ ಒಬ್ಬರಾಗಿದ್ದರು. ಅವರ ಬರಹಗಳಲ್ಲಿ ನಗರ ಜೀವನ ಮತ್ತು ಗ್ರಾಮೀಣ ಜೀವನ ಮಧ್ಯದ ಅಂತರದ ವಿವರಣೆ ಪ್ರಧಾನವಾಗಿ ಎದ್ದುಕಾಣುತ್ತಿತ್ತು.

೧೯೪೬ರಲ್ಲಿ ಅವರೊಂದು ಲೇಖನ ಬರೆದರು. ಅದರ ಹೆಸರು 'ಪ್ಯಾರಡೈಸ್ ಲಾಸ್ಟ್'. ಅದರಲ್ಲಿ ಅವರು ದಿಲ್ಲಿಯಲ್ಲಿಯ ತಮ್ಮ ಕಡಿಮೆ ಅವಧಿಯ ವಾಸ್ತವ್ಯ ಮತ್ತು ಚಾಂದಿನ ಚೌಕ್‌ನಲ್ಲಿ ಮಾಡಿದ ವ್ಯಾಪಾರ ಇವುಗಳನ್ನು ತಾವು ಮಾರನೇ ದಿನವೇ ಡೆಹ್ರಾಡೂನಿನ ಪರ್ವತ ತಪ್ಪಲಿಗೆ ಬಂದ ಮೇಲಿನ ಅನುಭವದೊಂದಿಗೆ ಹೋಲಿಕೆ ಮಾಡುತ್ತಾರೆ. "ಚಾಂದಿನ ಚೌಕ್‌ನಲ್ಲಿ ತಮಗೆ ಎಲ್ಲ ದಿಕ್ಕಿನಿಂದಲೂ ಗಾಯಗೊಂಡ ಅನುಭವವಾಯಿತು. ಜನಜಂಗುಳಿಯ ಸದ್ದು ಮತ್ತು ಕಿವಿಮೇಲೆ ಬೀಳುತ್ತಿದ್ದ ಕರ್ಕಶ ಧ್ವನಿಗಳು, ಗಲೀಜು ಮತ್ತು ಹೇಸಿಗೆ ಕಣ್ಣನ್ನು ಕೋರೈಸುತ್ತಿದ್ದವು, ದುರ್ಗಂಧ ಮೂಗನ್ನು ಮುಚ್ಚಿಕೊಳ್ಳುವಂತೆ ಮಾಡುತ್ತಿತ್ತು". ಡೆಹ್ರಾಡೂನ್‌ಗೆ ಬರುತ್ತಲೇ ಅವರಿಗೆ ತಮ್ಮ ಕಣ್ಣಮುಂದೆ ಸ್ವರ್ಗವೇ ಮೈಚಾಚಿ ಮಲಗಿಕೊಂಡಿದೆ ಅನಿಸಿತು. ಅಲ್ಲಿಯ ಗಾಳಿ ಸ್ವಚ್ಛವೂ ಮತ್ತು ಆಹ್ಲಾದಕರವೂ ಆಗಿತ್ತು. ಅಲ್ಲಿಯ ಕಾಡು ವಸಂತಮಾಸದ ಹಸಿರು ತೊಡುಗೆಯನ್ನು ಧರಿಸಿತ್ತು. ಸ್ಫಟಿಕದಂತೆ ಸ್ವಚ್ಛವಾದ ತೊರೆಯೊಂದು ಹರಿಯುತ್ತಿತ್ತು. ಅದರಲ್ಲಿಯ ನೀರು ನೃತ್ಯಮಾಡುತ್ತಾ ಮತ್ತು ಹೊಳೆಯುತ್ತಾ ತನ್ನ ಒಡಲಲ್ಲಿದ್ದ ಶಿಲೆಗಳ ಮೇಲೆ ಹರಿದುಹೋಗುತ್ತಿತ್ತು. ಅದರ ದಂಡೆಯ ಮೇಲೆ ಹೂ ಅರಳಿನಿಂತ ಪೊದೆಗಳು ಮತ್ತು ನುಣುಪಾದ ಗರಿಯಂತಿರುವ ಎತ್ತರವಾದ ಹುಲ್ಲುಗಾವಲಿತ್ತು.

ಕಾಡು ತನ್ನ ವಿಶಾಲವಾದ ಭಂಡಾರವನ್ನು ತೆರೆದಿಟ್ಟಿತ್ತು. ಪೂರ್ವದಲ್ಲಿ ಸೂರ್ಯ ಬೆಟ್ಟದ ಮೇಲಿಂದ ಇಣುಕಿ ನೋಡುತ್ತಿದ್ದ ಸುವರ್ಣಮಯ ಬೆಳಕಿನ ಹೊಳಪಿನಲ್ಲಿ ಗಂಗಾ ಮಾತೆ ಹರಿದ್ವಾರದ ಕಡೆಗೆ ತನ್ನ ಪಾವನ ನೀರಿನೊಂದಿಗೆ ಹರಿಯುತ್ತಿತ್ತು. ಕಾಡಿನ ಹಾಡಿನೊಂದಿಗೆ ತನ್ನ ಹೃದಯ ಗೀತೆಯು ಸೇರಿಕೊಂಡು ದೇವರಿಗೆ ಕೃತಜ್ಞತೆಯನ್ನು ಸಲ್ಲಿಸುತ್ತಿತ್ತು. ಈ ಬಗೆಯ ಪ್ರಕೃತಿ ಸೌಂದರ್ಯ ಮಧ್ಯೆ ಮೀರಾಬಾಯಿ ನಗರದ ಜನರ ಬಗ್ಗೆ ಯೋಚಿಸಲಾರಂಭಿಸಿದರು ಮತ್ತು ತಮ್ಮ ಮನಸ್ಸಿನಲ್ಲಿಯೇ ಪ್ರಶ್ನೆಗಳನ್ನು ಹಾಕಿದರು. ಇಂಥ ಸುಂದರ ತಾಣದ ಬದಲಾಗಿ ಅಂಥ ಹೀನತಾಣವನ್ನು ಬಯಸುವ ಸ್ಥಿತಿಗೆ ಅವರು ಬಂದರೆ? ಅಂತಿಮವಾಗಿ ಮೀರಾಬಾಯಿ ಆಧುನಿಕ ಮನುಷ್ಯ ಅಭಿವೃದ್ಧಿ ಎಂಬ ವೈಭವದ ಘೋರ ಕಾಯಿಲೆಗೆ ತುತ್ತಾಗಿದ್ದಾನೆ ಎಂಬ ತೀರ್ಮಾನಕ್ಕೆ ಬರುತ್ತಾರೆ.

ಅರಣ್ಯದಲ್ಲಿರುವ ನಿಸರ್ಗ ಸಂಪತ್ತು ಮತ್ತು ವೈವಿಧ್ಯತೆ ಅದ್ಭುತವಾಗಿದ್ದರೂ ಪರ್ವತ ಪ್ರದೇಶದಲ್ಲಿ ಎಲ್ಲವೂ ಸರಿಯಿಲ್ಲ ಎಂಬುದನ್ನು ಅವರು ಅರಿತರು. ತಮ್ಮ ಉದ್ದೇಶಿತ ಗೋಪಾಲ್ ಆಶ್ರಮಕ್ಕಾಗಿ ಸ್ಥಳ ಪರಿಶೀಲನೆ ನಿಮಿತ್ತ ಪ್ರವಾಸ ಮಾಡಿದ ಸಂದರ್ಭದಲ್ಲಿ ಅವರು ಪರಿಸರದ ಪರಿಸ್ಥಿತಿಯ ಬಗ್ಗೆ ಅನೇಕ ಅಭಿಪ್ರಾಯಗಳನ್ನು ವ್ಯಕ್ತ ಪಡಿಸಿದರು. ಅವೆಲ್ಲವನ್ನು 'ಹಿಮಾಲಯ ಪಾಠಗಳು' ಎಂಬ ಶೀರ್ಷಿಕೆಯಲ್ಲಿ ಏಳು ಲೇಖನಗಳಾಗಿ ೧೯೫೧ ಜನೆವರಿ ತಿಂಗಳ ಪ್ರಾರಂಭದಿಂದ ಹರಿಜನ ಪತ್ರಿಕೆಯಲ್ಲಿ ಬರೆದರು. ಒಂದು ಲೇಖನ ನೀರು ಮತ್ತು ಉರುವಲಿನ ಅಭಾವಕ್ಕೆ ಸಂಬಂಧಿಸಿದ್ದಾಗಿತ್ತು. ಹಿಮಾಲಯ ತಪ್ಪಲಲ್ಲಿಯ ಅನೇಕ ಹಳ್ಳಿಗಳಲ್ಲಿ ಅವುಗಳ ಅಭಾವದ ಬಗ್ಗೆ ಕೇಳಿ ಬರುತ್ತದೆ. ಆದರೆ ಆ ವಿಷಯವನ್ನು ಅರ್ಥ ಮಾಡಿಕೊಳ್ಳಬೇಕಾದರೆ ಅದನ್ನು ಅನುಭವ ಪಡೆಯಬೇಕಾಗುತ್ತದೆ. ಚಂಭಾಕಲ್‌ನಿಂದ

ತೆಹರಿವರೆಗಿರುವ ಪರ್ವತ ಶ್ರೇಣಿ ಬೋಳಾಗಿದೆ. ಅಲ್ಲಿಯ ಓಕ್ ಮರಗಳನ್ನು ಕಡಿದುಹಾಕಲಾಗಿದೆ. ಇದರ ಪರಿಣಾಮವಾಗಿ ಅಲ್ಲಿಯ ಅನೇಕ ತೊರೆಗಳು ಒಣಗಿ ಹೋಗಿವೆ. ಇನ್ನು ಅಲ್ಲಿರುವ ಪೈನ್ ಮರಗಳು. ಅವು ದೊಡ್ಡ ಸಂಖ್ಯೆಯಲ್ಲಿ ಇರುವವಾದರೂ ಅವುಗಳ ಕೆಳಗಿನ ಭಾಗಗಳೆಲ್ಲವೂ ಕತ್ತರಿಸಲ್ಪಟ್ಟಿವೆ. ಹೀಗಾಗಿ ಉರುವಲು ಮರ ಸಂಪೂರ್ಣವಾಗಿ ಇಲ್ಲದಂತಾಗಿದೆ. ತಮ್ಮ ಮನೆಗೆ ಬೇಕಾದ ಉರುವಲಿಗಾಗಿ ರೈತರು ಐದಾರು ಮೈಲಿಗಳಷ್ಟು ನಡೆಯ ಬೇಕಾಗುತ್ತದೆ. ಅಂದರೆ ಆಹಾರ ಎಷ್ಟು ಮಹತ್ವದ್ದಾಗಿದೆಯೋ ಉರುವಲು ಕೂಡ ಅಷ್ಟೇ ಮಹತ್ವದ್ದಾಗಿದೆ ಎಂದು ಅವರು ಹೇಳಿದರು. ಸೌದೆ ಇಲ್ಲದೆ ರೊಟ್ಟಿಯನ್ನಾಗಲೀ ಅಥವಾ ಇನ್ನಾವುದೇ ಆಹಾರವನ್ನಾಗಲೀ ಬೇಯಿಸಲು ಸಾಧ್ಯವಿಲ್ಲ. ಅವರಿದ್ದ ಸ್ಥಳದಲ್ಲಿ ಮಳೆಗಾಲದಲ್ಲಿ ಮಾತ್ರ ಕಲುಷಿತ ನೀರು ಸಿಗುತ್ತಿತ್ತು. ಆದರೆ ಕುಡಿಯುವುದಕ್ಕೆ ಬೇಕಾದ ನೀರನ್ನು ಕಾಲು ಮೈಲಿ ದೂರದಿಂದ ತರಬೇಕಾಗುತ್ತದೆ. ಆಕ್ಟೋಬರ್ ತಿಂಗಳ ಕೊನೆಯಲ್ಲಿ ಆ ಹತ್ತಿರದ ನೀರಿನ ಮೂಲವು ಸಹ ಒಣಗಿ ಹೋಗುತ್ತದೆ. ಆಗ ಜನರು ಇನ್ನೂ ಹೆಚ್ಚು ದೂರ ಹೋಗಬೇಕಾಗುತ್ತದೆ. ಜನಸಾಮಾನ್ಯರ ಈ ಪರಿಸ್ಥಿತಿಯನ್ನು ಅನುಕೂಲಸ್ಥ ಜನರು ಅರ್ಥಮಾಡಿಕೊಳ್ಳಲಾರರು. ನೀರಿನ ಸರಬರಾಜು ಇರುವ ನಗರದ ಜನರು ಮತ್ತು ಹತ್ತಿರದಲ್ಲಿಯೇ ಬಾವಿಯನ್ನು ಹೊಂದಿರುವ ಜನರು ಶಾಶ್ವತ ನೀರಿನ ಅಭಾವದ ಜೀವನದ ಕಷ್ಟವನ್ನು ತಿಳಿಯಲಾರರು. ಇಂಥ ಅನುಭವಗಳು ಸಾಮಾನ್ಯರ ಅಗತ್ಯಗಳ ಬಗ್ಗೆ ಅರಿವು ಮೂಡಿಸುತ್ತದೆ. ಬೆಟ್ಟಗಳ ಅತ್ಯಂತ ದೊಡ್ಡ ಭೌತಿಕ ಆಸ್ತಿ ಅಲ್ಲಿಯ ಅರಣ್ಯಗಳಲ್ಲಿದೆ ಎಂದು ಬೆಹನ್ ನಂಬಿದ್ದರು. ಸರ್ಕಾರವು ಮರಮುಟ್ಟುಗಳಿಂದ ದೊಡ್ಡ ಪ್ರಮಾಣದಲ್ಲಿ ಹಣವನ್ನು ಪಡೆಯುತ್ತದೆ. ಆದರೆ ಹಳ್ಳಿಗರಿಗೆ ಕೊಡುವುದಿಲ್ಲ. ಕಾಲುವೆಗಳು ಮತ್ತು ಕೆರೆಗಳು, ಹೇಸರುಗತ್ತೆಗಳ ಓಡಾಟಕ್ಕಾಗಿ ಕಾಲೋಣಿಗಳು ಮತ್ತು ಬಹಳಷ್ಟು ಉತ್ತಮ ಸೇತುವೆಗಳು ಅತ್ಯಂತ ಜರೂರಾದ ಅಗತ್ಯಗಳಾಗಿವೆ. ಈ ಅಗತ್ಯಗಳನ್ನು ಪೂರೈಸುವ ಕೆಲಸ ನಡೆದಿದೆಯಾದರೂ ಅದು ದೊಡ್ಡ ಪ್ರಮಾಣದಲ್ಲಿ ನಡೆದಿಲ್ಲ.

ನೀರಾವರಿ ಸೌಕರ್ಯಕ್ಕಾಗಿ ಖರ್ಚುಮಾಡಿದ ಪ್ರತಿಯೊಂದು ರೂಪಾಯಿ ದೇಶದ ಆಹಾರೋತ್ಪಾದನೆಯ ಹೆಚ್ಚಳಕ್ಕೆ ಸಹಾಯಕವಾಗುತ್ತದೆ. ಪರ್ವತದ ತಪ್ಪಲಲ್ಲಿ ಸಾವಿರಾರು ಚಿಕ್ಕ ಚಿಕ್ಕ ತೊರೆಗಳು ಮತ್ತು ಹಳ್ಳಗಳಿವೆ. ಅವೆಲ್ಲವುಗಳನ್ನು ನೀರಾವರಿಗಾಗಿ ಉಪಯೋಗಿಸಿಕೊಂಡು ಭೂಮಿಗೆ ಹಾಯಿಸಬಹುದು. ಇಂಥ ಸಣ್ಣ ಯೋಜನೆಗಳು ತಕ್ಷಣ ಫಲಕೊಡುವಂಥವಾಗಿರುತ್ತವೆ. ಅಲ್ಲದೆ ಗ್ರಾಮಸ್ಥರೇ ಅವುಗಳನ್ನು ಸುಸ್ಥಿತಿಯಲ್ಲಿಡಬಹುದು. ಸ್ವಲ್ಪ ಪ್ರೋತ್ಸಾಹ ಕೊಡುವುದರಿಂದ ಗ್ರಾಮಸ್ಥರು ಕಾಂಪೋಸ್ಟ್ ಮಾಡುವುದನ್ನು ಕಲಿಯಬಹುದು ಹಾಗು ತಮ್ಮ ಹೊಲಗಳಿಗೆ ಏರಿ ಹಾಕಬಹುದು. ಇಂಥ ವಿಷಯಗಳ ಸಾಧನೆಯಾದಲ್ಲಿ ಗ್ರಾಮೀಣ ಪ್ರದೇಶದ ಪರಿಸ್ಥಿತಿಯೇ ಬದಲಾಗುವುದೆಂದು ಮೀರಾಬೆಹನ್ ಹೇಳುತ್ತಾರೆ.

ಮೀರಾಬೆಹನ್ ಸುಂದರಲಾಲ್‌ರನ್ನು ಭೇಟಿಮಾಡಿದಾಗ ಅವರು ಗಾಂಧೀ ಪ್ರಣೀತ ಚಟುವಟಿಕೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು. ನೂಲುಗಾರಿಕೆ

ಕಲಿತಿದ್ದರು. ಜಾತಿ, ಆಧಾರಿತ ಸಮಸ್ಯೆ ಮತ್ತು ಅಸ್ಪೃಶ್ಯತೆ ಬಗ್ಗೆ ಕೆಲಸ ಮಾಡಿದ್ದರು. ತಮ್ಮ ಈ ಬದ್ಧತೆಯ ಕಾರಣದಿಂದ ಅವರು ಕಷ್ಟವನ್ನು ಅನುಭವಿಸಿದ್ದರು. ಆದಾಗ್ಯೂ ಸಾಮಾಜಿಕ ಸುಧಾರಣೆಯ ಅವರ ಕಲ್ಪನೆ ಇನ್ನೂ ಪೂರ್ತ ರೂಪಿತಗೊಂಡಿರಲಿಲ್ಲ. ಬಹುಗುಣರ ಅಭಿವೃದ್ಧಿಯ ಕಲ್ಪನೆ ಎಂದರೆ ವಾಹನಗಳಿಗಾಗಿ ರಸ್ತೆಗಳು, ಎಲ್ಲ ಸೌಕರ್ಯಗಳುಳ್ಳ ನಗರಗಳೆಂಬುದೇ ಅಗಿತ್ತು. ಇಂಗ್ಲೀಷರ ಶಿಕ್ಷಣ ಪದ್ಧತಿ ಅಂಥ ಅಭಿವೃದ್ಧಿ ಸಾಧಿಸುವುದಕ್ಕೆ ಒಳ್ಳೆಯ ಸಾಧನವೆಂದು ಅನಿಸಿತ್ತು. ಬೆಹನ್‌ರೊಂದಿಗಿನ ಅನುಭವಗಳ ಮೂಲಕ ಗಾಂಧೀಯವರು ಎಲ್ಲ ಸಂಗತಿಗಳನ್ನು ಅವುಗಳ ಮೂಲದಲ್ಲಿ ನೋಡುತ್ತಿದ್ದರೆಂದು ಬಹುಗುಣರಿಗೆ ಗೊತ್ತಾಯಿತು. ಹೀಗಾಗಿ ತಾವು ನೋಡುತ್ತಿದ್ದ ದೃಷ್ಟಿಗಿಂತ ಗಾಂಧೀಯವರ ದೃಷ್ಟಿ ಬೇರೆಯಾಗಿತ್ತೆಂದು ಬಹುಗುಣ ಹೇಳುತ್ತಾರೆ. ತಳಮಟ್ಟದಲ್ಲಿಯೇ ಬದಲಾವಣೆ ಬೇಕೆಂಬುದು ಗಾಂಧೀಯವರ ಇಚ್ಛೆಯಾಗಿತ್ತು. ಜನರ ಜೀವನವನ್ನು ಬದಲಾಯಿಸುವುದಷ್ಟೇಯಲ್ಲ ಇಡೀ ಆರ್ಥಿಕ ವ್ಯವಸ್ಥೆಯನ್ನೇ ಬದಲಾಯಿಸಬೇಕೆಂದಿದ್ದರು. ಮೀರಾಬೆಹನ್‌ರಂತೆ ಗಾಂಧೀಯವರಿಗೂ ನಗರಗಳು ಶೋಷಣೆಯ ಕೇಂದ್ರಗಳು. ಭಾರತ ಹಳ್ಳಿಗಳ ದೇಶ. ಆದರೆ ಬ್ರಿಟಿಷ್ ಆಡಳಿತ ಈ ವ್ಯವಸ್ಥೆಯನ್ನು ಬದಲಾಯಿಸಿತು ಮತ್ತು ಹಳ್ಳಿಗಳನ್ನು ಬಡತನದ ಕೂಪಕ್ಕೆ ತಳ್ಳಿತು. ಮೀರಾಬೆಹನ್‌ರ ಪ್ರಕಾರ ಹಳ್ಳಿಗಳ ಪುನರುಜ್ಜೀವನಗೊಳಿಸುವುದಾಗಿತ್ತು. ಹಳ್ಳಿಗಳ ಪುನುರುಜ್ಜೀವನ ಪ್ರಕೃತಿಯನ್ನು ಅವಲಂಬಿಸಿದೆ ಎಂಬುದನ್ನು ಮೀರಾಬೆಹನ್ ಅರ್ಥಮಾಡಿಕೊಂಡಿದ್ದರು. ವಸಹಾತುಶಾಹಿ ಅರ್ಥವ್ಯವಸ್ಥೆ ಪರ್ವತ ಪ್ರದೇಶದಲ್ಲಿಯ ಪ್ರಕೃತಿಯಲ್ಲಿಯ ಸಮತೋಲನವನ್ನು ಬದಲಾಯಿಸಿಬಿಟ್ಟಿತು. ಭೂಮಿಯನ್ನು ಯಾವ ರೀತಿ ಉಪಯೋಗಿಸುತ್ತಾರೆ ಎಂಬುದರ ಮೇಲೆ ಪರ್ವತ ತಪ್ಪಲಲ್ಲಿಯ ಜನರ ಜೀವನ ಅವಲಂಬಿತವಾಗಿದೆ ಎಂಬುದು ಮೀರಾಬೆಹನ್‌ರ ಅಭಿಪ್ರಾಯವಾಗಿತ್ತು. ವಾಹನಗಳಿಗಾಗಿ ರಸ್ತೆ ನಿರ್ಮಿಸುವುದರ ವಿರುದ್ಧ ಬೆಹನ್ ಇದ್ದರು. ಏಕೆಂದರೆ ಅವುಗಳಿಂದ ಸ್ಥಳೀಯ ಜನರಿಗೆ ಯಾವ ಪ್ರಯೋಜನವಿಲ್ಲ. ಅಲ್ಲದೆ ವಾಹನಗಳು ರೈತರು ನಿರ್ಮಿಸಿದ ಮಟ್ಟಾದ ಹೊಲವನ್ನು ಹಾಳುಮಾಡುತ್ತವೆ. ಆದ್ದರಿಂದ ಹೇಸರುಗತ್ತೆಯ ಕಾಲುದಾರಿಗಳನ್ನು ಸುಧಾರಣೆ ಮಾಡುವುದು ಜನರ ಅನುಕೂಲಕ್ಕಾಗಿ ತೊಡಗಿಸಿದ ಉತ್ತಮ ಬಂಡವಾಳವಾಗುತ್ತದೆ.

ಸರ್ಕಾರವು ಬೆಂಬಲಿಸುತ್ತಿದ್ದ ಅನೇಕ ಯೋಜನೆಗಳಿಗೆ ಬೆಹನ್‌ರ ಒಪ್ಪಿಗೆ ಇರಲಿಲ್ಲ. ೧೯೪೯ರಲ್ಲಿ ಹರಿಜನ ಪತ್ರಿಕೆಯಲ್ಲಿ ಅವರೊಂದು ಲೇಖನ ಬರೆದರು. ಅದರ ಶೀರ್ಷಿಕೆ 'ಅಭಿವೃದ್ಧಿಯೋ ಅಥವಾ ವಿನಾಶವೋ' ಎಂಬುದಾಗಿತ್ತು. ಅದಾದ ನಂತರ ಇನ್ನೊಂದು ಲೇಖನವನ್ನು 'ಆಘಾತಕಾರಿ ಸಂಗತಿಗಳು' ಎಂಬ ಶೀರ್ಷಿಕೆಯಲ್ಲಿ ಬರೆದರು. ಅದರಲ್ಲಿ ಅವರು ಅಭಿವೃದ್ಧಿಯನ್ನು ನಿಂದಿಸಿದರು. ಏಕೆಂದರೆ ಅಭಿವೃದ್ಧಿಯ ಹೆಸರಿನಲ್ಲಿ ನಿರ್ಮಿಸಿದ ರಸ್ತೆಗಳು ಹಿಂದೊಂದು ದಿನ ಒಳ್ಳೆಯ ಹುಲ್ಲುಗಾವಲಾಗಿದ್ದ ಪ್ರದೇಶವನ್ನು ಹಾಳುಮಾಡಿದ್ದವು. ನಿಜವಾದ ಅಭಿವೃದ್ಧಿ ಎಂದರೆ ಆ ಹುಲ್ಲುಗಾವಲಿನ ಪ್ರದೇಶದಲ್ಲಿ ಇನ್ನೂ ಒಳ್ಳೆಯದಾದ ಮತ್ತು ಸೂಕ್ತವಾದ ಹುಲ್ಲಿನ ತಳಿಗಳನ್ನು ಬಳಸಿ ಮೇವನ್ನು ದನಗಳಿಗೆ ಒದಗಿಸಬೇಕಾಗಿತ್ತು. ಒಳ್ಳೆಯ ರೀತಿಯಲ್ಲಿ

ಮಾಡಿದ ಕೊಟ್ಟಿಗೆ ಗೊಬ್ಬರವನ್ನು ಭೂಮಿಗೆ ಹಾಕಿ ಅದರ ಫಲವತ್ತತೆಯನ್ನು ಬೆಳೆಸಬಹುದಾಗಿತ್ತು. ಇದೇ ಸುರಕ್ಷಿತ ಮತ್ತು ಸರಿಯಾದ ಕ್ರಮ. ದುರ್ದೈವವಶಾತ್ ಹುಲ್ಲುಗಾವಲನ್ನು ಉಳುಮೆ ಮಾಡಿ ಹಾಳುಮಾಡುವಷ್ಟು ವೇಗದಲ್ಲಿ ಈ ಕ್ರಮ ಕೂಡಲೇ ಅಗಾಧವಾದ ಫಲವನ್ನು ಕೊಡುವಂಥದ್ದಲ್ಲ. ಬೃಹತ್ ನೀರಾವರಿ ವ್ಯವಸ್ಥೆ ಮೂಲಕ ಭೂಮಿ ಜವಳಾಗುತ್ತಿರುವುದನ್ನು ಕೂಡ ಅವರು ನೋಡಿದರು. ಕೃತಕ ಗೊಬ್ಬರಗಳ ಮೂಲಕ ಬೆಳೆದ ಬೆಳೆ ಕೊಟ್ಟಿಗೆ ಗೊಬ್ಬರ ಹಾಕಿ ಬೆಳೆದ ಬೆಳೆಗಿಂತ ಪೌಷ್ಟಿಕತೆಯಲ್ಲಿ ಕೀಳುಮಟ್ಟದ್ದಾಗಿದೆ ಎಂದು ವಿಜ್ಞಾನಿಗಳ ಅಭಿಪ್ರಾಯವಾಗಿದುದ್ದನ್ನು ಮೀರಾಬೆಹನ್ ಎತ್ತಿ ತೋರಿಸಿದರು. ರಾಸಾಯನಿಕ ಗೊಬ್ಬರ ಹಾಕಿ ಬೆಳೆದ ಭೂಮಿ ಪ್ರಾರಂಭದಲ್ಲಿ ಅಗಾಧ ಇಳುವರಿಯನ್ನು ಕೊಡುವುದಾದರೂ ಅದು ಕ್ರಮೇಣ ತನ್ನ ಶಕ್ತಿಯನ್ನು ಕಳೆದುಕೊಳ್ಳುತ್ತದೆ. ರೈತರು ಕಬ್ಬು ಬೆಳೆಯುವುದನ್ನು ಕೂಡ ಮೀರಾಬೆಹನ್ ಸಮ್ಮತಿಸಲಿಲ್ಲ. ಅಭಿವೃದ್ಧಿ ಎಂದು ಕರೆಯಲಾಗುವ ಸಂಗತಿ ಕ್ರಮೇಣ ವಿನಾಶಕ್ಕೆ ಕಾರಣವಾಗುತ್ತದೆ ಎಂದು ಬೆಹನ್ ಹೇಳುತ್ತಾರೆ. ಈ ಸಂದರ್ಭದಲ್ಲಿ ಜನತೆಯ ಹಿತ ಬಹಳ ಪ್ರಮುಖವಾಗುತ್ತದೆ. ಹೀಗೆ ಮೀರಾಬೆಹನ್‌ರ ಬರಹಗಳಲ್ಲಿ ಭಾರತದೊಂದಿಗೆ ಮತ್ತು ಹಿಮಾಲಯದ ಪ್ರಕೃತಿಯೊಂದಿಗೆ ಅವರ ಗುರುತಿಸಿಕೊಳ್ಳುವಿಕೆ ಬಹಳ ಸ್ಪಷ್ಟವಾಗಿ ಕಾಣುತ್ತದೆ. ನಾವು ಪರಾವಲಂಬಿಯಾಗಬಾರದು. ಸ್ವರಾಜ್ಯ ಬಂದಿರುವುದರಿಂದ ಈಗ ನಾವು ಸುರಕ್ಷಿತರು ಮತ್ತು ಶೋಷಣೆ ಮುಕ್ತರು ಎಂದು ಆಲೋಚಿಸಬಾರದು. ಬದಲಿಗೆ ನಾವು ಬಹಳಷ್ಟು ಜಾಗೃತವಾಗಿರಬೇಕು. ಏಕೆಂದರೆ ದೇಶದ ಒಳಗಿನ ಈ ಶೋಷಣೆ ಈ ಮೊದಲಿನವರ ಶೋಷಣೆಗಿಂತ ಅಪಾಯಕಾರಿಯಾಗಿದೆ. ಭೂಮಾತೆ ನಮ್ಮೆಲ್ಲರಿಗೂ ಊಟ ಒದಗಿಸಲು ಪರಿಶ್ರಮ ಮಾಡುತ್ತಾಳೆ. ನಾವು ಕರ್ತವ್ಯ ಭಾವನೆಯ ಮಕ್ಕಳಂತೆ ಅವಳ ಸೇವೆ ಮಾಡಬೇಕು.

ಪ್ರಕೃತಿಯ ನಷ್ಟದ ಬಗ್ಗೆ ಇದ್ದ ಮೀರಾಬೆಹನ್‌ರ ಚಿಂತೆ ಹಳ್ಳಿಗಳೊಂದಿಗಿನ ಚಿಂತೆಯ ಜೊತೆಗೆ ತಳಕು ಹಾಕಿಕೊಂಡಿತ್ತು. ಪರ್ವತಗಳ ಪರಿಸರ ವಿಜ್ಞಾನದ ಪ್ರಕಾರ ಹಳ್ಳಿಗಳ ಆರ್ಥಿಕ ಯೋಗಕ್ಷೇಮ ಅಲ್ಲಿಯ ಕಾಡುಗಳ ಸ್ಥಿತಿಯ ಮೇಲೆ ನೇರವಾಗಿ ಅವಲಂಬಿಸಿದೆ. ಹಿಮಾಲಯದಲ್ಲಿಯ ಅನೇಕ ವರ್ಷಗಳ ವಾಸ್ತವ್ಯ ಉತ್ತರ ಭಾರತದಲ್ಲಿಯ ಪ್ರವಾಹ ವರ್ಷ ವರ್ಷ ಹೆಚ್ಚಾಗುತ್ತಿದೆ ಎಂದು ತಿಳಿಯಲು ಸಹಕಾರಿಯಾಯಿತು. ೧೯೫೦ರಲ್ಲಿ ಹಿಂದೂಸ್ತಾನ್ ಟೈಮ್ಸ್‌ನಲ್ಲಿ ಅವರೊಂದು ಲೇಖನ ಬರೆದರು. ಹಿಮಾಲಯ ಪರ್ವತದೊಂದಿಗೆ ಏನು ತಪ್ಪಾಗುತ್ತಿದೆ ಮತ್ತು ಆ ತಪ್ಪು ನಿಸ್ಸಂಶಯವಾಗಿ ಕಾಡಿನೊಂದಿಗೆ ಸಂಬಂಧ ಹೊಂದಿದೆ ಎಂದು ಬರೆದಿದ್ದರು. ಪರ್ವತಗಳನ್ನು ವೃಕ್ಷರಹಿತ ಮಾಡುವುದಷ್ಟೇ ಕಾರಣವಲ್ಲ, ಪರ್ವತಗಳನ್ನು ಆವರಣಗೊಳಿಸಿರುವ ವೃಕ್ಷಗಳಲ್ಲಿಯ ಪ್ರಬೇಧಗಳಲ್ಲಿ ಉಂಟಾಗಿರುವ ವ್ಯತ್ಯಾಸವು ಕಾರಣವೆಂದು ಆ ಲೇಖನದಲ್ಲಿ ತಿಳಿಸಿದ್ದಾರೆ. ಉದಾಹರಣೆಗೆ ಭಂಜ್ ಎಂದು ಕರೆಯಲಾಗುವ ಹಿಮಾಲಯ ಓಕ್ ಬದಲಾಗಿ ಚಿರ್‌ಪೈನ್ ಅಥವಾ ಚಿಲ್‌ಪೈನ್ ಎಂಬ ವೃಕ್ಷವರ್ಗ ಬಂದಿರುವುದು. ಈ ಬದಲಾವಣೆಗೆ ಕಾರಣವೇನೆಂದರೆ ಓಕ್ ಮರಗಳು ಸರ್ಕಾರಕ್ಕೆ ಯಾವ ಆದಾಯವನ್ನೂ ತಂದು ಕೊಡುವುದಿಲ್ಲ. ಬದಲಿಗೆ

ಚಿರ್‌ಪೈನ್ ಆದಾಯ ತಂದುಕೊಡುತ್ತದೆ. ಚಿರ್‌ಪೈನ್‌ನಿಂದ ಸಿಗುವ ನಾಟಾಗಳು ಮತ್ತು ಟರಪಂಟೈನ್‌ಗಾಗಿ ಬೇಕಾದ ರೆಸಿನ್ ದೊರೆಯುವುದರಿಂದ ಸರ್ಕಾರಕ್ಕೆ ಹೆಚ್ಚು ಆದಾಯ ಬರುತ್ತದೆ. ಆದರೆ ಓಕ್ ಮರಗಳ ವಿನಾಶದಿಂದ ಉಂಟಾಗುವ ಪ್ರವಾಹ ಹಾನಿಯಿಂದ ಆಗುವ ನಷ್ಟಕ್ಕೆ ಈ ಆದಾಯ ಸಮವಾಗುವುದಿಲ್ಲ. ಬೆಹನ್ ಅಧ್ಯಯನ ಮಾಡಿದ ಪರಿಸರ ವಿಜ್ಞಾನದ ಒಂದು ಅತ್ಯುತ್ತಮ ಒಳನೋಟ ಹೀಗಿದೆ: ಭಂಜ್ ಮರದ ಎಲೆಗಳು ಪ್ರತಿವರ್ಷ ಉದುರುತ್ತವೆ. ಅವು ಕೃಷ್ಣ ವರ್ಣದ ಗಟ್ಟಿ ಆಕೃತಿಯನ್ನು ರಚಿಸುತ್ತವೆ. ಅದರ ಮೂಲಕ ಒತ್ತಾಗಿ ಪೊದೆಗಳು ಬಳ್ಳಿಗಳು ಮತ್ತು ಹುಲ್ಲು ಬೆಳೆಯುತ್ತವೆ. ಇವು ಹರಿಯುವ ನೀರನ್ನು ಇಂಗಿಸಿಕೊಳ್ಳುತ್ತವೆ. ಇನ್ನು ಉಳಿದ ನೀರು ಕೆಳಗಿನ ಹಂತಕ್ಕೆ ನಿಧಾನವಾಗಿ ಹರಿಯುತ್ತದೆ. ಇದರಿಂದಾಗಿ ಅಲ್ಲಲ್ಲಿ ಸುಂದರ ಸಿಹಿ ಮತ್ತು ತಣ್ಣನೆಯ ಬುಗ್ಗೆಗಳು ನಿರ್ಮಾಣವಾಗುತ್ತದೆ. ಮಾನ್ಸೂನ್ ಮಳೆಯ ನೀರಿನ ಪ್ರವಾಹವನ್ನು ತಡೆಯಲು ಈ ಭಂಜ್ ಕಾಡಿಗಿಂತ ಬೇರಾವ ಉತ್ತಮ ಉಪಾಯವನ್ನು ಕಲ್ಪಿಸಿಕೊಳ್ಳುವುದು ಅಸಾಧ್ಯ. ಮುಂದುವರಿದು ಬೆಹನ್ ವಿವರಿಸುವುದೇನೆಂದರೆ ಚಿರ್‌ಪೈನ್ ಒಂದು ರೀತಿಯ ಸೂಜಿ ಮೊನೆಯಾಕಾರದ ಹೊದಿಕೆಯನ್ನು ಉಂಟುಮಾಡುತ್ತದೆ. ಅದು ಏನನ್ನೂ ಹೀರಿಕೊಳ್ಳುವುದಿಲ್ಲ. ತತ್‌ಪರಿಣಾಮವಾಗಿ ಅದರ ಅಡಿಯಲ್ಲಿ ಯಾವುದೇ ಮಹತ್ವದ ಕಳೆ ಬೆಳೆಯುವುದಕ್ಕೆ ಅವಕಾಶ ಕೊಡುವುದಿಲ್ಲ. ಸೂಜಿಯಾಕಾರದ ಆ ಹೊದಿಕೆ ಏನನ್ನೂ ಹೀರಿಕೊಳ್ಳದೆ ಇರುವುದರಿಂದ ಓಕ್ ಎಲೆಗಳು ನಿರ್ಮಿಸುವ ಕೃಷ್ಣವರ್ಣದ ಆಕಾರವನ್ನು ನಿರ್ಮಿಸುವುದಿಲ್ಲ. ಕೇವಲ ಅಲ್ಪ ಪ್ರಮಾಣದಲ್ಲಿ ಅಷ್ಟೇನೂ ಉತ್ಕೃಷ್ಟವಲ್ಲದ ಮಣ್ಣನ್ನು ನಿರ್ಮಿಸುತ್ತವೆ. ಅದು ಮಾನ್ಸೂನಿನ ಧಾರಾಕಾರ ಮಳೆ ಹಿಮಾಲಯ ಪರ್ವತ ಶ್ರೇಣಿಯ ದಕ್ಷಿಣ ಭಾಗದಲ್ಲಿ ಸುರಿದಾಗ ಬಹಳಷ್ಟು ಸೂಜಿಯಾಕಾರದ ಪೈನ್ ಜಮಖಾನ ಕೊಚ್ಚಿ ಹೋಗುತ್ತದೆ. ಬಹಳಷ್ಟು ಸವಕಳಿ ಉಂಟಾಗುತ್ತದೆ.

ಸರ್ಕಾರ ಓಕ್ ಮರಗಳನ್ನು ದನಕರುಗಳ ಮೇವಿಗಾಗಿ ಕತ್ತರಿಸುವುದನ್ನು ನಿಯಂತ್ರಿಸದೇ ಇರುವುದರಿಂದ ಮತ್ತು ಪೈನ್ ಮರಗಳ ಹಬ್ಬುವಿಕೆಯನ್ನು ತಡೆಯದೇ ಇರುವುದರಿಂದ ಓಕ್ ಮರಗಳ ಸಂಖ್ಯೆ ಕಡಿಮೆಯಾಗುವುದಕ್ಕೆ ಕಾರಣವಾಗಿದೆ ಎಂದು ಮಿರಾಬೆಹನ್ ಹೇಳುತ್ತಾರೆ. ಚಿಲ್‌ಪೈನ್ ಮರಗಳು ಒತ್ತೊತ್ತಾಗಿ ಬೆಳೆಯುವುದರಿಂದ ಭಂಜ್ ಮರಗಳು ದುರ್ಬಲವು ಮತ್ತು ತೆಳುವಾಗಿ ಉದ್ದವಾಗಿ ಬೆಳೆಯುವುದರಿಂದ ಚಿರ್‌ಪೈನ್‌ಗಳಿಗೆ ಕಾಡಿನಲ್ಲಿ ಪ್ರವೇಶಿಸಲು ಅನುಕೂಲವಾಗುತ್ತದೆ. ಅದು ಒಂದು ಸಲ ಬೆಳೆಯಲು ಪ್ರಾರಂಭಿಸಿದರೆ ತನ್ನ ಮುಳ್ಳುಗಳನ್ನು ನೆಲದ ಮೇಲೆ ಉದುರಿಸಲು ಪ್ರಾರಂಭಿಸುತ್ತದೆ. ಉಳಿದ ಮರಗಳು ಸತ್ತು ಹೋಗುತ್ತವೆ. ಪೈನ್ ಮರದ ಇಳುವರಿ ಆದಾಯತಂದುಕೊಡುವುದರಿಂದ ಸರ್ಕಾರಕ್ಕೆ ಈ ಬೆಳವಣಿಗೆಯನ್ನು ತಪ್ಪಿಸುವುದರ ಬಗ್ಗೆ ಆಸಕ್ತಿ ಇಲ್ಲ. ಓಕ್ ಮರದ ಸಂಖ್ಯೆ ಕಡಿಮೆಯಾಗುವುದಕ್ಕೆ ಬೆಹನ್ ಗ್ರಾಮಸ್ಥರನ್ನು ದೂಷಿಸುವುದಿಲ್ಲ. ಅವರ ಆರ್ಥಿಕ ಒತ್ತಡ ಅವರ ನಡಾವಳಿಯನ್ನು ರೂಪಿಸುತ್ತದೆ. ಗ್ರಾಮಸ್ಥರಿಗೆ ಓಕ್‌ಮರದ ಮಹತ್ವ ಗೊತ್ತಿದೆ. ಅವಿಲ್ಲದೆ ಹೋದಲ್ಲಿ ದನಕರುಗಳು ಕಂಗಾಲಾಗುತ್ತವೆ. ತೊರೆಗಳು ಒಣಗುತ್ತವೆ ಮತ್ತು ಪ್ರವಾಹ ಬಂದು

ಅವರ ಸಮತಟ್ಟಾದ ಹೊಲಗಳನ್ನು ನಾಶ ಮಾಡುತ್ತದೆ. ಆದರೆ ಈ ಸಮಸ್ಯೆ ಪರಿಹಾರಾತೀತವಲ್ಲವೆಂಬುದು ಬೆಹನ್‌ರ ಅಭಿಪ್ರಾಯ. ಮರಗಳ ರೆಂಬೆಗಳನ್ನು ವ್ಯವಸ್ಥಿತವಾಗಿ ಕತ್ತರಿಸಿದಲ್ಲಿ ಅವು ದನಕರುಗಳಿಗಾಗಿ ದೊಡ್ಡ ಪ್ರಮಾಣದಲ್ಲಿ ಮೇವನ್ನು ಒದಗಿಸುವವು. ಚಿರ್‌ಪೈನ್‌ಗಳನ್ನು ಮೂರೂವರೆಸಾವಿರ ಅಡಿಯಿಂದ ಐದು ಸಾವಿರ ಅಡಿಯ ಎತ್ತರಕ್ಕೆ ತೆಗೆದುಕೊಂಡು ಹೋಗಿ ಓಕ್ ಮರಗಳನ್ನು ಬೆಳೆಸಿದರೆ ಆ ಮರಗಳ ಮೇಲಿನ ಒತ್ತಡ ಕಡಿಮೆಯಾಗುತ್ತದೆ. ಇರುವ ಮೇವು ಸಹ ವೃದ್ಧಿಯಾಗುವುದು. ಈ ರಣನೀತಿ ಯಾವುದೇ ಕಾರಣಕ್ಕೂ ಚಿರ್‌ಪೈನ್‌ನಿಂದ ಬರುವ ಆದಾಯವನ್ನು ಸ್ಥಗಿತಗೊಳಿಸುವುದಿಲ್ಲ. ಆದರೆ ಅದನ್ನು ಅಗತ್ಯಕ್ಕೆ ತಕ್ಕ ಮಿತಿಯಲ್ಲಿ ಇಡಬಹುದು. ಪೈನ್ ಅರಣ್ಯದ ಉತ್ತಮ ವ್ಯವಸ್ಥೆ ಮತ್ತು ಅವುಗಳನ್ನು ಕಡಿಯುವ ಸಂಬಂಧ ಇರುವ ನಿಯಮಗಳನ್ನು ಪಾಲಿಸಿದರೆ ಒಳ್ಳೆಯ ಪೈನ್ ಅರಣ್ಯವನ್ನು ಬೆಳೆಸಬಹುದು ಹಾಗೂ ಆರ್ಥಿಕ ಪರಿಣಾಮವನ್ನು ಹೊಂದಬಹುದು.

ಮೀರಾಬೆಹನ್‌ರ ಪ್ರಕಾರ ಭಂಜ್ ಕಾಡುಗಳು ವಿಶೇಷತಃ ಹಿಮಾಲಯದ ದಕ್ಷಿಣ ಭಾಗದ ಇಳಿಜಾರು ಪ್ರದೇಶದಲ್ಲಿ ಇರುವಂಥ ನೈಸರ್ಗಿಕವಾದ ಆರ್ಥಿಕ ವರ್ತುಲ. ಆ ಕಾಡುಗಳ ವಿನಾಶಕ್ಕೆ ಒಪ್ಪಿಗೆ ಕೊಡುವುದೆಂದರೆ ಇಡೀ ನಿಸರ್ಗದ ರಚನೆಯ ಹೃದಯವನ್ನೇ ಕಿತ್ತು ಹಾಕಿದಂತೆ. ಅರಣ್ಯ ಇಲಾಖೆ ಮತ್ತು ರೈತಾಪಿ ಜನರ ಮಧ್ಯೆ ಸಂಬಂಧಗಳು ಹಳಸಿಹೋಗಿರುವುದರಿಂದ ಅರಣ್ಯ ಇಲಾಖೆ ಸ್ವತಃ ಬದಲಾವಣೆಗಳನ್ನು ತರಲಾರದು. ಈ ಸಮಸ್ಯೆಗೆ ಪರಿಹಾರ ಇಲಾಖೆ ಮತ್ತು ರೈತರ ಮಧ್ಯೆ ಸಹಕಾರವನ್ನು ಉಂಟುಮಾಡುವುದೇ ಆಗಿದೆ. ಅರಣ್ಯ ಇಲಾಖೆಯ ಕ್ಷೇತ್ರ ಸಿಬ್ಬಂದಿಯನ್ನು ಹೆಚ್ಚಿಸ ಬೇಕಲ್ಲದೆ ಅವರಿಗೆ ರೈತರ ಬಗ್ಗೆ ಹೊಸ ದೃಷ್ಟಿಕೋನವನ್ನು ಕೊಡುವ ವಿಶೇಷ ಕಾರ್ಯಾಗಾರಗಳನ್ನು ನಡೆಸಬೇಕು. ರಚನಾತ್ಮಕ ಕಾರ್ಯಕರ್ತರು ಗ್ರಾಮಸಮಿತಿಗಳನ್ನು ರಚಿಸುವುದರ ಜೊತೆಗೆ ಗ್ರಾಮೀಣ ರಕ್ಷಾಪಡೆಯು ಅರಣ್ಯ ಇಲಾಖೆಯೊಂದಿಗೆ ಕೆಲಸ ಮಾಡುತ್ತ ಕಾಡುಗಳನ್ನು ಉಳಿಸುವ ಹಾಗೂ ರಕ್ಷಿಸುವ ಕೆಲಸ ಮಾಡಬೇಕು. ಇಂಥ ಕ್ರಮಗಳ ಮೂಲಕ ಮರಗಳ ತುಂಡರಿಸುವಿಕೆಯನ್ನು ನಿಗ್ರಹಿಸಬಹುದು. ಮೀರಾಬೆಹನ್‌ರ ಪ್ರಕಾರ ಹಿಮಾಲಯದ ಕಾಡುಗಳು ಉತ್ತರ ಭಾರತದ ಬಯಲು ಪ್ರದೇಶದ ಪೋಷಕರಿದ್ದಂತೆ. ಆ ಬಯಲು ಪ್ರದೇಶಗಳು ಭಾರತದ ಧಾನ್ಯ ಸಂಗ್ರಹಾಲಯವಿದ್ದಂತೆ. ಆದ್ದರಿಂದ ಸರ್ಕಾರ ಈ ಪೋಷಕರುಗಳ ಆರೈಕೆ ಬಗ್ಗೆ ಎಷ್ಟೊಂದು ಗಮನ ಕೊಡಲು ಸಾಧ್ಯವೋ ಅಷ್ಟೊಂದು ಕೊಡಬೇಕು.

ಸುಂದರಲಾಲ್ ಬಹುಗುಣರವರು ಬೆಹನ್ ಬರೆದಿದ್ದ ಅನೇಕ ಪ್ರಬಂಧಗಳನ್ನು ಮತ್ತು ಲೇಖನಗಳನ್ನು ಓದಿದರು. ಅವರೊಂದಿಗೆ ಅನೇಕ ಬಗೆಯ ಪರಿಸರ ವಿಷಯಕ ಅಭಿಪ್ರಾಯಗಳನ್ನು ಮತ್ತು ಒಳನೋಟಗಳನ್ನು ಕುರಿತು ಚರ್ಚೆಮಾಡಿದರು. ಬೆಹನ್ ಪರಿಸರದ ಆಳವಾದ ವಿದ್ಯಾರ್ಥಿನಿಯೆಂದು ಆಗಲೇ ಪ್ರಸಿದ್ಧಿ ಪಡೆದಿದ್ದರು. ಆದ್ದರಿಂದ ಸುಂದರಲಾಲ್‌ರವರು ಪರಿಸರ ವಿಜ್ಞಾನಕ್ಕೆ ಸಂಬಂಧಿಸಿದಂತೆ ಬೆಹನ್‌ರ ವಿದ್ಯಾರ್ಥಿಯಾದರು. ಪ್ರಕೃತಿಯ ಜೀವನ ಚಕ್ರ ಮತ್ತು ಗ್ರಾಮೀಣ ಜನರ ಮಧ್ಯದ ಸಂಬಂಧದ ಜ್ಞಾನವನ್ನು ಬೆಳೆಸಿಕೊಳ್ಳಲು ಮೀರಾಬೆಹನ್‌ರ

ಆಲೋಚನಾ ಕ್ರಮ ತಮಗೆ ಬಹಳ ಮಹತ್ವದ್ದಾಗಿ ಒದಗಿ ಬಂತೆಂದು ಹೇಳುತ್ತಾರೆ. ಯಾವರೀತಿ ಶ್ರೀ ದೇವಸುಮನ್‌ರ ಪ್ರಭಾವ ತಮ್ಮ ಮೇಲೆ ಉಂಟಾಗಿತ್ತೊ ಅಷ್ಟೇ ಪ್ರಭಾವ ಮೀರಾಬೆಹನ್‌ರದ್ದಾಗಿತ್ತೆಂದು ಸುಂದರಲಾಲ್ ವರ್ಣಿಸಿದರು. ಪರ್ವತ ಪ್ರದೇಶದಲ್ಲಿರುವ ಹಳ್ಳಿಗಳ ಸೇವೆಯನ್ನು ಮಾಡಬೇಕೆಂಬುದರ ಪ್ರೇರಣೆ ಮೀರಾಬಾಯಿಯಿಂದಲೇ ದೊರೆಯಿತೆಂದು ಬಹುಗುಣ ಸ್ಪಷ್ಟವಾಗಿ ಹೇಳುತ್ತಾರೆ. ಪರಿಸರಾತ್ಮಕ ವಿಷಯಗಳ ಗಂಭೀರತೆಯನ್ನು ಅರಿತುಕೊಂಡರು. ಅಲ್ಲದೆ ಪರ್ವತ ಶ್ರೇಣಿಗಳಲ್ಲಿ ಯಾವ ಬಗೆಯ ಅಭಿವೃದ್ಧಿಯಾಗಬೇಕೆಂಬುದರ ಬಗ್ಗೆ ತಿಳಿದುಕೊಂಡರು. ಮೀರಾಬೆಹನ್ ಹಿಮಾಲಯದ ತಪ್ಪಲಲ್ಲಿ ವಾಸವಾಗಿದ್ದರೂ ಕೂಡ ದೇಶದ ಇತರ ಭಾಗಗಳಲ್ಲಿ ಆಗುತ್ತಿದ್ದ ಬೆಳವಣಿಗೆಗಳ ಬಗ್ಗೆ ತೀವ್ರವಾದ ಆಸಕ್ತಿಯನ್ನು ತಳೆಯುತ್ತಲೇ ಇದ್ದರು. ಅಭಿವೃದ್ಧಿಗೆ ಸಂಬಂಧಿಸಿದ ನೋಡಿದ ವಿಷಯಗಳ ಬಗ್ಗೆ ಅವರಿಗೆ ತುಂಬಾ ಅಸಾಮಾಧಾನ ಉಂಟಾಯಿತು. ಆಗ ಚಾಲ್ತಿಯಲ್ಲಿದ್ದ ಗ್ರಾಮೀಣಾಭಿವೃದ್ಧಿ ಸಮುದಾಯ ಯೋಜನೆಗಳನ್ನು ಪ್ರಯೋಗಾತ್ಮಕವಾಗಿ ಗಾಂಧೀ ಆದರ್ಶಕ್ಕೆ ಅನುಸಾರವಾಗಿ ಬಳಸಿಕೊಂಡರೆ ಗಾಂಧೀಯವರ ಗ್ರಾಮೀಣಾಭಿವೃದ್ಧಿಯ ಸಾಧ್ಯವಾದೀತೆಂದು ಮೀರಾಬೆಹನ್ ಭಾವಿಸಿದ್ದರು. ವಾರ್ಧಾ ಬಳಿ ನಡೆದ ಒಂದು ಸಮಾರಂಭದಲ್ಲಿ ಜವಾಹರ್‌ಲಾಲ್ ನೆಹರೂರವರನ್ನು ಭೇಟಿಮಾಡುವ ಅವಕಾಶ ಮೀರಾಬೆಹನ್‌ಗೆ ದೊರೆಯಿತು.

ಆಗ ತಮ್ಮ ಗೋಪಾಲ್ ಆಶ್ರಮವನ್ನು ಕೇಂದ್ರವಾಗಿ ಇಟ್ಟುಕೊಂಡು ಮಾಡಬಹುದಾದ ಗ್ರಾಮೀಣಾಭಿವೃದ್ಧಿಯ ಕಲ್ಪನೆಯನ್ನು ಅವರ ಮುಂದೆ ಇಟ್ಟರು. ನೆಹರು ಕೂಡಲೆ ಅವರ ವಿಚಾರವನ್ನು ಒಪ್ಪಿದರು. ಅವರ ಶುಭಾಶಯದೊಂದಿಗೆ ದೆಹಲಿಗೆ ಹೋದರು. ಅಲ್ಲಿ ಸಮುದಾಯ ಅಭಿವೃದ್ಧಿ ಯೋಜನೆಯ ಕೇಂದ್ರ ಸಮಿತಿಯೊಂದಿಗೆ ವಿವರಗಳನ್ನು ಚರ್ಚಿಸಲಾರಂಭಿಸಿದರು. ಕೇಂದ್ರ ಸರ್ಕಾರದ ಒಪ್ಪಿಗೆಯ ಮೇರೆಗೆ ಅವರು ಲಖನೌಗೆ ಹೋದರು. ಅಲ್ಲಿ ರಾಜ್ಯ ಸರ್ಕಾರಕ್ಕೆ ಗಾಂಧೀ ವಿಚಾರಾಧಾರಿತ ಗ್ರಾಮಾಭಿವೃದ್ಧಿಯ ವಿಚಾರವನ್ನು ತಿಳಿಸಿದರು. ಸರ್ಕಾರಕ್ಕೆ ತನ್ನ ಅಧಿಕಾರ ಚಲಾವಣೆ ವಿಚಾರದಲ್ಲಿ ಬಿಕ್ಕಟ್ಟಿದೆ ಎಂಬ ಭಾವನೆ ರಾಜ್ಯ ಸರ್ಕಾರದಲ್ಲಿ ಮೂಡಿದೆ ಎಂದು ಬೆಹನ್‌ರಿಗೆ ಅನಿಸಿತು. ಆದರೆ ಸರ್ಕಾರ ಒಂದು ಲಕ್ಷ ಇಪ್ಪತ್ತು ಸಾವಿರ ರುಪಾಯಿಗಳನ್ನು ಧನಸಹಾಯವನ್ನು ಕೊಡಲು ಮುಂದೆ ಬಂದದ್ದರಿಂದ ಮೀರಾಬೆಹನ್ ತಮ್ಮ ಯೋಜನೆಯನ್ನು ಬಲವಂತವಾಗಿ ಮಂಡಿಸಿದರು. ತಮ್ಮ ಯೋಜನೆಯನ್ನು ಸರ್ಕಾರ ಒಪ್ಪಿಕೊಂಡಿದೆ ಎಂದು ಅವರಿಗೆ ಸಮಾಧಾನವಾಯಿತು. ನಂತರ ಅವರು ತೆಹರಿಗೆ ಹಿಂದಿರುಗಿ ತಮ್ಮ ಯೋಜನೆಗೆ ಅಂತಿಮ ರೂಪ ಕೊಡಲು ಪ್ರಯತ್ನಿಸಿದರು. ತೆಹರಿ ಗಡವಾಲ್ ಪ್ರದೇಶದ ಜನರು ಆ ಯೋಜನೆಯಲ್ಲಿ ಆಸಕ್ತಿ ವಹಿಸುತ್ತಿರುವುದನ್ನು ಅವರು ಗಮನಿಸಿದರು. ಬೆಹನ್ ಒಂದು ಕ್ರಿಯಾಸಮಿತಿಯನ್ನು ರಚಿಸಿ ಸುಂದರಲಾಲ್‌ರನ್ನು ಯೋಜನಾ ವ್ಯವಸ್ಥಾಪಕರನ್ನಾಗಿ ನಿಯುಕ್ತಿ ಮಾಡಿದರು. ಇಡೀ ಯೋಜನೆಯ ಅನುಷ್ಠಾನವನ್ನು ಪರಾಮರ್ಶಿಸುವುದು ಮತ್ತು ಆ ಯೋಜನೆಯನ್ನು ಗಾಂಧೀ ತತ್ವಾಧಾರಿತವಾಗಿ

ನಡೆಯುವಂತೆ ಜನರಿಗೆ ಮಾರ್ಗದರ್ಶನ ಮಾಡುವುದು ಈ ಮುಂತಾದವು ಸುಂದರಲಾಲರ ಜವಾಬ್ದಾರಿಯಾಗಿತ್ತು. ಮೀರಾಬೆಹನ್‌ರ ನಿರೀಕ್ಷೆಗೆ ಗರಿಬಂತು. ೧೯೫೩ ಅಕ್ಟೋಬರ್ ೨ರಂದು ಆ ಕಾರ್ಯಕ್ರಮದ ಉದ್ಘಾಟನೆಯಾಯಿತು. ಆದಿನ ದೂರದೂರದ ಹಳ್ಳಿಗರು ಜಮಾಯಿಸಿದ್ದರು. ಅವರಲ್ಲಿ ಬಹಳಷ್ಟು ಜನರು ತಾವೇ ತೆಗೆದ ದಾರದಿಂದ ನೇಯ್ಗೆಯಾದ ಉಣ್ಣೆಬಟ್ಟೆಯನ್ನು ಧರಿಸಿದ್ದರು. ಪರ್ವತ ಪ್ರದೇಶದ ಆ ಮುಗ್ಧ ಜನರು ಆ ಕಾಡು ರಸ್ತೆಯಲ್ಲಿ ಮೈಲುಗಟ್ಟಲೆ ನಡೆದುಕೊಂಡು ಬಂದಿದ್ದರು. ಆದರೆ ಸರ್ಕಾರಿ ಅಧಿಕಾರಿಗಳಿಗೆ ಆ ಸ್ಥಳ ಮುಟ್ಟಲು ಹೆಚ್ಚು ಕಷ್ಟವೆನಿಸಿತು. ಕೆಲವು ಅಧಿಕಾರಿಗಳು ದಾರಿಯಲ್ಲಿ ಬರುವಾಗ ಗಾಯಮಾಡಿಕೊಂಡರು. ನೆಲದ ಮೇಲೆ ಬೆಹನ್‌ರೊಂದಿಗೆ ಕುಳಿತುಕೊಳ್ಳಲು ಕಷ್ಟವೆನಿಸಿತು. ಜಿಲ್ಲಾ ಯೋಜನಾಧಿಕಾರಿ ಹೇಸರಗತ್ತೆಯಿಂದ ಕೆಳಗೆ ಬಿದ್ದು ಬಿಟ್ಟ. ಅವನನ್ನು ತೆಹರಿ ಆಸ್ಪತ್ರೆಗೆ ಕರೆದುಕೊಂಡು ಹೋಗಬೇಕಾಯಿತು. ವಿಭಾಗೀಯ ಅರಣ್ಯಾಧಿಕಾರಿ ತನ್ನ ಕುದುರೆಯಿಂದ ಬಿದ್ದು ತಲೆಗೆ ಬ್ಯಾಂಡೇಜ್ ಪಟ್ಟಿ ಕಟ್ಟಿಕೊಂಡು ಬಂದ. ಜಿಲ್ಲಾ ನ್ಯಾಯಾಧೀಶ ತನ್ನ ಮೂಲಸ್ಥಾನಕ್ಕೆ ಹಿಂದಿರುಗಿದ ಮೇಲೆ ಒಂದುವಾರ ಹಾಸಿಗೆಯಲ್ಲಿ ವಿಶ್ರಾಂತಿ ಪಡೆಯಬೇಕಾಯಿತು. ಸ್ವಲ್ಪದಿನದಲ್ಲಿಯೇ ಸುಂದರಲಾಲ್ ಮತ್ತು ಮೀರಾಬೆಹನ್‌ಗೆ ಲಖನೌದಿಂದ ಕೆಲಸೂಚನೆಗಳು ಬರಲಾರಂಭಿಸಿದವು. ಆ ಸೂಚನೆಯನ್ನು ಗಮನಿಸಿದರೆ ಅಧಿಕಾರಶಾಹಿ ಆ ಯೋಜನೆಯ ಮೇಲಿನ ತನ್ನ ಹಿಡಿತವನ್ನು ಸಡಿಲಗೊಳಿಸಲು ಸಿದ್ಧವಿಲ್ಲವೆಂದು ಅನಿಸಿತು. ಆಗ ತಕ್ಷಣ ಮೀರಾಬೆಹನ್ ಲಖನೌಗೆ ಓಡಿ ಹೋದರು. ಅಲ್ಲಿ ಮೇಲಧಿಕಾರಿಗಳೊಂದಿಗೆ ಚರ್ಚಿಸಿದರು. ಮೇಲ್ವರ್ಗದ ಅಧಿಕಾರಿಗಳು ಬೆಹನ್‌ರಿಗೆ ತಮ್ಮ ಕಲ್ಪನೆಯ ಯೋಜನೆಯನ್ನು ಮುಂದುವರಿಸಿ ಎಂದು ತಿಳಿಸಿದರು. ಆದರೆ ಗೋಪಾಲ್ ಆಶ್ರಮಕ್ಕೆ ಹಿಂದಿರುಗಿದ ನಂತರ ಆ ಹಳೆ ಸಮಸ್ಯೆಗಳು ಹುಟ್ಟುತ್ತಲಿವೆಯೆಂದು ಗೊತ್ತಾಯಿತು. ಈ ಯೋಜನೆಯೂ ಕೂಡ ಅದೇ ಹಳೆಯ ಸಂಪ್ರದಾಯ ಬದ್ಧವಾಗಿ ನಡೆಯುವುದಾದರೆ ಅದನ್ನು ಸರ್ಕಾರಕ್ಕೆ ವಹಿಸಿಕೊಟ್ಟು ಸರ್ಕಾರ ತನ್ನ ಇಚ್ಛೆಯಂತೆ ಮಾಡಿಕೊಳ್ಳಲೆಂದು ಹಾರೈಸಿದರು. ಅದರಂತೆಯೇ ನಡೆದರು. ದೆಹಲಿಗೆ ಸ್ವಲ್ಪ ಸಮಯದ ಭೇಟಿಕೊಟ್ಟು ಗೋಪಾಲ್ ಆಶ್ರಮಕ್ಕೆ ಹಿಂದಿರುಗಿದರು. ಹತ್ತು ದಿನಗಳಲ್ಲಿ ತಮ್ಮ ಎಲ್ಲ ವಸ್ತುಗಳನ್ನು ಗಂಟುಮೂಟೆ ಕಟ್ಟಿ ತಾವು ಸಾಕಿದ್ದ ಪ್ರಾಣಿಗಳನ್ನು ವಿತರಿಸಿ ಹೊರಟು ಬಿಟ್ಟರು. ದಿಲ್ಲಿಯಲ್ಲಿ ಇದ್ದಾಗ ತಳಮಟ್ಟದ ಅಭಿವೃದ್ಧಿ ಕುರಿತಾದ ಕೆಲವು ಯೋಜನೆಗಳು ಕಾಶ್ಮೀರದಲ್ಲಿ ಇದೆ ಎಂದು ಗೊತ್ತಾಯಿತು. ಅಲ್ಲಿಗೆ ಹೋಗಲು ತೀರ್ಮಾನಿಸಿದರು. ಕಾಶ್ಮೀರ ಸರ್ಕಾರದೊಂದಿಗಿನ ತಮ್ಮ ಪರಿಚಯದ ಮೂಲಕ ತಮ್ಮ ಕಾರ್ಯಕ್ರಮಗಳಿಗೆ ಸೂಕ್ತವಾದ ಸ್ಥಳವನ್ನು ಆಯ್ಕೆ ಮಾಡಿಕೊಂಡರು. ಆ ಸ್ಥಳವನ್ನು ಅವರು ಗೋವಿನಿಂದ ಗೋಬಲ ಎಂದು ಕರೆದರು. ಗೋವುಗಳ ಕ್ಷೇಮಚಿಂತನೆಗಾಗಿ ಆ ಸ್ಥಳವೆಂದು ತಿಳಿಯಲಾಯಿತು. ಇಂಗ್ಲೆಂಡ್‌ನ ಡೆಪ್ಪರ್ ಎಂಬಲ್ಲಿನಿಂದ ಹಸುಗಳನ್ನು ಆಮದು ಮಾಡಿಕೊಂಡು ಪರ್ವತ ಪ್ರದೇಶಕ್ಕೆ ಅನುಗುಣವಾದ ಬಲಯುತ ದನಗಳನ್ನು ಅಭಿವೃದ್ಧಿ ಪಡಿಸಲು ಯೋಚಿಸಿದರು. ಆ ಹಸುಗಳು ಡೆಪ್ಪರ್‌ನಿಂದ ಭಾರತಕ್ಕೆ ಬಂದ ಕೂಡಲೇ ಅವರ ಈ

ಯೋಜನೆ ಭರದಿಂದ ಸಾಗಿತು. ಗೋಬಲ ಆಶ್ರಮ ಆರುಸಾವಿರ ಅಡಿ ಎತ್ತರದಲ್ಲಿ ಇದ್ದುದರಿಂದ ಬೇಸಿಗೆಯಲ್ಲಿ ಗೋವುಗಳನ್ನು ಮೇಯಿಸಲು ಒಳ್ಳೆಯ ಹುಲ್ಲುಗಾವಲು ದೊರೆತಂತಾಯಿತು. ಅರಣ್ಯ ಇಲಾಖೆಯು ಅವರಿಗೆ ಏಳುಸಾವಿರ ಅಡಿ ಎತ್ತರದಲ್ಲಿ ಮೂವತ್ತು ಎಕರೆಗಳನ್ನು ಮಂಜೂರು ಮಾಡಿತು. ಮಾರನೆ ವರ್ಷದಲ್ಲಿ ಇನ್ನು ಹೆಚ್ಚುವರಿಯಾಗಿ ಹದಿನಾರು ಎಕರೆ ಭೂಮಿಯನ್ನು ೮.೬೦೦ ಅಡಿ ಎತ್ತರದಲ್ಲಿ ಕೊಟ್ಟಿತ್ತು. ಆ ಸ್ಥಳ ಬಹಳ ಅದ್ಭುತವಾಗಿತ್ತು. ಒಂದು ಕಡೆ ಸಿಂಧ್ ಕಣಿವೆಯ ಸ್ಪಷ್ಟ ದೃಶ್ಯ ಕಾಣುತ್ತಿತ್ತು. ಇನ್ನೂ ಇತರ ಮೂರು ಬದಿಗಳಲ್ಲಿ ಫರ್ ಮತ್ತು ಪೈನ್ ಮರಗಳು ಬೆರತುಕೊಂಡ ಯಾವುದೇ ರೀತಿ ಗಾಸಿಯಾಗದೇ ಇರುವಂಥ ಕಾಡಿತ್ತು. ಅಡಿಯಲೆಲ್ಲ ಸಮೃದ್ಧವಾದ ಉಪಯುಕ್ತ ಕಳೆಗಳಿಂದ ಭೂಮಿ ಶ್ರೀಮಂತವಾಗಿತ್ತು. ಮಿಶ್ರತಳ ಸಂತಾನ ಯಶಸ್ಸು ಪಡೆಯುತ್ತಿದ್ದಂತೆಯೇ ರಾಜ್ಯ ಸರ್ಕಾರದ ಪಶುಸಂಗೋಪನಾ ಇಲಾಖೆಯ ನೀತಿಯಲ್ಲಿ ಬದಲಾವಣೆಯಾಯಿತು. ವಿದೇಶಿ ದನಗಳ ಅಗತ್ಯ ಇನ್ನು ಮುಂದೆ ಇಲ್ಲವೆಂದು ಆ ನೀತಿ ಪ್ರತಿಪಾದಿಸಿತು. ಬೆಹನ್‌ರ ಯೋಜನೆ ಈ ರೀತಿ ಮುಕ್ತಾಯಗೊಂಡಿದ್ದರಿಂದ ಅವರು ಡೆಪ್ಪರ್ ಹಸುಗಳನ್ನು ಹಿಮಾಚಲಪ್ರದೇಶದ ಸಿಮ್ಲಾಕ್ಕೆ ವರ್ಗಾಯಿಸಿದರು. ಅವರು ಮತ್ತು ಅವರ ಜೊತೆಗಾರರು ತೆಹರಿಗೆ ಹಿಂದಿರುಗಿದರು. ಈ ಎಲ್ಲ ಪ್ರಯೋಗಗಳಿಂದ ಸರ್ಕಾರಿ ಯೋಜನೆಗಳೊಂದಿಗೆ ತಮಗೆ ಕೆಲಸ ಮಾಡಲು ಸಾಧ್ಯವಾಗುವುದಿಲ್ಲವೆಂದು ಅವರಿಗೆ ಅನಿಸಿತು. ಕೈಯಲ್ಲಿ ಸ್ವಲ್ಪವೇ ಹಣ ಉಳಿಯಿತು. ಪಶುಲೋಕ, ಗೋಪಾಲ್ ಆಶ್ರಮ ಮತ್ತು ಗೋಬಲ ಯೋಜನೆ ಎಲ್ಲವೂ ಅಪೂರ್ಣವಾಗಿ ಉಳಿದವು. ಆಗ ಅವರಿಗೆ ಗರವಾಲ್ ಪರ್ವತ ಶ್ರೇಣಿಯ ಬಳಿ ಚಂಬಾ ಎಂಬುವಲ್ಲಿ ಒಂದು ಸುಂಧರ ಮನಮೋಹಕವಾದ ಸ್ಥಳ ಸಿಕ್ಕಿತು. ಅದನ್ನು ಅವರು ಪಕ್ಷಿಕುಂಜ ಎಂದು ಕರೆದರು. ಅಲ್ಲಿ ಕುಳಿತುಕೊಂಡು ತಮ್ಮ ನೆನಪುಗಳನ್ನು ಲಿಪಿಬದ್ಧಗೊಳಿಸಲಾರಂಭಿಸಿದರು. ಆಗ ಅಲ್ಲಿ ಅವರಿಗೆ ಈ ಹಿಂದಿನ ವರ್ಷಗಳ ಪ್ರಕೃತಿ ಸಂಗೀತ ಕೇಳಿಬರಲಾರಂಭಿಸಿತು. ಬಯಲು ಸೀಮೆಯ ಬಿಸಿಲು ಮತ್ತು ಮಲೇರಿಯಾ ಹಾಗೂ ಪರ್ವತದ ಕಡಿದಾದ ಕಣಿವೆ ಇವೆಲ್ಲ ತಮ್ಮ ಆರೋಗ್ಯಕ್ಕೆ ಪ್ರತಿಕೂಲವೆಂದು ಅವರಿಗೆ ಅನಿಸಿತು. ಆದ್ದರಿಂದ ಯೂರೋಪಿಗೆ ಹಿಂದಿರುಗಲು ನಿಶ್ಚಯಿಸಿದರು. ಮೊದಲು ಇಂಗ್ಲೆಂಡ್‌ಗೆ ಹೋದರು. ನಂತರ ವಿಯೆನ್ನಾಕ್ಕೆ. ಅಲ್ಲಿ ಇದ್ದು ಕೊಂಡು ತಮ್ಮ ಬರವಣಿಗೆ ಮೂಲಕ ಹಾಗೂ ಉಪನ್ಯಾಸಗಳ ಮೂಲಕ ಹಿಮಾಲಯ ಪರಿಸರವನ್ನು ಹಾಗೂ ಗಾಂಧೀಯವರ ವಿಚಾರಗಳಿಗಾಗಿ ಆಂದೋಲನ ಮುಂದುವರಿಸಿದರು.

ಅಂತಿಮವಾಗಿ ಮೀರಾಬೆಹನ್ ೧೯೫೯ರಲ್ಲಿ ಭಾರತದಲ್ಲಿಯ ತಮ್ಮ ಯೋಜನೆಗಳಿಂದ ನಿರಾಶರಾಗಿ ಹಿಂದಿರುಗಿದರೂ ಕೂಡ ಅವರ ಸೇವಾ ಜೀವನದ ಪ್ರಭಾವ ಪರ್ವತ ಪ್ರದೇಶದ ಜನರ ಮೇಲೆ ಗಾಢವಾಗಿ ಉಳಿಯಿತು. ಸ್ವತಃ ಬಹುಗುಣರ ಮೇಲೆ ಆ ಪ್ರಭಾವ ಹೆಚ್ಚು ಪರಿಣಾಮಕಾರಿಯಾಗಿ ಉಳಿಯಿತು. ಅವರ ನಿರ್ಗಮನದ ನಂತರ ಸುಂದರಲಾಲ್ ಕೆಳಮಟ್ಟದಲ್ಲಿ ಜನರನ್ನು ಸಂಘಟಿಸಲು ಸಮಿತಿಗಳನ್ನು ರಚಿಸಲು ಪ್ರಾರಂಭಿಸಿದರು. ಅವುಗಳ ಉದ್ದೇಶ್ಯ ಸರಳ, ವಿಕೇಂದ್ರೀಕೃತ ಮತ್ತು ಸುಸ್ಥಿರ

ಸಮಾಜವನ್ನು ಗಾಂಧೀಜಿ ಆಲೋಚಿಸಿದಂತೆ ಮಾಡುವುದು ಅದರ ಉದ್ದೇಶ್ಯವಾಗಿತ್ತು. ಬೆಹನ್‌ರವರ ಕೆಲಸದ ಬಹು ಮಹತ್ವದ ಪರಿಣಾಮವೇನೆಂದರೆ ಶ್ರಮಜೀವಿಗಳ ಸಹಕಾರ ಸಂಘಗಳ ರಚನೆಯಾದದ್ದು, ಆ ಸಂಘಗಳೇ ಕ್ರಮೇಣ ೧೯೭೦ರ ದಶಕಗಳಲ್ಲಿ ಜನಾಂದೋಲನ ಪ್ರಾರಂಭವಾಗಲು ಕಾರಣವಾಯಿತು. ೧೯೮೧ರಲ್ಲಿ ಚಳುವಳಿಯ ಕಾರಣದಿಂದಾಗಿ ಸುಂದರಲಾಲ್ ಬಹುಗುಣ ಯೂರೋಪಿಗೆ ಹೋದರು. ವಿಯೆನ್ನಾದಲ್ಲಿ ಬೆಹನ್‌ರ ಭೇಟಿಯಾಯಿತು. ಪರ್ವತಗಳನ್ನು ಉಳಿಸಬೇಕೆಂಬ ತಮ್ಮ ಕೂಗು ಈಗ ಜನರಿಂದಲೇ ಕೇಳಿಬರುತ್ತಿರುವುದನ್ನು ತಿಳಿದು ಅವರಿಗೆ ಸಮಾಧಾನವಾಯಿತು. ಆಗ ಸುಂದರಲಾಲ್‌ರು ಬೆಹನ್‌ಗೆ ಈ ರೀತಿ ತಮ್ಮ ಅಳಲನ್ನು ತೋಡಿಕೊಂಡರು, "ನೀವು ನಮ್ಮನ್ನು ಎಚ್ಚರಿಸಲು ಪ್ರಯತ್ನಿಸಿದಾಗ ನಾವು ನಿದ್ರಾಸ್ಥಿತಿಯಲ್ಲಿಯೇ ಉಳಿದುಕೊಂಡೆವು. ಈಗ ನಾವು ಸಕ್ರಿಯರಾಗಿರುವಾಗ ನೀವು ನಮ್ಮಿಂದ ಇಷ್ಟು ದೂರದಲ್ಲಿದ್ದೀರಿ". ಅದಕ್ಕೆ ಬೆಹನ್‌ರ ಉತ್ತರ ಹೀಗಿತ್ತು. ನಿಸರ್ಗಕ್ಕೆ ಹಿಂದಿರುಗಿರಿ. ಅದು ಹಿಮಾಲಯದ ಗತವೈಭವ ತಂದು ಕೊಡುವುದು. ಆಸ್ಟ್ರಿಯಾದಲ್ಲಿ ಆಗ ತುಂಬ ಚಳಿಯಿತ್ತು. ಸುಂದರಲಾಲ್ ಬಳಿ ಚಳಿ ತಡೆಯಬಹುದಾದಷ್ಟು ಬಟ್ಟೆಗಳಿರಲಿಲ್ಲ. ಆಗ ಬೆಹನ್ ಅವರಿಗೆ ಒಂದು ಜಾಕೆಟ್ ಕಾಣಿಕೆ ಕೊಟ್ಟರು. ಅದನ್ನು ತಾವು ಆಶೀರ್ವಾದವೆಂದು ಸ್ವೀಕರಿಸಿದ್ದಾಗಿ ಮತ್ತು ಅದು ಈ ದಿನದ ವರೆಗೆ ತಮ್ಮ ಬಳಿ ಇದೆಯೆಂದು ಸುಂದರಲಾಲ್ ಹೇಳುತ್ತಾರೆ. ಒಂದು ಉದ್ದೇಶ್ಯಕ್ಕಾಗಿ ಜೀವನವನ್ನು ಮುಡುಪಾಗಿಟ್ಟ ಒಬ್ಬ ನಾಯಕನಿಂದ ದೊರೆತ ಕಾಣಿಕೆ ದೇವರಿಂದ ದೊರೆತ ಕಾಣಿಕೆಯೆಂದೇ ಭಾವಿಸಲಾಗುತ್ತದೆ. ಬೆಹನ್ ೧೯೮೨ ಜುಲೈ ೨೦ ರಂದು ವಿಯೆನ್ನಾದಲ್ಲಿ ನಿಧನರಾದರು.

* * *

ವೇದದಲ್ಲಿಯ ಮುತ್ತುಗಳು

– ವಿನೋಬಾ

ತ್ವಂ ತ್ರಾತಾತರಣೆ ಚೇತ್ಯೋ ಭೂಃ ಪಿತಾ ಮಾತಾ ತದಮಿನ್ಮಾನುಷುಣಾಂ

ಹೇ ಭಗವಂತ, ನೀನು ಚೇತ್ಯ, ಚಿತ್ತದ ಒಳಗೆ ಇದ್ದುಕೊಂಡು ಚಾಲನೆಯನ್ನು ಕೊಡುವಂಥವನು ಮತ್ತು ಬಾಹ್ಯದಲ್ಲಿ ತಂದೆ-ತಾಯಿ ಇತ್ಯಾದಿ ರೂಪಗಳಿಂದ ಪಾಲಿಸುವಂಥವನು. ಅತ್ಯಂತ ಪ್ರಾಚೀನ ಕಾಲದಿಂದಲೂ ಭಕ್ತನ ಅನುಭವ ಇದು. ಮಗು ತಾಯಿಯ ಉಪೇಕ್ಷೆ ಮಾಡಬಹುದು, ಮರೆತುಬಿಡಬಹುದು. ಆದರೆ ತಾಯಿಯ ದೃಷ್ಟಿ ಮಗುವಿನ ಮೇಲೆ ಸದಾ ಇರುತ್ತದೆ.

* * *

ಅಹಶ್ಚ ಕೃಷ್ಣಮಹರ್ಜುನಂ ಚ

ಕೃಷ್ ಧಾತುವಿನಿಂದ ಕೃಷ್ಣ ಶಬ್ದ ರಚಿತವಾಗಿದೆ. ಕೃಷ್ ಎಂದರೆ ವ್ಯವಸಾಯ ಮಾಡುವವನು. ನೇಗಿಲಯೋಗಿ ಅಂದರೆ ನೇಗಿಲನ್ನು ನಡೆಸುವವನು. ಕೃಷ್ಣ ಎಂದರೆ ಕಪ್ಪು ಅಲ್ಲ, ಕಪ್ಪು ಶಬ್ದಕ್ಕೆ ಬೇರೆ ಅರ್ಥಗಳಿವೆ. ಕೃಷ್ಣ ಅಂದರೆ ಶಾಮ ವರ್ಣ. ಹಿಂದೂಸ್ತಾನದ ಹೊಲಗಳಲ್ಲಿ ಯಾರು ಶಾಮನಾದನೋ ಆತ ಕೃಷ್ಣ. ಯಾರು ಹೊಲದಲ್ಲಿ ಕೆಲಸಮಾಡುವುದಿಲ್ಲವೋ ಆತ ಅರ್ಜುನ. ಅಂದರೆ ಬಿಳಿ ಉಡುಪಿನವರೆಂದು ಯಾರನ್ನು ಕರೆಯುತ್ತೇವೆಯೋ ಆ ವರ್ಗ.

ವೇದದ ಈ ಮಂತ್ರದ ಒಂದು ಭಾಗ ಕೃಷ್ಣ. ಇನ್ನೊಂದು ಭಾಗ ಅರ್ಜುನ. ಅರ್ಜುನದ ಅರ್ಥ ಬಿಳಿ ಮತ್ತು ಕೃಷ್ಣದ ಅರ್ಥ ಶಾಮ. ಈ ರೀತಿ ಸಮಾಜದ ಇಬ್ಭಾಗವಾಗಿದೆ. 'ಕೃಷ್ಣಾರ್ಜುನ' ಬಣ್ಣವಾಚಕ ಶಬ್ದ. ವೇದದಲ್ಲಿ ಕೂಡ ಈ ಅರ್ಥಗಳಲ್ಲಿಯೇ ಪ್ರಯುಕ್ತವಾಗಿದೆ. ದಿನದ ಕೃಷ್ಣ ಭಾಗ ಮತ್ತು (ಅರ್ಜುನ) ಶುಕ್ಲ ಭಾಗ ಹಗಲು. ಸಾರಾಂಶ- ಕೃಷ್ಣ ಮತ್ತು ಅರ್ಜುನ ಈ ಎರಡು ಶಬ್ದಗಳು ಸಂಸ್ಕೃತಿಯ ಸೂಚಕವಾಗಿವೆ.

* * *

ಉಗ್ರಂ ನೋವಃ ಪಾರ್ಯೆ ಅಹನ್ ವಾಃ

ಬಿಡುಗಡೆ ಹೊಂದುವ, ಅಂತಿಮದಿನ ನಮಗೆ ಉಗ್ರ ರಕ್ಷಣೆ ಪ್ರಾಪ್ತವಾಗಲಿ! ಆ ಸಮಯದಲ್ಲಿ ಬುದ್ಧಿ ತನ್ನ ಸ್ಥಳದಲ್ಲಿ ಇರುವುದಿಲ್ಲ.

* * *

ಗೌರಸಿ ವೀರ ಗವ್ಯತೆ ಅಶ್ವೋ ಅಶ್ವಾಯತೆ ಭವ

ನಿನ್ನ ಸಖ್ಯವನ್ನು ಯಾರೂ ತಳ್ಳಿಹಾಕಲಾರರು. ಏಕೆಂದರೆ ಯಾರು ಗೋವನ್ನು ಬಯಸುತ್ತಾರೋ ಅವರ ಎದುರಿನಲ್ಲಿ ನೀನು ಗೋವಾಗಿ ನಿಂತುಕೊಳ್ಳುತ್ತೀಯೆ. ಯಾರು ಕುದುರೆ ಬಯಸುತ್ತಾರೋ ಅವನಿಗಾಗಿ ನೀನು ಕುದುರೆಯಾಗುತ್ತೀಯೆ.

ಹೀಗೆ ನಮ್ರ ಮತ್ತು ಸಹಜವಾಗಿ ಬಾಗುವ ಮೈತ್ರಿಯನ್ನು ಯಾರು ತಾನೆ ತಳ್ಳಲು ಸಾಧ್ಯ?

* * *

ಇಂದ್ರೋ ಮಾಯಾಭಿಃ ಪುರೂರೂಪ ಈಯತೆ

ಇಂದ್ರ ಮಾಯೆಯ ಕಾರಣದಿಂದ ಬೇರೆ ಬೇರೆ ರೂಪ ಧರಿಸುತ್ತಾನೆ. ಮಾಯೆಯ ಸ್ವರೂಪವನ್ನು ಏನೆಂದು ಹೇಳಲಾಗುತ್ತದೆ? ಅದು ಬದಲಾಗುತ್ತಿರುತ್ತದೆ. ಸಾವಿರಾರು ರೂಪಗಳನ್ನು ಮಾಯೆ ಧರಿಸುತ್ತದೆ. ಸಹಸ್ರ–ಸಹಸ್ರ ಅನಂತ–ಅನಂತ ರೂಪಧಾರಿಣಿ ಮಾಯೆ.

* * *

ನಮ ಇದುಗ್ರಂ ನಮ ಆ ವಿವಾಸೆ ನಮೋ ದಾಧಾರ ಪ್ರಥವೀಮುತದ್ಯಾಮ್

ನಮ್ರತೆ ಪ್ರಥ್ವೀ ಮತ್ತು ಸ್ವರ್ಗವನ್ನು ಧರಿಸಿದೆ. "ನಮ್ರತೆಯೆ ಉನ್ನತವಾಗಿದೆ. ನಾನು ನಮ್ರತೆಯ ಉಪಾಸನೆ ಮಾಡುತ್ತೇನೆ. ನಮ್ರತೆ ಪೃಥ್ವೀ ಮತ್ತು ಸ್ವರ್ಗವನ್ನು ಧರಿಸಿದೆ." ಇಲ್ಲಿ ನಮ್ರತೆ ಎಂಬುದು ಪರಮೇಶ್ವರನ ಸಂಜ್ಞೆ, 'ಓಂ ನಮೋ' ಈ ತ್ರ್ಯಕ್ಷರಿ ಮಂತ್ರದಲ್ಲಿ 'ಓಂ ಮತ್ತು ನಮೋ' ಎರಡು ಭಗವಂತನ ಹೆಸರುಗಳು. ನಾಮ ಶಬ್ದ 'ನಮ್' ಧಾತುವಿನಿಂದ ರಚಿತವಾಗಿದೆ. ಇದರಿಂದ ನಮ್ರತೆ ಮತ್ತು ನಮಸ್ಕಾರ ಸಾಧಿತವಾಗಿದೆ. ನಾಮ ಭಕ್ತನನ್ನು ನಮ್ರನನ್ನಾಗಿ ಮಾಡುತ್ತದೆ. ನಮ್ರತೆಯ ಹೊರತಾಗಿ ಸತ್ಯಶೋಧನೆ ಆಗುವುದಿಲ್ಲ. ಆದ್ದರಿಂದ ವಿಜ್ಞಾನಿಗಳು ನಮ್ರರಾಗಿರುತ್ತಾರೆ. ನಮ್ರತೆಯಿಲ್ಲದೆ ಚಿತ್ತಶೋಧನೆ ಆಗುವುದಿಲ್ಲವಾದ್ದರಿಂದ ಎಲ್ಲ ಆಧ್ಯಾತ್ಮಿಕ ಪುರುಷರು ನಮ್ರರಾಗಿರುತ್ತಾರೆ. ಗಾಂಧೀಜಿಯವರು ಈಶ್ವರನ ನಮ್ರತೆಯನ್ನು ವರ್ಣಿಸುತ್ತ ಆತನನ್ನು 'ದೀನ ಭಂಗಿಯ ಹೀನ ಕುಟೀರದ ನಿವಾಸಿ' ಎಂದು ಕರೆದಿದ್ದಾರೆ. ಅವರ ಈ ಅದ್ಭುತ ಪ್ರಾರ್ಥನೆಯಲ್ಲಿ ಗಾಂಧೀ ಹೇಳುತ್ತಾರೆ. 'ಹೇ ನಮ್ರತೆಯ ಸಾಮ್ರಾಟ! ನಿನ್ನದೇ ಆದ ನಮ್ರತೆಯನ್ನು ನೀನು ನಮಗೆ ಕೊಡು.'

'ನಮೋ' ಎಂದರೆ ನಮಸ್ಕರಿಸುವವನು, ಬಾಗುವವನು.

ಈಶ್ವರನ ಪರವಾಗಿ ಹೇಳುವುದಾದರೆ, 'ನಮೋ' ಎಂದರೆ ಈಶ್ವರ ಭಕ್ತನನ್ನು ಮೇಲೆತ್ತುವುದಕ್ಕಾಗಿ ಬಾಗುವಂಥವನಾಗಿದ್ದಾನೆ. ಯಾವ ರೀತಿ ತಾಯಿ ಮಗುವನ್ನು ಕಂಕುಳಲ್ಲಿ ಎತ್ತಕೊಳ್ಳುವುದಕ್ಕಾಗಿ ಬಾಗುತ್ತಾಳೋ ಆ ರೀತಿ.

ಭಕ್ತನ ಪರವಾಗಿ ಹೇಳುವುದಾದರೆ 'ನಮೋ' ಎಂದರೆ ಎದುರಿಗೆ ಇರುವವನು ಪರಮ ನಮ್ರ. ಸೇವೆ ಮಾಡಿ ನಮ್ರನಾಗಿರುವಂಥವನು.

* * *

ಆದಿತ್ಯಂತಂ ಚಿದಾಘ್ರಣೆ ಪೂಷನ್ ದಾನಾಯ ಚೋದಯ
ಪಣೇಶ್ಚಿದ್ ವಿ ಮ್ರಧಾ ಮನಃ

ತಪ–ತಪಸಿ ಶುದ್ಧ ಮಾಡುವ ಹೇ ದೇವ! ಯಾರು ಇಂದು ಕೊಡಬಯಸುವುದಿಲ್ಲವೋ ಅವನ ಮನಸ್ಸನ್ನು ಕೂಡ ಕೊಡುವ ಕಡೆಗೆ

ಪ್ರೇರಿತಗೊಳಿಸು. ಕೃಪಣನ ಮನಸ್ಸನ್ನು ಕೂಡ ಕೊಡುವ ಕಡೆಗೆ ಪ್ರೇರಿತಗೊಳಿಸು. ಕೃಪಣನ ಮನಸ್ಸನ್ನು ಕೂಡ ಮೃದು ಮಾಡು.

* * *

ಆಂತರ್ಯದಲ್ಲಿ ಮಾನಸಿಕ ತಾಪ ಮತ್ತು ಬಾಹ್ಯದಲ್ಲಿ ಪರಿಸ್ಥಿತಿಯ ತಾಪ ಇದು ಮಾನವನ ಶುದ್ಧಿಗಾಗಿ ಪರಮೇಶ್ವರ ಮಾಡಿದ ಯೋಜನೆ.

ಅಗ್ರಣಿ = ತಪನಶೀಲತೆ, ಎಲ್ಲರ ಪರೀಕ್ಷೆ ಮಾಡುವವ ಮತ್ತು ಎಲ್ಲರನ್ನು ತಪಗೊಳಿಸಿ ನೋಡುವ ಶೋಧಕ;

ಪೂಷನ್ = ಪೋಷಣೆ ಮಾಡುವಂಥವ;

ಪ್ರಾಣಿ = ವ್ಯಾಪಾರ-ವ್ಯವಹಾರ ಮಾಡುವಂಥ ಜನ, ವ್ಯವಹಾರ ಕುಶಲರೆಂದು ತಿಳಿಯಲ್ಪಡುವಂಥವರು ಪರಿಣಾಮತಃ ಕೃಪಣ, ಕಂಜೂಸರಾಗಿರುತ್ತಾರೆ.

* * *

ಪು ಮಾನ್ ಪುಮಾಂಸಂ ಪರಿ ಪಾತು ವಿಶ್ವತಃ

ಮನುಷ್ಯನು ಮನುಷ್ಯನ ರಕ್ಷಣೆಯನ್ನು ಜಗತ್ತಿನಲ್ಲಿ ಎಲ್ಲ ಪ್ರಕಾರವಾಗಿ ಮಾಡಬೇಕಾಗುವುದು.

* * *

ಬ್ರಹ್ಮ ವರ್ಮ ಮಮಾತರಂ

ಬ್ರಹ್ಮನಿಷ್ಠೆ ಅಂದರೆ ಬ್ರಹ್ಮಚರ್ಯ ರೂಪ. ಯಾವಾಗಲೂ ನಮ್ಮೊಳಗೆ ಇರಲಿ. ಬ್ರಹ್ಮನಿಷ್ಠೆ ಅಂದರೆ ಪರಮಾತ್ಮನ ಮೇಲೆ ವಿಶ್ವಾಸ.

* * *

ದೂರೆದೃಶಂ ಗ್ರಹ ಪತಿಮಥರ್ಯಂ

ದೂರೆದೃಶಂ ಅಂದರೆ ದೂರ ನೋಡುವವನು. ಅಗ್ನಿ ದೂರದ ವರೆಗೆ ದೃಷ್ಟಿ ಹಾಕುತ್ತದೆ. ಆದರೆ ಮನೆಯ ಅಡುಗೆ ಮಾಡುತ್ತದೆ. ಆದ್ದರಿಂದ ಗ್ರಹಪತಿ. ಇದರಲ್ಲಿ ಋಷಿ ಅಗ್ನಿಯ ಎರಡು ಗುಣಗಳನ್ನು ಪೃಥಕರಣ ಮಾಡಿದ್ದಾನೆ. ಒಂದು ಆಕಾಶ ಮತ್ತು ಇನ್ನೊಂದು ಉಷ್ಣತೆ. ಪ್ರಕಾಶ ವ್ಯಾಪಕವಿದೆ. ಉಷ್ಣತೆ ವಿಶಿಷ್ಟವಿದೆ.

* * *

ಆ ಪಖ್ತಾಸೊ ಭಲಾನಸೊ ಭನಂತ

ಇಂದು ಯಾವುದಕ್ಕೆ ಪಖ್ತುನಿಸ್ತಾನ ಎಂದು ಹೇಳಲಾಗುತ್ತದೋ, ಎಲ್ಲಿಯ ಜನರು ಪಖ್ತನರು ಅಥವಾ ಪಠಾಣವೆಂದು ಕರೆಯಲಾಗುತ್ತದೋ ಅವರಲ್ಲಿ ಈ ಉಲ್ಲೇಖವಿದೆ. ಆ ಪಖ್ತಾಸೊ ಭಲಾನಸೊ - ಅಂದರೆ ಉದ್ದ ಮೂಗಿನವರು ಅಲ್ಲಿರುತ್ತಾರೆ. ಇಂದು ಕೂಡ ಅಲ್ಲಿಯ ಜನ ಉದ್ದ ಮೂಗಿನವರಾಗಿದ್ದಾರೆ. ಪಖ್ತಾಃ ಅಂದರೆ ಪಖ್ತೂನ್. ಅವರನ್ನೇ ಪಠಾಣವೆಂದು ಕರೆಯುತ್ತಾರೆ.

ಜಗತ್ತಿನ ಸರ್ವಶ್ರೇಷ್ಠ ವ್ಯಾಕರಣಕಾರನಾಗಿರುವಂಥ ಪಾಣಿನಿ ಪೇಷಾವರದ ಪಖ್ತೂನಿಸ್ತಾನದ ನಿವಾಸಿಯಾಗಿದ್ದ.

ಸಮುದ್ರ ಸೇವ ಮಹಿಮಾ ಗಭೀರಃ ವಾತಸ್ಸೇವ ಪ್ರಜವೋ ನಾನ್ಯೇನ

ಇವನ (ಶಾಂತಿಯ) ಮಹಿಮೆ ಸಮುದ್ರದ ರೀತಿ ಗಭೀರ. ಇವನ ವಾಯು ವೇಗದ ತುಲನೆಯನ್ನು ಯಾರೊಂದಿಗೂ ಆಗಲಾರದು.

* * *

ಯಾಸಾಂ ರಾಜಾ ವರುಣೋ ಯಾತಿ ಮಧ್ಯೆ ಸತ್ಯಾನೃತೆ ಅವಪಶ್ಯಂ ಜಾನಾಂ

ವರುಣನಾಗಿ ಭಗವಂತ ನೀರಿನಲ್ಲಿ ಇರುತ್ತಾನೆ. ಆ ರಾಜಾ ವರುಣ ಸಮುದ್ರದಲ್ಲಿ ಅಧಿಷ್ಠಿತನಿದ್ದಾನೆ. ಮತ್ತು ಮನುಷ್ಯನ ಸತ್ಯ ಮತ್ತು ಅಸತ್ಯವನ್ನು ನೋಡುತ್ತಿದ್ದಾನೆ. ಬಾರತೀಯ ಸಂಸ್ಕೃತಿಯಲ್ಲಿ ನಮ್ಮ ಸಂಬಂಧ ಪಶುಗಳೊಂದಿಗೂ ಕೂಡ ಇದೆ. ಹಸು ಮತ್ತು ಎತ್ತನ್ನು ನಮ್ಮ ಪರಿವಾರದ ಸದಸ್ಯರೆಂದು ಮಾನ್ಯ ಮಾಡಿದ್ದೇವೆ. ವೇದ ಕಾಲೀನ ಮತ್ತು ನಾಲ್ಕು ಕಾಲಿನವುಗಳಿಗೆ ನಾವು ಕಲ್ಯಾಣ ಬಯಸುತ್ತೇವೆ. ಇದೆಲ್ಲವು ನಿಸರ್ಗದೊಂದಿಗಿನ ಸಂಪರ್ಕದಿಂದಲೇ ಆಗಲು ಸಾಧ್ಯ. ಅದಿಲ್ಲದಿದ್ದರೆ ಶಾರೀರಿಕ ಮತ್ತು ಮಾನಸಿಕ ಸ್ವಾಸ್ಥ್ಯ ಪ್ರಪ್ತವಾಗಲಾರದು.

* * *

ಸಸ್ತು ಮಾತಾ ಸಸ್ತು ಪಿತಾ ಸಸ್ತು ಶ್ವಾ ಸಸ್ತು ವಿಶ್ಪತಿಃ

ತಾಯಿ, ತಂದೆ, ನಾಯಿ, ರಾಷ್ಟ್ರಪತಿ ಎಲ್ಲರು ಮಲಗಲಿ. ಎಲ್ಲ ಜಾತಿಯವರು ಕೂಡ ಮಲಗಲಿ. ವಿಶ್ವದ ರಾಜನು ಕೂಡ ಮಲಗಲಿ. ರಾತ್ರಿ ಜಾಗರಣೆ ಮಾಡಿಕುಳಿತುಕೊಳ್ಳದಿರಲಿ. ರಾತ್ರಿ ಉತ್ತಮ ನಿದ್ರೆ ಮಾಡಲಿ.

* * *

ಪಶ್ಯೇಮಾ ಶರದಃ ಶಂತ ಜೀಪೆಮ ಶರದಃ ಶತಂ

ಮಾನವ ದೇಹದ ಪೂರ್ಣ ಲಾಭ ಪಡೆಯಬೇಕು. ಸಮಾಜಕ್ಕೂ ಕೂಡ ಪೂರ್ಣಸೇವೆ ದೊರೆಯಬೇಕು. ಮತ್ತು ಆತ್ಮದರ್ಶನಕ್ಕಾಗಿ ಕೂಡ ಪರ್ಯಾಪ್ತ ಸಮಯ ಸಿಗಬೇಕು. ಇನ್ನು ಉಳಿದ ಸೂತ್ರ ನಮಗೆ ಮುಂದಿನ ಜನ್ಮ ತೀರಿಸುವುದಾದರೆ ಸಾಯುವ ಅಧಿಕಾರ ಕೂಡ ಇದೆ. ದೇಹವಂತೂ ಹೋಗುವುದೆ. ಅದು ಹೋಗಲಿ, ಮುಗಿಯಲಿ. ವಾಸನೆ ಕ್ಷೀಣವಾಯಿತು. ಮನಸ್ಸಿನ ಅಹಂಕಾರ ಹೋಯಿತು, ಆತ್ಮದ ಸಾಕ್ಷಾತ್ಕಾರವಾಯಿತು. ವಯಸ್ಸಿಗೆ ಬಂದ ಮಗ ಸತ್ತು ಹೋದರೂ ಚಿಂತೆಯಿಲ್ಲ. ಇದು ವೇದ-ಉಪನಿಷತ್ತು-ಗೀತೆಯ ಸ್ವಾರಸ್ಯ. ಅದರ ಸಾರ ತೆಗೆದಿದ್ದೇನೆ.

* * *

ಪರ್ವತಸ್ಯ ಮೂರ್ಧನಿ ಸದಂತಾ

ಪರ್ವತ ಶಿಖರದ ಮೇಲೆ ಕುಳಿತುಕೊಳ್ಳುವವರು ಕೆಳಗಿನ ಸಮಾಜವನ್ನು ನೋಡುತ್ತಾರೆ. ಯಾರು ಜ್ಞಾನಿಗಳು ಆಗಿರುತ್ತಾರೋ ಅವರು ಮೇಲೆ ಪರ್ವತ ಶಿಖರದ ಮೇಲೆ ಕುಳಿತುಕೊಳ್ಳುವವರಿಗೆ ಸಮಾನವಾಗಿ ಆಲಿಪ್ತವಾಗಿರುತ್ತಾರೆ.

* * *

ಗೂಳೂಹಂ ಜ್ಯೋತಿಃ ಪಿತರೊ ಅನ್ವಿಂದನ್

ನಮ್ಮ ಪಿತ್ರರು ಜ್ಯೋತಿಯ ಶೋಧನೆ ಮಾಡಿದ್ದರು. ಹೃದಯದಲ್ಲಿರುವ ಆ ಗೂಢ ಜ್ಯೋತಿಯ ಶೋಧನೆ.

ವೇದದಲ್ಲಿ ವಸಿಷ್ಠ ಋಷಿಯ ಸೂಕ್ತವಿದೆ. ಅದರಲ್ಲಿ ಕಪ್ಪೆರೂಪದ ದೇವತೆಯ ಸ್ತುತಿಯಿದೆ–

ಗೋಮಾಯುರೇಕೊ ಅಜಮಯುರೇಕಃ ಪೃಶ್ನಿರೋಕೊ ಹರಿತ ಏಕ ಏಷಾಮ್
ಸಮಾನಂ ನಾಮ ಬಿಭ್ರತೊ ವಿರೂಪಾಃ ಪುರೂತ್ರಾ ವಾಚಂ ಪೀಪಶುರ್ವದಂತಃ
ಬ್ರಾಹ್ಮಣಾಸೊ ಅತಿರಾತ್ರೆ ನ ಸೋಮೆ ಮರೊನ ಪೂರ್ಣಮಭಿತೊ ವದಂತಃ
ಸಂವತ್ಸರಸ್ಯ ತದಹಃ ಪರಿ ಷ್ಠ ಯನ್ಮಂಡೂಕಾಃ ಪ್ರಾವೃಷೀಣಂ ಬಭೂವ

ಒಂದು ಕಪ್ಪೆ ಹಸುವಿನಂತೆ ಮಾತನಾಡುತ್ತದೆ, ಒಂದು ಕಪ್ಪೆ ಕುರಿಯಂತೆ ಮಾತನಾಡುತ್ತದೆ. ಒಂದು ಕಪ್ಪೆ ಬಣ್ಣ ತುಂಬ ಸುಂದರವಾಗಿದೆ. ಒಂದು ಕಪ್ಪೆ ಚಿತ್ರ ವಿಚಿತ್ರವಾಗಿದೆ. ಒಂದು ನೀಲಿ ಇದೆ. ಒಂದು ಹಳದಿ ಇದೆ. ಈ ರೀತಿ ಭಿನ್ನ ಭಿನ್ನ ರೂಪ ಧರಿಸಿವೆ. ಪರಂತೂ ಎಲ್ಲರು ಹೆಸರು ಒಂದೇ ಇದೆ. ಯಾವಾಗ ಅವು ಕೂಗಾಡುತ್ತವೊ, ಡಾವ್ ಡಾವ್ ಅನ್ನುತ್ತವೊ, ಆಗ ಬ್ರಾಹ್ಮಣರು ವೇದ ಘೋಷ ಮಾಡುತ್ತಿದ್ದಾರೆ ಎಂದು ಭಾಸವಾಗುತ್ತದೆ. ಬೇಸಿಗೆಯಲ್ಲಿ ಅವು ಒಣಗುತ್ತವೆ, ತಪಸ್ವಿ ಬ್ರಾಹ್ಮಣರಂತೆ. ಮಳೆಯಾದರೆ ಉತ್ಸಾಹಿತವಾಗುತ್ತವೆ. ಮತ್ತು ಆನಂದದಿಂದ ಕೂಗುತ್ತವೆ. ಈ ರೀತಿ ಕಪ್ಪೆಯ ಬಗ್ಗೆ ದೊಡ್ಡ ಸೂಕ್ತವಿದೆ. ಕಪ್ಪೆಯ ಕಡೆಗೆ ನೋಡುವ ಆಧ್ಯಾತ್ಮಿಕ ದೃಷ್ಟಿ. ವಸಿಷ್ಠ ಋಷಿ ಹಾಡುತ್ತಾರೆ. ಒಂದು ವೇಳೆ ಅಕಾಲ ಉಂಟಾದರೆ ವಸಿಷ್ಠ ಋಷಿಯ ಮಂಡೂಕ ಸೂಕ್ತವನ್ನು ಹಾಡಿದ್ದಲ್ಲಿ ಮಳೆಯಾಗುತ್ತದೆಂಬ ಶ್ರದ್ಧೆ ನಮ್ಮ ಜನರಲ್ಲಿದೆ. ಇದು ಮುಗ್ಧ ಶ್ರದ್ಧೆಯೇನೊ ಹೌದು. ಆದರೆ ಪ್ರಾಚೀನಕಾಲದಿಂದ ನಡೆದು ಬಂದಿದೆ. ಯಾರಾದರೂ ಭಕ್ತರು ಈ ಸೂಕ್ತವನ್ನು ಹೇಳಿದರೆ ಮಳೆ ಬರುತ್ತದೆ.

ಉಪನಿಷತ್ತುಗಳಲ್ಲಿ ಕೂಡ ಶ್ರೇಷ್ಠ ಉಪನಿಷತ್ ಎಂದು ಮಾಂಡೂಕ್ಯ ಉಪನಿಷತ್ತನ್ನು ಮಾನ್ಯ ಮಾಡಲಾಗುತ್ತದೆ. ಮಾಂಡೂಕ್ಯ ಅಂದರೆ ಕಪ್ಪೆಯ ಉಪನಿಷತ್. ಕಪ್ಪೆಗಿರುವ ಮಹತ್ವ ಇದರಿಂದ ನಮ್ಮ ಗಮನಕ್ಕೆ ಬರುತ್ತದೆ. ಕಪ್ಪೆಯ ಬಗ್ಗೆ ಇಷ್ಟೊಂದು ಗೌರವವನ್ನು ನಮ್ಮ ಜನ ಇಟ್ಟಿದ್ದರು. ಏಕೆಂದರೆ ಕಪ್ಪೆಗಳು ಹೊಲದ ರಕ್ಷಣೆ ಮಾಡುತ್ತವೆ. ಆದ್ದರಿಂದ ಕಪ್ಪೆಗಳ, ಹಕ್ಕಿಗಳ ಉಪಯೋಗವೇನಿದೆ ಮುಂತಾದವುದರ ಬಗ್ಗೆ ಚಿಂತನೆ ಮಾಡಬೇಕು.

(ಮುಂದುವರಿಯುವುದು...)

* * *

ಜನಪದ ಸೇವಾ ಟ್ರಸ್ಟ್ ಸಮಾಚಾರ

ಬೆಂಗಳೂರಿನ ಬಸವನಗುಡಿಯಲ್ಲಿಯ ನ್ಯಾಷನಲ್ ಕಾಲೇಜಿನ ಮೂವತ್ತು ವಿದ್ಯಾರ್ಥಿಗಳು, ಇವರೆಲ್ಲರೂ ಗಾಂಧೀ ಅಧ್ಯಯನದಲ್ಲಿ ಡಿಪ್ಲಮೊ ಮಾಡಿದವರಾಗಿದ್ದಾರೆ. ಇವರು ಟ್ರಸ್ಟಿಗೆ ಭೇಟಿ ಕೊಟ್ಟರು. ಟ್ರಸ್ಟಿನ ಕಾರ್ಯಕಲಾಪ ತಿಳಿದುಕೊಂಡರು. ಇವರೊಂದಿಗೆ ಮಾರ್ಗದರ್ಶಕರಾಗಿ ಡಾ॥ಟಿ.ಪದ್ಮ ಬಂದಿದ್ದರು.

ಟ್ರಸ್ಟಿನ ಅಭಿಮಾನಿ ಆನಂದ ಬಾಟ್ನಿ, ಪಿರಿಯಾಪಟ್ಟಣದಿಂದ ಪತ್ರಕರ್ತರಾದ ಕಂಪ್ಲಾಪುರ ಮೋಹನ್, ಎಚ್.ವೈ.ನಂಜುಂಡಸ್ವಾಮಿ ಭೇಟಿ ಕೊಟ್ಟರು.

ಸಹೃದಯರ ಬಳಗದ ಆಶ್ರಯದಲ್ಲಿ ತಿಂಗಳ ಕಾರ್ಯಕ್ರಮ ಏರ್ಪಡಿಸಲಾಗಿತ್ತು. ಈ ಕಾರ್ಯಕ್ರಮದಲ್ಲಿ ಮೈಸೂರಿನ ಡಾ.ಬಿ.ಪಿ.ಇಂದಿರಾ 'ಒಳ್ಳೆಯ ಸಮಾಜ ನಿರ್ಮಾಣದಲ್ಲಿ ತಾಯಿಯ ಪಾತ್ರ' ಎಂಬ ವಿಷಯವಾಗಿ ಮಾತನಾಡಿದರು.ಕಾರ್ಯಕ್ರಮ ಯಶಸ್ವಿಯಾಗಿ ನಡೆಯಿತು. ಟ್ರಸ್ಟಿನ ಅಭಿಮಾನಿ ವಿಶ್ವನಾಥ್‌ರವರು ತಮ್ಮ ಸಂಬಂಧಿಕರೊಂದಿಗೆ ಭೇಟಿ ಕೊಟ್ಟರು.

ಟ್ರಸ್ಟಿನ ಮುಖಪತ್ರಿಕೆಯಾದ ಜನಪದ ವಿಚಾರವು ತನ್ನ ಹನ್ನೊಂದು ವರ್ಷಗಳ ಪ್ರಕಟಣಾ ವರ್ಷವನ್ನು ಮುಗಿಸಿ ಇದೇ ಆಗಸ್ಟ್ ತಿಂಗಳಲ್ಲಿ ಹನ್ನೆರಡನೇ ವರ್ಷಕ್ಕೆ ಕಾಲಿಡುತ್ತಿದೆ. ಪತ್ರಿಕೆಯು ಈಗ ನಾಲ್ಕು ನೂರು ಚಂದಾದಾರನ್ನು ಹೊಂದಿದೆ. ಮೊದಲನೆಯ ಸಂಪುಟ ಪ್ರಕಟವಾಗಿದ್ದಾಗ ಕೇವಲ ನೂರು ಜನ ಚಂದಾದಾರರಿದ್ದರು. ಪತ್ರಿಕೆಯು ಚಂದಾದಾರನ್ನು ಅವಲಂಬಿಸಿ ಪ್ರಕಟಗೊಳ್ಳುತ್ತಿದೆ. ಜಾಹೀರಾತನ್ನು ಹೆಚ್ಚಾಗಿ ಅವಲಂಬಿಸಿಲ್ಲ. ಪತ್ರಿಕೆಯ ಬಗ್ಗೆ ಸದಭಿಪ್ರಾಯವಿರುವುದು ಸಂತೋಷದ ಸಂಗತಿ.

ಕಳೆದ ಸಂಚಿಕೆಯಲ್ಲಿ ಜನಪದ ನಿಲಯದ ಅಂತರಂಗದಲ್ಲಿ ಅಂಕಣದಲ್ಲಿ ಕಳೆದ ಐವತ್ತು ವರ್ಷಗಳಲ್ಲಿ ಟ್ರಸ್ಟಿಗಾಗಿ ಸೇವೆಸಲ್ಲಿಸಿದ ಧರ್ಮದರ್ಶಿಗಳ ಸೇವೆಯನ್ನು ಕೃತಜ್ಞತಾ ಭಾವನೆಯಿಂದ ಸ್ಮರಿಸಲಾಗಿತ್ತು. ಆದರೆ ಕಣ್ಣುತಪ್ಪಿನಿಂದಾಗಿ ಟ್ರಸ್ಟಿನ ಹಿರಿಯ ಧರ್ಮದರ್ಶಿಗಳಲ್ಲಿ ಒಬ್ಬರಾದ ಶ್ರೀ ಇ.ಪಿ.ಮೆನನ್‌ರ ಹೆಸರು ದಾಖಲಾಗದೆ ಉಳಿದು ಹೋಗಿತ್ತು. ಈ ತಪ್ಪಿಗಾಗಿ ವಿಷಾದವಿದೆ. ಶ್ರೀ ಇ.ಪಿ.ಮೆನನ್‌ರವರು ಟ್ರಸ್ಟ್ ಅಧ್ಯಕ್ಷರಾಗಿ ಹಲವಾರು ವರ್ಷ ಕೆಲಸ ಮಾಡಿದ್ದಾರೆ ಎಂದು ತಿಳಿಸುವುದರ ಮೂಲಕ ತಿದ್ದುಪಡಿಯನ್ನು ಮಾಡಲಾಗಿದೆ.


೨೦೧೧ ಜೂನ್ ಮಾಹೆಯ ದಾನಿಗಳು

ಶ್ರೀಮತಿ ಹೆಚ್.ಎಸ್.ಅಪರ್ಣ, ಡಾ॥ಟಿ.ಪದ್ಮಾ, ಶ್ರೀ ಬಿ.ಎಸ್.ಹರಿ, ಶ್ರೀ ಸಿ.ಪಿ.ಭಗವಾನ್, ಶ್ರೀ ಆರ್.ಎಸ್.ಕಾಗಲಕರ್ – ಬೆಂಗಳೂರು; ಶ್ರೀ ಕೆ.ರಮೇಶ್‌ರಾವ್ – ಮಂಗಳೂರು
ಶ್ರೀ ಧನರಾಜ್, ಶ್ರೀ ಹನುಮೇಗೌಡ – ಕ್ರವಣಪುರ; ಶ್ರೀಮತಿ ಲಾಲಾಪ್ರಕಾಶ್, ಶ್ರೀಮತಿ ಶಾಂತಬೋರಯ್ಯ – ನಗುವಿನಹಳ್ಳಿ; ಶ್ರೀ ಸಿ.ಕೃಷ್ಣ – ರಾಮನಾಥಪುರ; ನಬಾರ್ಡ್– ಮಂಡ್ಯ

ಇವರಿಗೆ ಮತ್ತು ಸಂಸ್ಥೆಯ ಎಲ್ಲ ಮಾಹೆಯಾನ ದಾನಿಗಳಿಗೆ ಟ್ರಸ್ಟ್ ತನ್ನ ಕೃತಜ್ಞತೆಯನ್ನು ಸಮರ್ಪಿಸುತ್ತದೆ.

ಜನಪದ ನಿಲಯದ ಅಂತರಂಗದಲ್ಲಿ.. ೬೩

- ಸುರೇಂದ್ರ ಕೌಲಗಿ



ಜನಪದ ನಿಲಯಕ್ಕೆ ತನ್ನದೇ ಆದ ಹಿರಿಮೆ-ಗರಿಮೆಗಳಿವೆ. ಅದು ಜನಪದ ಸೇವಾ ಟ್ರಸ್ಟಿನ ಜನ್ಮಸ್ಥಳವೆಂಬ ಕಾರಣಕ್ಕಲ್ಲ. ಆ ನಿಲಯಕ್ಕೆ ತನ್ನದೇ ಆದ ಇತಿಹಾಸ ಮತ್ತು ಆಂತರಿಕ ಸಂಸ್ಕಾರ ಇರುವ ಕಾರಣಕ್ಕಾಗಿ. ಸುಮಾರು ಎಂಭತ್ತು ವರ್ಷಗಳಷ್ಟು ಹಳೆಯದಾದ ಈ ನಿಲಯದ ಪೂರ್ವೇತಿಹಾಸವನ್ನು ತಿಳಿಸಲು ಈ ಮನೆಯ ಹಿರಿಯ ಮಗನಾದ ಪಿ.ನರಸಿಂಹರಂಗನ್ ಅವರೇ ಯೋಗ್ಯರಾದ ವ್ಯಕ್ತಿ. ಏಕೆಂದರೆ ಅವರಿಗೆ ತಮ್ಮ ತಾತ, ಅಜ್ಜಿ, ತಂದೆ ಮತ್ತು ತಾಯಿಗಳ ಬಗ್ಗೆ ಚೆನ್ನಾಗಿ ಗೊತ್ತಿದೆ. ಅಲ್ಲದೆ ಮೂಲತಃ ಇವರ ವಂಶದವರು ಆಂಧ್ರಪ್ರದೇಶದ ಪೆನಗೊಂಡೆಯವರು. ಅಲ್ಲಿಂದ ಕರ್ನಾಟಕಕ್ಕೆ ಬಂದು ಶ್ರೀವೈಷ್ಣವ ಕ್ಷೇತ್ರವಾದ ಮೇಲುಕೋಟೆಯಲ್ಲಿ ನೆಲೆಸಲು ಉಂಟಾದ ಕಾರಣಗಳನ್ನು ಅವರು ಸಮರ್ಪಕವಾಗಿ ತಿಳಿಸಬಲ್ಲರು. ಅವರಿಗೆ ಆ ಸಾಮರ್ಥ್ಯವೂ ಇದೆ. ಪಿ.ಎನ್.ರಂಗನ್ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ತಮ್ಮ ಮೌಲಿಕ ಕೃತಿಗಳ ಮೂಲಕ ಮಹತ್ವದ ಸ್ಥಾನವನ್ನು ಪಡೆದಿದ್ದಾರೆ. 'ಘನು' ಎಂಬ ಕಾವ್ಯನಾಮದಿಂದ ಕನ್ನಡ ಸಾಹಿತ್ಯ ಪ್ರಿಯರಿಗೆ ಪರಿಚಿತರಾಗಿದ್ದಾರೆ. ಅವರ ಧಾರಾವಾಹಿಗಳು ಕನ್ನಡದ ಜನಪ್ರಿಯ ವಾರ ಪತ್ರಿಕೆಗಳಾದ ಸುಧಾ ಮತ್ತು ತರಂಗ ಮುಂತಾದವುಗಳಲ್ಲಿ ಪ್ರಕಟವಾಗಿವೆ. ಧಾರಾವಾಹಿಗಳು ಚಲನಚಿತ್ರಗಳೂ ಆಗಿವೆ. ವಿಶೇಷವೇನೆಂದರೆ ರಂಗನ್‌ರವರು ಮೂಲತಃ ವಾಹನ ವಿಜ್ಞಾನದಲ್ಲಿ ತಂತ್ರಜ್ಞಾನಿ. ವೋಲ್ವೋ ಅಂಥ ಕಂಪನಿಗಳಿಗೆ ತಾಂತ್ರಿಕ ವಿಷಯದಲ್ಲಿ ಮಾರ್ಗದರ್ಶಕರಾಗಿ ಕೆಲಸ ಮಾಡಿದ್ದಂಥವರು. ಸಂಸ್ಕೃತ ಭಾಷೆಯನ್ನು ಸಾಕಷ್ಟು ಅಧ್ಯಯನ ಮಾಡಿದ್ದಾರೆ. ಇವರ ಜೀವನ ದೃಷ್ಟಿ ವೈಜ್ಞಾನಿಕತೆ ಮತ್ತು ಸಾಹಿತ್ಯ ಎರಡನ್ನು ಮೇಳೈಸಿಕೊಂಡಿದೆ. ಜೀವನದ ಬಗ್ಗೆ ಸಕಾರಾತ್ಮಕವಾದ ಆಧ್ಯಾತ್ಮಿಕ ಅಭಿಪ್ರಾಯಗಳನ್ನು ಹೊಂದಿದ್ದಾರೆ. ಯಾವುದೇ ಒಂದು ವಿಷಯದ ಬಗ್ಗೆ ವಿಶ್ಲೇಷಣಾತ್ಮಕ ತರ್ಕಗಳಿಂದ ಮಾತನಾಡುವ ಸಾಮರ್ಥ್ಯ ಹೊಂದಿದ್ದಾರೆ. ಇಂಥ ಸಾಮರ್ಥ್ಯಗಳಿಂದಾಗಿ ಪ್ರಾಚೀನ ಭಾರತೀಯ ಸಾಹಿತ್ಯಾಧಾರದ ಮೇಲೆ ಮಹಾಸಂಪರ್ಕದಂಥ ಎರಡು ಸಂಪುಟ ಗ್ರಂಥವನ್ನು ರಚಿಸಲು ಸಮರ್ಥರಾಗಿದ್ದಾರೆ. ಆ ಗ್ರಂಥ ಇಂಗ್ಲಿಷ್‌ನಲ್ಲೂ ಅನುವಾದಗೊಂಡಿದೆ. ಭಾರತೀಯ ಇತರ ಭಾಷೆಗಳಿಗೂ ಅನುವಾದಗೊಳ್ಳುವ ಸಾಧ್ಯತೆಯಿದೆ. ರಂಗನ್‌ರವರ ಇನ್ನೊಂದು ಪುಸ್ತಕ ಬೆಳಕು ಕಂಡಿದೆ. ಅದು 'ದ ಥರ್ಟೀಟು ಸೀಕ್ರೆಟ್ಸ್'. ಋಷಿ ಭಾರದ್ವಾಜರು ತಮ್ಮ ವೈಮಾನಿಕ ಪ್ರಕರಣ ಎಂಬ ಕೃತಿಯಲ್ಲಿ ಪ್ರಸ್ತಾಪಿಸಿದ್ದನ್ನು ಆಧಾರವಾಗಿಟ್ಟುಕೊಂಡು ರಂಗನ್‌ರವರು ಈ ಪುಸ್ತಕ ಬರೆದಿದ್ದಾರೆ. ಇಂಥ ಓರ್ವ ಚಿಂತಕ, ಸಾಹಿತಿ ಮತ್ತು ವಿಜ್ಞಾನಿ ಪುತ್ರನನ್ನು ಪಡೆದ ಮೇಲುಕೋಟೆ ಹೆಮ್ಮೆ ಪಡಬೇಕಾದುದು ಸಹಜ. ಆದರೆ ಜನಪದ ನಿಲಯದ ಸುಪುತ್ರ ಇವರು ಎಂಬುದು ವಿಶೇಷ ಹೆಮ್ಮೆಯ ಸಂಗತಿಯಾಗಿದೆ. ಈ ಕಾರಣಕ್ಕಾಗಿಯೇ ಜನಪದ ನಿಲಯಕ್ಕೆ ತನ್ನದೇ ಆದ ಹಿರಿಮೆ ಗರಿಮೆಗಳಿವೆ ಎಂದು ಅಭಿಮಾನದಿಂದ ಪ್ರಸ್ತಾಪಿಸಿದ್ದು. ರಂಗನ್‌ರವರು ಮೈಸೂರಿನ ಬೋಗಾದಿ ಬಳಿ ಆಶ್ರಮ ಸದೃಶ ಕೇಂದ್ರವೊಂದನ್ನು ಮಾಡಿಕೊಂಡು ಸಾಹಿತ್ಯ ಕೃಷಿ ಮತ್ತು ಸಂಶೋಧನಾ ಪ್ರಬಂಧ ರಚನೆಯಲ್ಲಿ ತೊಡಗಿಕೊಂಡಿದ್ದಾರೆ. ಜನಪದ ಸೇವಾ ಟ್ರಸ್ಟ್‌ನ ತನ್ನ ಐವತ್ತನೇ ವರ್ಷದ ಸೇವಾ ಪಯಣದ ಸಮಯದಲ್ಲಿ ನಿಲಯದ ಸುಪುತ್ರ ವಿ.ನರಸಿಂಹರಂಗನ್‌ರವರನ್ನು ಜ್ಞಾಪಿಸಿಕೊಳ್ಳುವುದಕ್ಕೆ ಮತ್ತು ನಿಲಯದ ವಾಚಕರಿಗೆ ತಿಳಿಸುವುದಕ್ಕೆ ಸಂತೋಷವೆನಿಸುತ್ತದೆ. (ಮುಂದುವರಿಯುವುದು...)

ಸರ್ವೋದಯ ಆಂದೋಲನದ ಮುನ್ನಡೆ

ಗದಗ್ ಜಿಲ್ಲೆಯಲ್ಲಿ ಪೋಸ್ಕೋ ಎಂಬ ವಿದೇಶಿ ಕಂಪನಿ ಉಕ್ಕಿನ ಕಾರ್ಖಾನೆ ಸ್ಥಾಪಿಸಲು ಪ್ರಯತ್ನಿಸಿತು. ಅದಕ್ಕಾಗಿ ಸರ್ಕಾರ ಕೊಡಮಾಡಿದ ಭೂಮಿ ಫಲವತ್ತತೆಯಿಂದ ಕೂಡಿದುದಾಗಿದೆ. ಜಮೀನು ಕಳೆದುಕೊಳ್ಳುವ ರೈತರು ಪ್ರತಿಭಟನೆಗೆ ಇಳಿದರು. ಪ್ರತಿಭಟನೆಗೆ ಇಳಿದ ರೈತರನ್ನು ಭೇಟಿ ಮಾಡಿ ವಿಷಯ ತಿಳಿದುಕೊಳ್ಳಲು ಹಾಗೂ ಪ್ರತಿಭಟನಾನಂತರದ ಕಾರ್ಯಕ್ರಮದ ಬಗ್ಗೆ ವಿಚಾರ ವಿನಿಮಯ ಮಾಡಲು ಕರ್ನಾಟಕ ಸರ್ವೋದಯ ಮಂಡಲದ ಅಧ್ಯಕ್ಷರು ಗದಗ್ ಜಿಲ್ಲಗೆ ಭೇಟಿಕೊಟ್ಟರು. ವಿವಾದದ ಕೇಂದ್ರ ಸ್ಥಾನವಾಗಿದ್ದ ಗುಡಿಹಳ್ಳಿಗೂ ಭೇಟಿಕೊಟ್ಟರು. ಪೊಸ್ಕೋ ಕಂಪನಿಯಂತೂ ಹೋಗಿದೆ. ಆದರೆ ಮುಂದೆ ಬೇರೆ ಸಂದರ್ಭದಲ್ಲಿ ಬೇರೆ ಪ್ರಕಾರದ ಕಂಪನಿ ಬರಬಹುದು. ಒಟ್ಟಾರೆ ಭೂಮಿ ಆಕ್ರಮಣದ ಪರಿಸ್ಥಿತಿ ಬರದಂತೆ ಕೈಗೊಳ್ಳಬೇಕಾದ ಶಾಶ್ವತ ಕ್ರಮಗಳ ಬಗ್ಗೆ ಅಧ್ಯಕ್ಷರು ರೈತರೊಂದಿಗೆ ಚರ್ಚಿಸಿದರು. ಆ ಪ್ರದೇಶದಲ್ಲಿ ಸರ್ವೋದಯ ವಿಚಾರ ಆಧಾರಿತ ರಚನಾತ್ಮಕ ಕಾರ್ಯಗಳನ್ನು ಪ್ರಾರಂಭಿಸುವ ಸಾಧ್ಯತೆ ಬಗ್ಗೆ ವಿಚಾರ ವಿನಿಮಯ ನಡೆಸಿದರು. ಅಲ್ಲಿಯ ಚಳುವಳಿಯ ನೇತಾರರಾಗಿರುವ ತೋಂಟದಾರ್ಯ ಮಠದ ಶ್ರೀ ಸಿದ್ಧಲಿಂಗ ಸ್ವಾಮೀಜಿಯವರನ್ನು ಭೇಟಿ ಮಾಡಿದರು. ಇದೇ ಚಳುವಳಿಯ ಉದ್ದೇಶ್ಯಕ್ಕಾಗಿ ಮಠದಲ್ಲಿ ಸಮಾವೇಶಗೊಂಡಿದ್ದ ಸುಮಾರು ಅರವತ್ತು ಸ್ವಾಮಿಗಳ ಸಮಾವೇಶದಲ್ಲಿ ಕೂಡ ಅಧ್ಯಕ್ಷರು ಮಾತನಾಡಿದರು. ಆ ಪ್ರದೇಶದಲ್ಲಿ ಕೈಗೊಳ್ಳಬಹುದಾದ ಕಾರ್ಯಕ್ರಮಗಳ ಬಗ್ಗೆ ಸರ್ವೋದಯ ಮಂಡಲಿಯಲ್ಲಿ ಚರ್ಚಿಸಿ ಕ್ರಮ ಕೈಗೊಳ್ಳಬಹುದು.

ರಾಜ್ಯದ ಮೂವತ್ತು ಜಿಲ್ಲೆಗಳಲ್ಲಿ ಜಿಲ್ಲಾ ಸರ್ವೋದಯ ಮಿತ್ರ ಮಂಡಲಿಗಳ ರಚನಾ ಅಭಿಯಾನವನ್ನು ಕೈಗೊಳ್ಳಲಾಗಿದೆ. ಅದರ ಅಂಗವಾಗಿ ಪ್ರಥಮವಾಗಿ ಮಂಡ್ಯ ಜಿಲ್ಲೆಯ ಸರ್ವೋದಯ ಮಿತ್ರ ಮಂಡಲಿ ರಚಿಸಲಾಗಿದೆ. ಈ ಮಿತ್ರ ಮಂಡಲಿಯಲ್ಲಿ ಹನ್ನೆರಡು ಜನ ಸದಸ್ಯರಿದ್ದಾರೆ. ಈ ಸಮಿತಿಯ ಅಧ್ಯಕ್ಷರಾಗಿ ಶ್ರಿ ಎಂ.ಬಿ.ಬೋರೇಗೌಡರು ಆಯ್ಕೆಗೊಂಡಿದ್ದಾರೆ. ಕ್ರಮೇಣ ಜಿಲ್ಲೆಯ ಎಲ್ಲ ತಾಲ್ಲೂಕುಗಳಲ್ಲಿ ಘಟಕಗಳನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ. ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲೂ ಸಹ ಸರ್ವೋದಯ ಮಿತ್ರ ಮಂಡಲಿ ಸ್ಥಾಪಿಸಲಾಗಿದೆ. ಇದರಲ್ಲಿ ಈಗ ೨೪ ಸದಸ್ಯರಿದ್ದಾರೆ. ಅಧ್ಯಕ್ಷರಾಗಿ ಶ್ರೀ ಹರಿಕೃಷ್ಣ ಪುನುರೂರ್, ಸಂಚಾಲಕರಾಗಿ ಶ್ರೀ ನಾಮದೇವ ಶಣೈ, ಉಪಾಧ್ಯಕ್ಷರಾಗಿ ಶ್ರೀ ಶುಭೋದಯ ಕೂಡ್ಲು ಹಾಗೂ ಎ.ವೆಂಕಟೇಶ್, ಖಜಾಂಚಿಯಾಗಿ ಶ್ರಿ ಎಂ.ನಾಗರಾಜ್, ಪ್ರಧಾನ ಕಾರ್ಯದರ್ಶಿಯಾಗಿ ಯಶವಂತ್.ಕೆ ಜೊತೆ ಕಾರ್ಯದರ್ಶಿಗಳಾಗಿ ಶ್ರೀ ರಮಾನಾಥ್ ಕೋಟೆಕಾರ್, ಶ್ರಿ ಜಗದೀಶ್‌ಶೆಟ್ಟಿ–ಯುವವಿಭಾಗ, ಶ್ರೀಮತಿ ಜಯಶ್ರೀ ರೈ–ಮಹಿಳಾ ವಿಭಾಗ, ಈ ರೀತಿ ಜಿಲ್ಲೆಯ ಸಂಘಟನೆಯಾಗಿದೆ. ಈ ಜಿಲ್ಲೆಗಳ ಸರ್ವೋದಯ ಮಿತ್ರಮಂಡಲಿಗಳ ಸಂಘಟನೆಗೆ ನೆರವಾಗಲು ಸರ್ವೋದಯ ಮಂಡಲಿ ಅಧ್ಯಕ್ಷರು ಮಂಗಳೂರಿಗೆ ಹೋಗಿದ್ದರು. ಸಧ್ಯದಲ್ಲಿಯೇ ಹಾಸನ ಮತ್ತು ತುಮಕೂರು ಜಿಲ್ಲೆಗಳಲ್ಲಿ ಸರ್ವೋದಯ ಮಿತ್ರ ಮಂಡಲಿ ಸ್ಥಾಪಿಸಲು ಪ್ರಯತ್ನಿಸಲಾಗುತ್ತಿದೆ.

ಬಾಂಧವ್ಯ

ಜನಪದ ವಿಚಾರವು ಚಂದಾದಾರರೊಂದಿಗಿನ

ತನ್ನ ಬಾಂಧವ್ಯವನ್ನು ಸದಾಸ್ಮರಿಸುತ್ತದೆ.

ಶ್ರೀ ಎಚ್.ಎಲ್.ಎನ್.ಶಾಸ್ತ್ರಿ, ಶ್ರೀ ಆನಂದರಾವ್ ಬಾಟ್ನಿ,
ಡಾ॥ ರಾಜೇಂದ್ರ, – ಮೈಸೂರು
ಶ್ರೀ ಸುರೇಶ್ ಕಲಘಟಗಿ, ಶ್ರೀಮತಿ ರೇಣುಕಾಪ್ರಸಾದ್ – ಬೆಂಗಳೂರು
ಶ್ರೀ ಅನಂತ ಪೂಜಾರ್ – ಬಾದಾಮಿ
ಶ್ರೀಮತಿ ಪ್ರಭಾವೆಂಕಟೇಶ್ – ದಾವಣಗೆರೆ
ಶ್ರೀಮತಿ ರುಕ್ಮಿಣಿ.ಎಸ್ – ಕುಣಿಗಲ್
ಶ್ರೀ ತಮ್ಮಣ್ಣ ಬುದನಿ – ಬಾಗಲಕೋಟೆ

ಇವರು ಪತ್ರಿಕೆಯ ಚಂದಾ ನವೀಕರಿಸಿದ್ದಕ್ಕಾಗಿ ಹಾಗೂ ಹೊಸದಾಗಿ ಪತ್ರಿಕೆಗೆ ಚಂದಾದಾರರಾದ,

ಶ್ರೀ ಬಾಪು ಹೆದ್ದೂರಶೆಟ್ಟಿ, ಶ್ರೀ ಎನ್.ಪ್ರಭಾಕರ್ – ಬೆಂಗಳೂರು
ಶ್ರೀ ಕೊಕ್ಕಡ ವೆಂಕರಮಣಭಟ್ – ಮಂಡ್ಯ
ಮುಖ್ಯೋಪಾಧ್ಯಾಯರು, ಜನತಾ ಹಿರಿಯ ಪ್ರಾಥಮಿಕ ಶಾಲೆ – ಅಡ್ಯನಡ್ಕ
ಡಾ॥ಎ.ವೆಂಕಟೇಶ್ – ಕುಕ್ಕಿಬೆಟ್ಟು : ಶ್ರೀ ಗಿರೀಶ್ ಭಾರದ್ವಾಜ್ – ಸುಳ್ಯ

ಇವರಿಗೆ ಜನಪದ ವಿಚಾರದ ಕೃತಜ್ಞತೆಗಳು.

"ಜನಪದ ವಿಚಾರ" ವೈಚಾರಿಕ ಮಾಸ ಪತ್ರಿಕೆಯನ್ನು ನೀವು ನೋಡಿದ್ದೀರಿ.

ಸಧ್ಯಕ್ಕೆ ಕರ್ನಾಟಕದಲ್ಲಿ ಗಾಂಧೀ ವಿಚಾರವನ್ನು, ಮುಖ್ಯವಾಗಿ ಸರ್ವೋದಯ ವಿಚಾರವನ್ನು ಜನತೆಗೆ ತಿಳಿಸುತ್ತಿರುವಂಥ ಪತ್ರಿಕೆ 'ಜನಪದ ವಿಚಾರ' ಒಂದೇ. ಈಗ ಭಾರತದಲ್ಲಿ ಮತ್ತು ವಿಶ್ವದ ಬೇರೆಡೆಯಲ್ಲಿ ಸಂಭವಿಸುತ್ತಿರುವ ಸಮಾಜ ಹಿತವಿರೋಧಿ ಬೆಳವಣಿಗೆಗಳನ್ನು ಸರಿಯಾಗಿ ವಿಶ್ಲೇಷಿಸಿ ಸರ್ವೋದಯ ಸಮಾಜ ರಚನೆಯ ಅಗತ್ಯವಿದೆಯೆಂದು ಜನತೆಗೆ ಮುಖ್ಯವಾಗಿ ಯುವಜನತೆಗೆ ತಿಳಿಸುವ ಮಹದ್ಕಾರ್ಯವನ್ನು ಮಾಡುವುದು ಇಂದಿನ ಯುಗಧರ್ಮವಾಗಿದೆ.

ಈ ಅಭಿಪ್ರಾಯವನ್ನು ಗಮನದಲ್ಲಿರಿಸಿಕೊಂಡು ಜನಪದ ವಿಚಾರಕ್ಕೆ ಯೋಗ್ಯವಾದ ಲೇಖನಗಳನ್ನು ಬರೆಯಬಲ್ಲ ಸಮಾನಮನಸ್ಕರ ಬಳಗವೊಂದನ್ನು ರೂಪಿಸಲು ಉದ್ದೇಶಿಸಿದ್ದೇವೆ. ನೀವು ಸಮಾನಮನಸ್ಕರಲ್ಲಿ ಒಬ್ಬರಾಗಿರುವುದರಿಂದ ಜನಪದ ವಿಚಾರದ ಲೇಖಕರ ಬಳಗಕ್ಕೆ ನಿಮ್ಮನ್ನು ಗೌರವಾನ್ವಿತ ಲೇಖಕರನ್ನಾಗಿ ಆಯ್ಕೆಮಾಡಿಕೊಳ್ಳಬಯಸಿದ್ದೇವೆ.

ನೀವು ತಿಂಗಳಿಗೆ ಒಂದು ಲೇಖನವನ್ನು ಅಥವಾ ಪ್ರಚಲಿತ ವಿಷಯಗಳ ಬಗ್ಗೆ ನಿಮ್ಮ ಪ್ರತಿಕ್ರಿಯೆಗಳನ್ನು ಬರೆದು ಆಯಾ ತಿಂಗಳ ೧೫ ನೇ ತಾರೀಖಿನೊಳಗೆ ಕಳುಹಿಸಿಕೊಡಬೇಕೆಂದು ಕೋರುತ್ತೇವೆ.

ಲೇಖನಗಳಲ್ಲಿಯ ವಿಚಾರಗಳಿಗೆ ಆಯಾ ಲೇಖಕರು ಹೊಣೆ

ತೆರೆದ–ಅಂಚೆ

KA / SK / MND / 470 / 2009-2011
Regd. no. KAR / KAN / 2000 / 3820

ಶ್ರೀಮತಿ/ ಶ್ರೀ...

....

....

jANAPADA VICHARA
Kannada Monthly Digest Edited Printed and Published by Surendra Koulagi at Janapada Seva Trust Melkote,
Dist- Mandya – 571431 Phone: 08236-316344 e-mail : janapada@yahoo.com web : janapada.net
…d at Sanketh, Mudrana, Melkote.